
ರಂಜನೆ ಬೋಧನೆ

ಲಂಕೇಶ್

ಡಿಸೆಂಬರ್ 23, 2009 ರೂ. 12/-

ಹೊಳೆಗೆ ಹೊಸನೀರು
ವಿಕ್ರಮ ವಿಸಾಜಿ





ಗಣಿ ಮಾಫಿಯಾ

ನಿಷ್ಕ್ರಿಯ ಕನ್ನಡಿಗರು



ಹವ್ಯಕ ದಂಪತಿಗಳು ಕಳಚಿದ ರಾಘ'ವೇಷ'

LC ಚುನಾವಣೆ ಕಾಂಗ್ರೆಸ್ ಮೇಲುಗೈ



ಮಂಗಳೂರು ಮಕ್ಕಳ ಕಳ್ಳರಿಗೆ ರಕ್ಷಣೆ

BBMP ವಾರ್ಡ್ ವಾರ್ ಮಹಾಲಕ್ಷ್ಮಿ ಲೇಔಟ್

ಯ ಕರ್ನಾಟಕದಿಂದ ಜಾಣಗೆರೆ ಕಿಕ್‌ಔಟ್?

ಲಿಬರ್ಹಾನ್ ವರದಿಯ ಇತಿ ಮತ್ತು ಮಿತಿ!

ಬಿಜೆಪಿಯನ್ನು ಸೋಲಿಸುವುದು ಮಾತ್ರ ಗುರಿಯಾಗಿರುವವರಿಗೆ ಲಿಬರ್ಹಾನ್ ಆಯೋಗ ಸಂತೋಷ ತರಬಹುದು. ಆದರೆ ಕೋಮುವಾದವನ್ನು ಬುಡಸಮೇತ ಕಿತ್ತುಹಾಕಿ ಈ ದೇಶವನ್ನು ಸೌಹಾರ್ದಯುತ ತಾಣವನ್ನಾಗಿ ಉಳಿಸಿಕೊಳ್ಳಬಯಸುವ ನಿಜವಾದ ಸೆಕ್ಯುಲಾರ್ ವಾದಿಗಳಿಗೆ ಲಿಬರ್ಹಾನ್ ವರದಿಯ ಪ್ರಮುಖಾಂಶಗಳು ನೆಮ್ಮದಿಯನ್ನು ನೀಡಿದರೂ ಅದರ ಮಿತಿಗಳು, ದೌರ್ಬಲ್ಯಗಳು ಮತ್ತು ಬೇಜವಾಬ್ದಾರಿ ಶಿಫಾರಸ್ಸುಗಳು ಆತಂಕವನ್ನೇ ಹುಟ್ಟಿಹಾಕುತ್ತವೆ.

ಬಾಬ್ರಿ ಮಸೀದಿ ನಾಶದ ಬಗ್ಗೆ ನ್ಯಾಯಮೂರ್ತಿ ಲಿಬರ್ಹಾನ್ ವರದಿ ಮಂಡಿಸಿ ಹೆಚ್ಚೂ ಕಡಿಮೆ ಮೂರು ವಾರಗಳೇ ಕಳೆಯುತ್ತಾ ಬಂದರೂ ಅದರ ಬಗ್ಗೆ ಗಂಭೀರವಾದ ಚರ್ಚೆ ಸಂಸತ್ತಿನಲ್ಲಾಗಲೀ, ಸಮಾಜದಲ್ಲಾಗಲೀ ಆಗುತ್ತಿಲ್ಲ. ಸಂಸತ್ತಿನಲ್ಲಂತೂ ಬಿಜೆಪಿಯ ಕೂಗುಮಾರಿ ಮತ್ತು ಬಾಯಿಬಡುಕ ಸಂಸತ್ ಸದಸ್ಯರಿಂದಾಗಿ ಈ ದೇಶದ ಪ್ರಜಾಸತ್ತೆಯ ಮೇಲೆ ಸ್ವಾತಂತ್ರ್ಯೋತ್ತರ ಇತಿಹಾಸ ಕಂಡ ಅತಿ ದೊಡ್ಡ ಆಂತರಿಕ ಆಕ್ರಮಣದ ಬಗ್ಗೆ ಕನಿಷ್ಠ ಪಕ್ಷ ಗಂಭೀರ ಚರ್ಚೆಯೂ ಆಗುವಂತೆ ಕಾಣುತ್ತಿಲ್ಲ.

ಇದು ನಿರೀಕ್ಷಿತವಾದದ್ದೇ! ಲಿಬರ್ಹಾನ್ ವರದಿಯ ಸಾರಾಂಶವನ್ನು ಅದರ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಬೇಕೆಂದರೆ ಏನಿಲ್ಲವೆಂದರೂ ಬಿಜೆಪಿ ಮತ್ತು ಅದರ ಗುರುಮಠವಾದ ಸಂಘಪರಿವಾರವನ್ನು ಬಹಿಷ್ಕರಿಸಬೇಕು. ಬಾಬ್ರಿ ಮಸೀದಿ ನಾಶವನ್ನು 1992ರ ಡಿಸೆಂಬರ್ 6ರಂದು ನಡೆದ ಒಂದು ಘಟನೆಯಾಗಿ ಮಾತ್ರ ಭಾವಿಸದೆ ಅದು ಸೆಕ್ಯುಲಾರ್ ರಾಜಕಾರಣದ ನೆರಳಲ್ಲೇ ಈ ದೇಶದ ಸೆಕ್ಯುಲಾರಿಸಂ ಮೇಲೆ ಒಂದು ದಶಕಕ್ಕೂ ಹೆಚ್ಚು ಕಾಲ ನಡೆದ ವ್ಯವಸ್ಥಿತ ದಾಳಿಯ ಕ್ಲೈಮಾಕ್ಸ್ ಎಂದು ಅರ್ಥಮಾಡಿಕೊಳ್ಳುವುದಾದರೆ, ಬಾಬ್ರಿಮಸೀದಿ ನಾಶದ ಪ್ರಕ್ರಿಯೆಯಲ್ಲಿ ಕಾಂಗ್ರೆಸ್ ಪಕ್ಷ ವಹಿಸಿದ ಪಾತ್ರಕ್ಕೂ ತಕ್ಕ ಶಿಕ್ಷೆಯಾಗಬೇಕು. ಹಾಗೆ ನೋಡಿದರೆ ಬಾಬ್ರಿ ಮಸೀದಿ ಉರುಳಿದ್ದು ಸಂಘಪರಿವಾರದ ಆಕ್ರಮಣಕಾರಿ ಹಿಂದುತ್ವವಾದ ಮತ್ತು ಕಾಂಗ್ರೆಸ್‌ನ ಮೃದು ಹಿಂದೂವಾದಗಳ ಜಂಟಿ ಕಾರ್ಯಕ್ರಮದಿಂದಲೇ. ಪರಧರ್ಮ ಸಹಿಷ್ಣುತೆ ಮತ್ತು ಸೌಹಾರ್ದದ ಪರಂಪರೆಯುಳ್ಳ ನಮ್ಮ ಸಮಾಜ ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ಅನಾಕ್ರಮಣಕಾರಿ, ಅಸಹಿಷ್ಣು ದ್ವೇಷ ರಾಜಕಾರಣವಾದ ಹಿಂದುತ್ವವಾದಿಗಳನ್ನು ಸಹಿಸಿಕೊಳ್ಳುವ, ಪ್ರೋತ್ಸಾಹಿಸುವ ಮತ್ತು ಅವರೊಂದಿಗೆ ಭಾಗವಹಿಸುವ ಮಟ್ಟಿಗೆ ಆಕ್ರಮಣಕಾರಿಯಾಗಿ ಬದಲಾದ ಸಂದರ್ಭವೂ ಸಹ ಬಾಬ್ರಿ ಮಸೀದಿ ನಾಶಕ್ಕೆ ಕಾರಣವಾಗಿತ್ತೆಂಬುದರಲ್ಲಿ ಸಂಶಯವಿಲ್ಲ. ಹೀಗಾಗಿ ಲಿಬರ್ಹಾನ್ ವರದಿ ಸಂಸತ್ತಿನಲ್ಲಿ ಹೋಗಲಿ ಸಮಾಜದಲ್ಲೂ ಗಂಭೀರವಾಗಿ ಚರ್ಚೆಯಾಗದೆ ಹೋಗುತ್ತಿರುವುದು ಎಲ್ಲಕ್ಕಿಂತ ಹೆಚ್ಚಿನ ಆತಂಕಕ್ಕೆ ಕಾರಣವಾದ ವಿಷಯವಾಗಿದೆ.

ಬಾಬ್ರಿ ಮಸೀದಿಯ ನಾಶಕ್ಕೆ ಕಾರಣವಾದ "ಸತ್ಯಸಂಗತಿಗಳನ್ನೂ ಮತ್ತು ಈ ಘಟನೆಗೆ ಕಾರಣವಾದ ಸಂದರ್ಭವೇನು" ಎಂಬುದರ ಬಗ್ಗೆ ವರದಿ ನೀಡುವುದು ಲಿಬರ್ಹಾನ್ ಆಯೋಗದ ಪ್ರಮುಖ ಕರ್ತವ್ಯವಾಗಿತ್ತು. ಆದರೆ ಬಾಬ್ರಿ ಮಸೀದಿ ನಾಶಕ್ಕೆ ಮುನ್ನ ರಾಮರಥ ಯಾತ್ರೆ ಇನ್ನಿತ್ಯಾದಿ ಸಂದರ್ಭದಲ್ಲಿ ಎಬ್ಬಿಸಲಾದ ದೊಂಬಿ ಮತ್ತು ಆಕ್ರಮಣಗಳಲ್ಲಿ ಸಂಘಪರಿವಾರ ಮಾತ್ರವಲ್ಲದೆ ಯಾವ್ಯಾವ ರಾಜಕೀಯ ಪಾತ್ರಧಾರಿಗಳು ಭಾಗವಹಿಸಿದ್ದರು ಮತ್ತು ಅದಕ್ಕೆ ಕಾರಣಗಳೇನು ಎಂಬ ಬಗ್ಗೆ ಲಿಬರ್ಹಾನ್ ತಲೆಯನ್ನೇ ಕೆಡಿಸಿಕೊಂಡಿಲ್ಲ. ಏಕೆಂದರೆ ಬಾಬ್ರಿ ಮಸೀದಿ ನಾಶದ ಧಿಗ್ಭ್ರಾಂತಿಯಿಂದ ಚೇತರಿಸಿಕೊಳ್ಳುವ ಮುನ್ನವೇ ಅದು ಹುಟ್ಟುಹಾಕಿದ ಪ್ರಕ್ರಿಯೆ ಮತ್ತು ರಾಜಕೀಯದ ಮುಂದುವರಿಕೆಯಾಗಿ ಬಾಂಬೆಯಲ್ಲಿ 3,000ಕ್ಕೂ ಹೆಚ್ಚು ಮುಸ್ಲಿಮರನ್ನು ಹಾಡುಹಗಲಲ್ಲೇ ಬಿಜೆಪಿ ಮತ್ತು ಶಿವಸೇನಾ ಗೂಂಡಾಗಳು ಕೊಂದುಹಾಕಿದರು. ಸಂವಿಧಾನದ ಬಗ್ಗೆ ಪ್ರಮಾಣಮಾಡುತ್ತಲೇ ಗುಜರಾತಿನಲ್ಲಿ ಮೋದಿ ಸರ್ಕಾರ 2002ರ ಹತ್ಯಾಕಾಂಡಕ್ಕೆ ಒಂದು ದಶಕದ ತಯಾರಿಯನ್ನೂ ನಡೆಸಿ 3000ಕ್ಕೂ ಹೆಚ್ಚು ಮುಸ್ಲಿಮರನ್ನು ಕಂಡು ಕೇಳರಿಯದ ರೀತಿಯಲ್ಲಿ ಕೊಂದುಹಾಕಿತು. ಅನಂತರ ನಡೆದ ಚುನಾವಣೆಗಳಲ್ಲಿ "ಜನಬೆಂಬಲದೊಂದಿಗೆ" ಮತ್ತೊಮ್ಮೆ ಅಧಿಕಾರ ಪಡೆಯಿತು. ಗುಜರಾತಿನ ಲಕ್ಷಾಂತರ ಹಿಂದೂಗಳ ಮನಸ್ಸು "ಮೋದೀಕರಣ"ಗೊಂಡಿದ್ದು ಹೇಗೆ?

ಎಲ್ಲಿಯತನಕ ಈ ಪ್ರಶ್ನೆಗಳಿಗೆ ಉತ್ತರ ಸಿಗುವುದಿಲ್ಲವೋ ಅಲ್ಲಿಯತನಕ ಬಾಬ್ರಿ ಮಸೀದಿ ನಾಶದ ಎಲ್ಲಾ "ನೈಜ ಆರೋಪಿ"ಗಳ ಪತ್ತೆಯಾಗುವುದೇ ಇಲ್ಲ!

ಆದರೆ ಲಿಬರ್ಹಾನ್ ಆಯೋಗ ಈ ಮುಖ್ಯ ಪ್ರಶ್ನೆಗಳನ್ನು ಕೈಗೆತ್ತಿಕೊಂಡೇ ಇಲ್ಲ. 1992ರ ಡಿಸೆಂಬರ್ 16ರಂದು ಲಿಬರ್ಹಾನ್ ಆಯೋಗ ರಚಿಸಿದಾಗ, ಈ ಆಯೋಗವು "ಬಾಬ್ರಿ ಮಸೀದಿ ನಾಶಕ್ಕೆ ಕಾರಣವಾದ ಸತ್ಯಸಂಗತಿಗಳು ಮತ್ತು ಸಂದರ್ಭವನ್ನು ಪತ್ತೆಹಚ್ಚುವುದು, ಬಾಬ್ರಿ ಮಸೀದಿ ನಾಶಕ್ಕೆ ಕಾರಣರು ಯಾವ್ಯಾವ ವ್ಯಕ್ತಿಗಳೆಂದು ನಿರ್ದಿಷ್ಟವಾಗಿ ಪತ್ತೆಹಚ್ಚುವುದು, ಇದರಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿಗಳು ಮತ್ತು ಅಧಿಕಾರಿಗಳು ಯಾವ್ಯಾವ ರೀತಿಯಲ್ಲಿ ಬಾಧ್ಯಸ್ಥರು ಎಂಬುದನ್ನು ಕಂಡುಹಿಡಿಯುವುದು, ಭದ್ರತಾ ವ್ಯವಸ್ಥೆಯಲ್ಲಿ ಆದ ಲೋಪಗಳು ಏನೆಂಬುದನ್ನು ಹುಡುಕುವುದು ಮತ್ತು ಈ ವಿಷಯಕ್ಕೆ ಕಾರಣವಾದ ಇತರ ಯಾವುದೇ ವಿಷಯಗಳನ್ನು ಪರಿಶೀಲಿಸ.."



ಬೇಕೆಂಬುದು ಅದಕ್ಕೆ ನೀಡಲಾದ ಹೊಣೆಗಾರಿಕೆಯಾಗಿತ್ತು. ತನ್ನ ವರದಿಯನ್ನು ನೀಡಲು ಈ ಆಯೋಗ 17 ವರ್ಷಗಳನ್ನು ತೆಗೆದುಕೊಂಡಿದೆ. ಇಷ್ಟು ಸುದೀರ್ಘ ಕಾಲ 1992 ಡಿಸೆಂಬರ್ 6ರಂದು ಮಸೀದಿ ಕೆಡವಿದವರು ಯಾರು ಎಂದು ಮಾತ್ರ ತಿಳಿದುಕೊಳ್ಳಲು ಅಗತ್ಯವೇನಿರಲಿಲ್ಲ. ಅದು ಅಂಗೈಹುಣ್ಣಿನಂತೆ ಸ್ಪಷ್ಟವಾಗಿಯೇ ಇತ್ತು. ಈ ಆಯೋಗವು 17 ವರ್ಷ ತೆಗೆದುಕೊಂಡು, ಸಾರ್ವಜನಿಕರ 8 ಕೋಟಿ ವೆಚ್ಚದಲ್ಲಿ, 399 ಬಾರಿ ವಿಚಾರಣೆನಡೆಸಿ, 48 ಬಾರಿ ಅವಧಿ ವಿಸ್ತರಣೆ ಕೋರಿ, ನೂರಕ್ಕೂ ಹೆಚ್ಚು ಸಾಕ್ಷಿಗಳನ್ನು, ಸಾವಿರಾರು ಪುಟಗಳ ದಾಖಲೆಯನ್ನು ಪರಿಶೀಲಿಸಿದ ನಂತರ ಏನಿಲ್ಲವೆಂದರೂ ಬಾಬ್ರಿ ಮಸೀದಿ ನಾಶಕ್ಕೆ ನೇರವಾಗಿ ಕಾರಣರಾದವರ ಜೊತೆಜೊತೆಗೆ ಬಾಬ್ರಿ ಮಸೀದಿ ನಾಶವಾಗಲು ಕಾರಣವಾದ - ಈ ದೇಶದಲ್ಲಿ ಬಲವಾಗಿ ನೆಲೆಯೂರುತ್ತಿರುವ - ಕೋಮುವಾದವನ್ನೂ ಪತ್ತೆಹಚ್ಚಿ ಅದರ ಬಗ್ಗೆ ಸೂಕ್ತವಾದ ರಾಜಕೀಯ, ಸಾಮಾಜಿಕ, ಆಡಳಿತಾತ್ಮಕ ಶಿಫಾರಸ್ಸುಗಳನ್ನು ನೀಡಬಹುದಾಗಿತ್ತು.

ಇವು ಈ ಆಯೋಗಕ್ಕಿದ್ದ ಮಿತಿಗಳೇ ಆಗಿದ್ದರೂ ಲಿಬರ್ಹಾನ್ ಆಯೋಗ ನಮಗೆಲ್ಲಾ ಗೊತ್ತಿದ್ದ ಕೆಲವು ವಿಷಯಗಳನ್ನೇ ಸಾಕ್ಷಿ ಮತ್ತು ಪುರಾವೆಗಳ ಸಮೇತ ಸಾಬೀತು ಪಡಿಸಿದೆ. ಅದರಲ್ಲಿ ಮುಖ್ಯವಾದದ್ದು:

1. ಬಾಬ್ರಿ ಮಸೀದಿ ನಾಶ ಧರ್ಮೋನ್ಮಾದದಲ್ಲಿದ್ದ ಕರಸೇವಕರು ಉನ್ಮತ್ತ ಕ್ಷಣದಲ್ಲಿ ನಡೆಸಿದ ಅಚಾತುರ್ಯದ ಕ್ರಮದಿಂದ ಸಂಭವಿಸಿದ್ದಲ್ಲ. ಇದರ ಹಿಂದೆ ಯೋಜಿತ ಷಡ್ಯಂತ್ರವಿತ್ತು.
2. ಈ ಷಡ್ಯಂತ್ರವನ್ನು ಮಾಡಿದ್ದು ಸಂಘಪರಿವಾರ. ಅದಕ್ಕೆ ಕಾನೂನುಬದ್ಧ ಮುಖವಾಡ ಒದಗಿಸಿದ್ದು ಬಿಜೆಪಿ ಪಕ್ಷ.
3. ಈ ಯೋಜನೆಯನ್ನು ಆಚರಣೆಗಿಳಿಸಲು ಸಂಘಪರಿವಾರ, ಬಿಜೆಪಿ, ವಿಶ್ವ ಹಿಂದೂ ಪರಿಷತ್ ಮತ್ತು ಭಜರಂಗ ದಳಗಳ ನಡುವೆ ಸ್ಪಷ್ಟವಾದ ಕಾರ್ಯ ವಿಭಜನೆಯಿತ್ತು.
4. ಹೀಗಾಗಿ ಬಾಬ್ರಿ ಮಸೀದಿ ನಾಶಕ್ಕೆ ಕಾರಣವಾದವರಲ್ಲಿ ಮೂರು ಬಗೆಯ ಅಪರಾಧಿಗಳಿದ್ದಾರೆ.
5. ಮೊದಲನೆಯವರು ನೇರವಾಗಿ ಬಾಬ್ರಿ ಮಸೀದಿಯನ್ನು ಒಡೆದುಹಾಕಿದ ಸಂಘಪರಿವಾರದ ವಿವಿಧ ಅಂಗಸಂಸ್ಥೆಗಳ ಕಾರ್ಯಕರ್ತರು.
6. ಎರಡನೆಯವರು ಈ ದುಷ್ಕೃತ್ಯಕ್ಕೆ ಪರೋಕ್ಷವಾಗಿ ಕುಮ್ಮಕ್ಕು ಕೊಟ್ಟವರು. ಇವರನ್ನು "ಢೋಂಗೀ ಕೋಮುವಾದಿಗಳೆಂದು" ಜರೆಯುವ ಆಯೋಗ ಈ ಪಟ್ಟಿಯಲ್ಲಿ ವಾಜಪೇಯಿ, ಅದ್ವಾನಿ, ಜೋಷಿ ಇನ್ನಿತರರನ್ನು ಹೆಸರಿಸಿದೆ.
7. ಇವರೆಲ್ಲರನ್ನೂ ಒಳಗೊಂಡಂತೆ ಒಟ್ಟು 68 ಜನರನ್ನು ಅಪರಾಧಿಗಳೆಂದು ಹೆಸರಿಸಿದೆ.

ಇದಲ್ಲದೆ ಈ ಬಗೆಯ ಘಟನೆಗಳು ಪುನರಾವರ್ತನೆಯಾಗದಂತೆ ತಡೆಯಬೇಕೆಂದರೆ : "1.16 **The next logical conclusion must therefore be that a government which is formed on the premise of religion or which has religious issues on its political agenda must also be barred. A government which is formed by professing its support to a particular religion or which has a religious issue or purpose as its stated agenda must therefore fall foul of explicit and implicit proscriptions of the constitution."**

ಅಂದರೆ ಯಾವ ಪಕ್ಷವು ಒಂದು ಧರ್ಮದ ಪರವಾಗಿ ರಾಜಕಾರಣ ನಡೆಸುತ್ತದೋ ಅಥವಾ ತನ್ನ ರಾಜಕೀಯ ಅಜೆಂಡಾದಲ್ಲಿ ಧಾರ್ಮಿಕ ವಿಷಯಗಳನ್ನು ಹೊಂದಿರುತ್ತದೋ ಅದು ಸಂವಿಧಾನಾತ್ಮಕ ನಡಾವಳಿಯು ನಿಷೇಧಿಸುವ ಆಚರಣೆಯನ್ನು ಹೊಂದಿರುತ್ತವಾದ್ದರಿಂದ ಅದನ್ನು ನಿಷೇಧಿಸತಕ್ಕದ್ದು ಎಂಬುದು ಆಯೋಗದ ಸಲಹೆ. ಇದಲ್ಲದೆ ಧರ್ಮವನ್ನು ರಾಜಕೀಯಕ್ಕೆ ಬಳಸಿಕೊಳ್ಳುವವರನ್ನು ಚುನಾವಣಾ ಆಯೋಗ ನಿಷೇಧಿಸಬೇಕೆಂಬ, ಅಧಿಕಾರಿಗಳು ಕಮ್ಯೂನಲ್ ಆಗದೆ ಇರುವಂತೆ ಕ್ರಮ ತೆಗೆದುಕೊಳ್ಳಬೇಕೆಂಬ, ಪೊಲೀಸ್ ಸುಧಾರಣೆ ಮತ್ತು ಕೋಮು ಗಲಭೆ ತಡೆಯಬೇಕೆಂಬ ಹಲವು ಸಲಹೆಗಳನ್ನು ಆಯೋಗ ನೀಡಿದೆ.

ಆದರೆ ಈ ಆಯೋಗದ ಎಲ್ಲಾ ಸಕಾರಾತ್ಮಕ ಅಂಶಗಳು ಇಲ್ಲಿಗೆ ನಿಂತುಹೋಗುತ್ತವೆ. ಏಕೆಂದರೆ ಆಯೋಗ 68



ಚಾರ್ವಾಕ ▸ ಶಿವಸುಂದರ್

ಅಪರಾಧಿಗಳನ್ನು ಪಟ್ಟಿ ಮಾಡಿದ್ದರೂ ಅವರಿಗೆ ಶಿಕ್ಷೆ ವಿಧಿಸಬೇಕೆಂಬ ಯಾವ ಸಲಹೆಯನ್ನೂ ನೀಡಿಲ್ಲ. ಅದೇ ರೀತಿ ಮೇಲಿನ ಪ್ಯಾರಾದಲ್ಲಿ ನೋಡಿದಂತೆ ಧರ್ಮವನ್ನು ಅಜೆಂಡಾವಾಗಿ ಇಟ್ಟುಕೊಂಡವರನ್ನು ರಾಜಕೀಯದಿಂದ ಬಹಿಷ್ಕರಿಸಬೇಕೆಂದು ಅಷ್ಟೊಂದು ಸ್ಪಷ್ಟವಾಗಿ ಹೇಳುವ ಆಯೋಗ ತನ್ನ "ತೀರ್ಮಾನಗಳು" ಎಂಬ 14ನೇ ಅಧ್ಯಾಯದಲ್ಲಿ ಹೇಗೆ ಬಿಜೆಪಿ ತನ್ನ ರಾಜಕೀಯ ಅಧಿಕಾರಕ್ಕಾಗಿ ಧಾರ್ಮಿಕ ಅಜೆಂಡಾವನ್ನು ಮತ್ತು ಕೋಮುವಾದವನ್ನು ಬಡಿದೆಬ್ಬಿಸುತ್ತಾ ಬಂತೆಂಬುದನ್ನು ಸಾಕ್ಷಿ ಸಮೇತ ರುಜುವಾತು ಮಾಡುತ್ತದೆ. ಆದರೆ ತನ್ನ "ಶಿಫಾರಸ್ಸುಗಳು" ಅಧ್ಯಾಯದಲ್ಲಿ ಮಾತ್ರ ಧರ್ಮದ ದುರ್ಬಳಕೆಯನ್ನು ಮಾಡುತ್ತಿರುವ ಬಿಜೆಪಿಯನ್ನು ರಾಜಕೀಯದಿಂದ ಬಹಿಷ್ಕರಿಸಬೇಕೆಂಬ ಶಿಫಾರಸ್ಸನ್ನು ನೀಡುವುದಿಲ್ಲ.

ಇದು ಆಯೋಗದ ಅತ್ಯಂತ ದೊಡ್ಡ ಮಿತಿಯಾಗಿದೆ. ಪ್ರಾಯಶಃ ಕಾಂಗ್ರೆಸ್‌ನಂಥ "ಸೆಕ್ಯುಲಾರ್" ಪಕ್ಷಗಳು ಕಳೆದ 60 ವರ್ಷದಿಂದಲೂ ಅನುಸರಿಸುತ್ತಾ ಬಂದದ್ದು ಇದೇ ದಾರಿಯನ್ನೇ. ಈ ಅನಿಶ್ಚಿತ ಮತ್ತು ಸಾರಾಂಶದಲ್ಲಿ ಕೋಮುವಾದಕ್ಕೆ ಪರೋಕ್ಷ ಕುಮ್ಮಕ್ಕು ನೀಡುವ ಅರೆಮನಸ್ಸಿನ ಕ್ರಮಗಳಿಂದಾಗಿಯೇ ಅಲ್ಲವೇ ಸಂಘಪರಿವಾರ ಬಲಗೊಂಡಿದ್ದು.

ಆದ್ದರಿಂದಲೇ ಲಿಬರ್ಹಾನ್ ಆಯೋಗ 1992ರಲ್ಲಿ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ನರಸಿಂಹ ರಾವ್ ನೇತೃತ್ವದ ಸರ್ಕಾರಕ್ಕೆ ಸಂಪೂರ್ಣ ಕ್ಲೀನ್‌ಚಿಟ್ ಕೊಟ್ಟುಬಿಟ್ಟಿದೆ. ವಾಸ್ತವವಾಗಿ ತಾನು ನಿರಪರಾಧಿ ಎಂದು ನರಸಿಂಹ ರಾವ್ ಆಯೋಗದ ಮುಂದೆ ಏನು ವಾದ ಮಾಡಿದರೋ ಅದನ್ನೇ ಯಥಾವತ್ತಾಗಿ ಅಚ್ಚು ಮಾಡಿರುವ ಆಯೋಗ ಅದನ್ನು ಯಾವುದೇ ವಿಮರ್ಶೆ ಇಲ್ಲದೆ ಒಪ್ಪಿಕೊಳ್ಳುತ್ತದೆ! ರಾಜ್ಯಪಾಲರು, ಮುಖ್ಯಮಂತ್ರಿಗಳು ಮತ್ತು ಸುಪ್ರೀಂಕೋರ್ಟ್ ನೇಮಕ ಮಾಡಿದ್ದ ವೀಕ್ಷಕ ಎಲ್ಲರೂ ಡಿಸೆಂಬರ್ 6ರ ಕರಸೇವೆಯಂದು ಯಾವುದೇ ಅನುಚಿತ ಘಟನೆ ಸಂಭವಿಸುವುದಿಲ್ಲವೆಂದು ಖಾತರಿ ನೀಡಿದ ಮೇಲೆ ತಾನು 356ನೇ ಕಲಂ ಬಳಸಿ ಕೇಂದ್ರಾಡಳಿತ ವಿಧಿಸಿ ಮಸೀದಿ ರಕ್ಷಣೆ ಮಾಡುವ ಅವಕಾಶವೇ ಇರಲಿಲ್ಲವೆಂಬುದು ನರಸಿಂಹ ರಾವ್ ಮುಂದಿಟ್ಟಿದ್ದ ವಾದ. ಆದರೆ ಆಯೋಗ ಕೇಳದಿದ್ದ ಪ್ರಶ್ನೆಯೇನೆಂದರೆ ಡಿಸೆಂಬರ್ 5ಕ್ಕೆ ಗುಪ್ತಚಾರ ಇಲಾಖೆ ಸ್ಪಷ್ಟವಾದ ಮಾಹಿತಿ ಕೊಟ್ಟಿದ್ದರೂ ಕ್ರಮಕ್ಕೆ ಏಕೆ ಮುಂದಾಗಲಿಲ್ಲವೆಂಬುದನ್ನು. ಅಲ್ಲದೆ ರಾಜ್ಯ ಸರ್ಕಾರ ತಾನು ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುತ್ತೇನೆಂದು ಹೇಳಿದ್ದರೂ ನರಸಿಂಹ ರಾವ್ ಸರ್ಕಾರ ಕೇಂದ್ರದಿಂದ ಅರೆಸೇನಾ ಪಡೆಗಳನ್ನು ಕಳಿಸಿಕೊಟ್ಟಿದ್ದೇಕೆ? ಅದರ ಹಿಂದೆ ಇದ್ದ ಮಾಹಿತಿ ಏನೆಂದು ಆಯೋಗ ಕೇಳಬೇಕಿತ್ತು.

ಎಲ್ಲಕ್ಕಿಂತ ಮುಖ್ಯವಾಗಿ ಮಧ್ಯಾಹ್ನದ ವೇಳೆಗೆ ಮಸೀದಿಯ ಒಂದೊಂದೇ ಗುಮ್ಮಟಗಳು ಉರುಳಿಬೀಳುತ್ತಿದ್ದರೂ ಮೂರೂ ಗುಮ್ಮಟಗಳು ಉರುಳಿಬಿದ್ದ ನಂತರವೇ ನರಸಿಂಹ ರಾವ್ ಸರ್ಕಾರ ತುರ್ತು ಸಭೆ ಕರೆದದ್ದೇಕೆ? ಅಂದು ಮಧ್ಯರಾತ್ರಿ ಕೇಂದ್ರಾಡಳಿತ ವಿಧಿಸಿದರೂ ಮಾರನೇ ದಿನವೂ ಮಸೀದಿಯ ಅವಶೇಷಗಳ ನಡುವೆ ತಾತ್ಕಾಲಿಕ ರಾಮಮಂದಿರದ ನಿರ್ಮಾಣಕ್ಕೆ ಅವಕಾಶ ಮಾಡಿಕೊಟ್ಟಿದ್ದೇಕೆ? ಇದರ ಹಿಂದಿನ ಮನಸ್ಥಿತಿ ಮತ್ತು ರಾಜಕೀಯವೇ ಮಸೀದಿಯನ್ನು ಕಾಪಾಡುವ ಅವಕಾಶವಿದ್ದರೂ ಅದನ್ನು ಕೆಡವಲು ಅವಕಾಶ ಮಾಡಿಕೊಟ್ಟಿಲ್ಲವೇ? ಆಯೋಗ ಈ ಯಾವ ಪ್ರಶ್ನೆಗಳನ್ನೂ ಕೇಳದೆ, ಕೇಳಿಕೊಳ್ಳದೆ ಕಾಂಗ್ರೆಸ್ ಸರ್ಕಾರಕ್ಕೆ ಕ್ಲೀನ್‌ಚಿಟ್ ಕೊಟ್ಟಿದೆ. ಹೀಗಾಗಿ ಆಯೋಗವು ಬಾಬ್ರಿ ಮಸೀದಿ ನಾಶಕ್ಕೆ ಕಾರಣರಾದ ಪ್ರಮುಖ ಶಕ್ತಿಗಳನ್ನು ನಿರ್ದಿಷ್ಟವಾಗಿ ಗುರುತಿಸಿದ್ದರೂ ಬಾಬ್ರಿ ಮಸೀದಿ ನಾಶಕ್ಕೆ ಪರೋಕ್ಷ ಕಾರಣವಾದ ರಾಜಕಾರಣವನ್ನು ನಿರ್ದೋಷಿಯೆಂದು ಘೋಷಿಸಿಬಿಟ್ಟಿದೆ. ಇದು ಕಾಂಗ್ರೆಸ್ಸಿಗರಿಗೆ ಹರ್ಷವನ್ನು ತರಬಹುದು. ಬಿಜೆಪಿಯ ಷಡ್ಯಂತ್ರವೇ ಬಾಬ್ರಿ ಮಸೀದಿ ನಾಶಕ್ಕೆ ಕಾರಣ ಎಂಬ ಆಯೋಗದ ತೀರ್ಮಾನ ಕೋಮುವಾದ ವಿರೋಧಿಗಳಿಗೆ ಹರ್ಷವನ್ನು ತಂದಿದೆ. ಆದರೆ ಕೋಮುವಾದವನ್ನು ಬುಡಸಮೇತ ಕಿತ್ತೊಗೆಯಬೇಕೆಂಬ ನಿಜವಾದ ಸೆಕ್ಯುಲಾರ್‌ವಾದಿಗಳಿಗೆ ಲಿಬರ್ಹಾನ್ ಆಯೋಗದ ಈ ಪಕ್ಷಪಾತಿ ಮತ್ತು ಅಪಕ್ವ ನಿಲುವು ಇನ್ನಷ್ಟು ಆತಂಕವನ್ನು ಉಂಟುಮಾಡಿದೆ.

ಇವೆಲ್ಲವೂ ಒಂದೆಡೆಯಾದರೆ ಲಿಬರ್ಹಾನ್ ಆಯೋಗ ಮತ್ತೊಂದು ಅತ್ಯಂತ ಬೇಜವಾಬ್ದಾರಿ ಮತ್ತು ಅಪಾಯಕಾರಿ ಶಿಫಾರಸ್ಸನ್ನೂ ಮಾಡಿದೆ. ಇದನ್ನು ಯಾವ ಮಾಧ್ಯಮಗಳೂ ಬಯಲಿಗೆಳೆಯದಿರುವುದು ಇನ್ನಷ್ಟು ಆಶ್ಚರ್ಯಕರವಾಗಿದೆ. **Recommendations pertaining to religious and cultural sites**-ಧಾರ್ಮಿಕ ಮತ್ತು ಸಾಂಸ್ಕೃತಿಕ ತಾಣಗಳಿಗೆ ಸಂಬಂಧಪಟ್ಟಂತೆ ಶಿಫಾರಸ್ಸುಗಳು ಎಂಬ ಅಧ್ಯಾಯದಲ್ಲಿ ಭಾರತವು ಹೇಗೆ ವಿವಿಧ ಧರ್ಮ ಮತ್ತು ಸಂಸ್ಕೃತಿಗಳಿಗೆ ಆಶ್ರಯತಾಣವಾಗಿದೆ ಮತ್ತು ಅವುಗಳ ನಡುವೆ ಧಾರ್ಮಿಕ ಸ್ಥಳಗಳ ಬಗ್ಗೆ ಹಲವು ಸಂಘರ್ಷಗಳು ಉಂಟಾಗುವುದು ಸಹಜ ಎಂದು ಹೇಳುತ್ತಾ ರಾಮಜನ್ಮಭೂಮಿ-ಬಾಬ್ರಿ ಮಸೀದಿ ಯಂಥ ಪ್ರಕರಣಗಳಲ್ಲಿ ಒಂದು ನಿರ್ದಿಷ್ಟ ಧಾರ್ಮಿಕ ಸ್ಥಳ ದೇವಸ್ಥಾನವೋ ಅಲ್ಲವೋ ಎಂದು ತೀರ್ಮಾನ ಮಾಡುವುದಕ್ಕೆ ಪರಿಣಿತರ

▸▸▸14

ತಲೆಗೂದಲು ಮತ್ತು ಅದಿರು ಸಂಪತ್ತು



ಕಂಡಹಾಗೆ

ಗೌರಿ ಲಂಕೇಶ್

ಸತ್ಯಸಾಗರ್ ಎಂಬ ಬರಹಗಾರ ಮತ್ತು ಪತ್ರಕರ್ತ ...ತ್ತೀಚೆಗೆ ಕಂಡ ಕನಸೊಂದರ ಬಗ್ಗೆ ಒಂದು ಲೇಖನವನ್ನು ...ರೆದಿದ್ದಾರೆ. ಆ ಲೇಖನ ಹೀಗೆ ಪ್ರಾರಂಭವಾಗುತ್ತದೆ:

'ಮಾನವರ ತಲೆ ಕೂದಲಿನಿಂದ ಅತ್ಯುತ್ತಮ ಇಂಧನ ...ಕ್ಯ: ವಿಜ್ಞಾನಿಗಳ ಸಂಶೋಧನೆ' ಎಂಬ ಶೀರ್ಷಿಕೆಯಡಿ ...ನಪತ್ರಿಕೆಯ ತಂತ್ರಜ್ಞಾನ ಪುಟದ ಮೂಲೆಯೊಂದರಲ್ಲಿ ವರದಿ ಪ್ರಕಟವಾಗಿತ್ತು.

ಅದನ್ನು ನೋಡಿ ಯಾವುದೋ ಕಾರ್ಪೊರೇಟ್ ...ಯೋಟೆಕ್ನಾಲಜಿ ಕಂಪನಿ ತನ್ನ ಪ್ರಚಾರಕ್ಕೆಂದು ಬಿಡುಗಡೆ ...ಡಿದ್ದ ಸುದ್ದಿ ಇದ್ದಿರಬಹುದೆಂದು ಭಾವಿಸಿದ ನಾನು ...ದನ್ನು ಮೊದಮೊದಲು ಅಷ್ಟು ಸೀರಿಯಸ್ ಆಗಿ ...ದುಕೊಂಡಿರಲಿಲ್ಲ. ಆದರೆ ಕೆಲದಿನಗಳಲ್ಲೇ ಆ ವರದಿ ...ಚಿತ್ರ ಬೆಳವಣಿಗೆಗಳಿಗೆ ಕಾರಣವಾಯಿತು.

ಬರುವ ದಿನಗಳಲ್ಲಿ ಮನುಷ್ಯರ ತಲೆ ಕೂದಲೂ ...ಚ್ಚು ಮೌಲ್ಯ ಪಡೆಯುವ ವಸ್ತುವಾಗುವುದಿದ್ದರೆ ಜಗತ್ತಿನ ...ಲ್ಲಾ ಕಾರ್ಪೊರೇಟ್ ಕಂಪನಿಗಳಿಗೆ ಅದನ್ನು ಸಾಧ್ಯವಾದಷ್ಟು ...ಮಾಣದಲ್ಲಿ ಪಡೆಯುವ ತವಕ ಪ್ರಾರಂಭವಾಯಿತು. ...ಲವು ದಶಕಗಳಿಂದ ಇಂಧನಕ್ಕಾಗಿ ಭೂಮಿಯನ್ನೇ ...ಗೆಯುತ್ತಿರುವ ಬಿಪಿ, ಶೆಲ್ ಮತ್ತು ಎಕ್ಸಾನ್ ಮೊಬಿಲ್ ...ಹದ ಕಂಪನಿಗಳಿಗಂತೂ ಇನ್ನು ಮುಂದೆ ತಮಗೆ ...ಕಿರುವ ಕಚ್ಚಾ ಸಾಮಗ್ರಿ ಜನರ ತಲೆಯ ಮೇಲೇ ...ವುದರಿಂದ ಬಹಳ ಸಂತೋಷವಾಯಿತು.

ಮನುಷ್ಯರ ತಲೆಗೂದಲ ಮೇಲೆ ತಮ್ಮ ...ಯಂತ್ರಣವನ್ನು ಸಾಧಿಸುವ ಪೈಪೋಟಿಯಲ್ಲಿ ಗಣಿ ...ಂಧೆಯ ಅಗ್ರಗಣ್ಯ ಕಂಪನಿಗಳಾದ ಡಿ ಬಿಯರ್ಸ್,



...ಎಚ್‌ಪಿ ಬಿಲ್ಲಿಟನ್ ಮತ್ತು ರಿಯೋ ಟಿಂಟೋಗಳೂ ...ಗಿಯಾದವು. ಅದನ್ನು ಕಂಡು ಭಾರತದ ಮಲ್ಟಿ ನ್ಯಾಷನಲ್ ...ಪನಿಗಳಾದ ರಿಲಯನ್ಸ್, ಟಾಟಾ ಮತ್ತು ಮಿತ್ತಲ್ ...ಗಳು ಭಾರತೀಯರ ತಲೆಗೂದಲು ಭಾರತೀಯ ...ಪನಿಗಳಿಗೆ ಮಾತ್ರ ಮೀಸಲು ಎಂದು ಘೋಷಿಸುವಂತೆ ...ರದ ಮೇಲೆ ಒತ್ತಡ ತಂದವು.

ಭಾರತೀಯರ ತಲೆಗೂದಲ ಮೇಲೆ ಕಾರ್ಪೊರೇಟ್ ...ಪನಿಗಳ ಕಣ್ಣುಬಿದ್ದಾಗ, ಭಾರತೀಯ ರಾಜಕಾರಣಿಗಳ ...ಸವೂ ಅದರತ್ತ ಹರಿಯಿತು. ಅವರು ಯಕಶ್ಚಿತ್ ...ರಿ ಹಿಡುಕರಾಗಿ' ಪರಿವರ್ತನೆಗೊಂಡು ಭಾರತೀಯರ ...ಗೂದಲನ್ನು ಕಾರ್ಪೊರೇಟ್ ಕಂಪನಿಗಳಿಗೆ ಅಡವಿಡಲು ...ಂದಾದರು. ಭಾರತ ಸರ್ಕಾರ ಕೂಡ ತರಾತುರಿಯಲ್ಲಿ ...ಗೂದಲನ್ನು 'ರಾಷ್ಟ್ರೀಯ ಆಸ್ತಿ' ಎಂದು ಘೋಷಿಸಿ ...ಲ್ಲಿ ಮುಂದೆ ಕ್ಷೌರಿಕರು ಮತ್ತು ಬ್ಯೂಟಿ ಪಾರ್ಲರ್‌ನವರು ...ರ ತಲೆಗೂದಲನ್ನು ಕತ್ತರಿಸದಂತೆ ನಿರ್ಬಂಧ ಹೇರಿತು. ...ಲ್ಲಿ ಮುಂದೆ ಜನರೆಲ್ಲರೂ ಸರ್ಕಾರ ನಿಗದಿಪಡಿಸಿದ್ದ ...ಗಳಲ್ಲಿ ತಮ್ಮ ಕೂದಲನ್ನು ಕತ್ತರಿಸಿಕೊಳ್ಳಬೇಕೆಂಬ ...ನೂನನ್ನು ಜಾರಿಗೆ ತಂದಿತು. ಈ ಕಾನೂನಿನಿಂದ ...ಪದರಿಗೆ ಮಾಫಿ ನೀಡಲಾಗಿತ್ತಾದರೂ ಅವರೆಲ್ಲರೂ ...ಲ್ಲಿ ಬೋಳು ತಲೆಗಳ ಮೇಲೆ ವಿವಿಧ ಬಹುರಾಷ್ಟ್ರೀಯ ...ಪನಿಗಳ ಲಾಂಛನಗಳನ್ನು ಅಂಟಿಸಿಕೊಂಡು ಸಂಸದ ...ಭವನದಲ್ಲಿ ಹಾಜರಾದರು. ಹೀಗಿದ್ದರೂ ಈಗಿನ ಕಾಲದಲ್ಲಿ ...ಾಜ ಕಂಪನಿ ಯಾವ ರಾಜಕಾರಣಿಯನ್ನು

ಕೊಂಡುಕೊಂಡಿದೆ ಎಂಬುದರ ಮೇಲೆಯೇ ಆ ನಾಯಕರ ಕಿಮ್ಮತ್ತನ್ನು ನಿರ್ಧರಿಸಲಾಗುತ್ತಾದ್ದರಿಂದ ಹಾಗೆ ತಮ್ಮ ಮಾಲೀಕ ಕಂಪನಿಗಳ ಲಾಂಛನಗಳನ್ನು ರಾಜಕಾರಣಿಗಳು ಹೆಮ್ಮೆಯಿಂದಲೇ ಪ್ರದರ್ಶಿಸಲಾರಂಭಿಸಿದರು.

ಚಿತ್ರರಂಗವೂ ಈ ಹೊಸ ಬೆಳವಣಿಗೆಗಳಿಗೆ ಅನುಗುಣವಾಗಿ ಬದಲಾವಣೆಗಳನ್ನು ಕಂಡಿತು. ಉದ್ದನೆ ಕೂದಲನ್ನು ಹೊಂದಿದ್ದ ಗೋಲ್ಡಿಲಾಕ್ಸ್‌ಳ ಕತೆಗೆ ಭಾರತೀಯ ಟಚ್ ಕೊಟ್ಟು ಹೊಸ ಚಿತ್ರಗಳು ನಿರ್ಮಿತವಾದವು. ಚಿತ್ರದ ಹಾಡುಗಳಲ್ಲಿನ ಪದಪುಂಜಗಳಲ್ಲೂ ಬದಲಾವಣೆಗಳು ಕಂಡುಬಂದು ಹಿಂದಿನ ಕಾಲದ 'ಹಾಲು, ಜೇನು' ಜಾಗಗಳಲ್ಲಿ 'ಕೇಶ, ರೋಮ' ತರಹದ ಪದಗಳು ಸೇರಿಕೊಂಡವು. ಸಿನಿಮಾಗಳ ನಾಯಕ ನಟರ ತಲೆ ಮೇಲೆ ಕೂದಲಿಲ್ಲದಿದ್ದರೂ, ಅವರು ಬೆಲೆಬಾಳುವ ವಿಗ್‌ಗಳನ್ನು ಮತ್ತು ಆ ಮೂಲಕ ತಮ್ಮ ಪ್ರತಿಷ್ಠೆಯನ್ನು ಕಾಪಾಡಿಕೊಳ್ಳಲು 'ಕೂದಲು ರಕ್ಷಕರ'ನ್ನು ನೇಮಿಸಿಕೊಳ್ಳಲಾರಂಭಿಸಿದರು.

ಇನ್ನು ಹುಚ್ಚು ಹಿಡಿದಂತೆ ವರ್ತಿಸುವ ಮಾಧ್ಯಮಗಳೂ ಹಿಂದೆ ಬೀಳಲಿಲ್ಲ. ಅವೆಲ್ಲವೂ ಮೈಯನ್ನು ಜುಮ್ಮೆನ್ನಿಸಿ ನವಿರೇಳಿಸುವಂತಹ ವರದಿಗಳನ್ನು ಪ್ರಸಾರ ಮಾಡಿದವು. ಕೆಲ ಪತ್ರಿಕೆಗಳಂತೂ "ಸಧ್ಯದಲ್ಲೇ ಭಾರತ ಖಂಡಿತವಾಗಿಯೂ ಜಗತ್ತಿನ ಅತಿ ದೊಡ್ಡ ಸೂಪರ್ ಪವರ್ ಆಗಲಿದೆ. ಅದಕ್ಕೆ ಕಾರಣ, ಭಾರತೀಯರಿಗಿಂತ ಚೀನಿಯರು ಹೆಚ್ಚಿನ ಸಂಖ್ಯೆಯಲ್ಲಿದ್ದರೂ, ಅವರಿಗಿಂತ ಭಾರತೀಯರ ತಲೆ ಮತ್ತು ದೇಹದ ಮೇಲೆ ಕೂದಲು ಫಲವತ್ತಾಗಿ ಬೆಳೆಯುತ್ತದೆ" ಎಂದೆಲ್ಲ ಸಂಪಾದಕೀಯಗಳನ್ನೇ ಬರೆದವು.

ಇಷ್ಟೆಲ್ಲ ನಡೆಯುತ್ತಿರುವಾಗ ಮುಂಬೈನ ಭೂಗತಲೋಕ ಸುಮ್ಮನಿರುತ್ತದೆಯೇ? ದುಬೈನಲ್ಲಿ ಅವಿತು ಕೂತಿರುವ ಕುಖ್ಯಾತ ಡಾನ್ ದಾವೂದ್ ಇಬ್ರಾಹಿಮ್, ತನ್ನ ಪರಮ ಶತ್ರು ಚೋಟಾ ರಾಜನ್ ತಲೆ ಮೇಲಿರುವ ಕೂದಲನ್ನು ಕತ್ತರಿಸಿಕೊಂಡು ಬಂದವರಿಗೆ ಒಂದು ಮಿಲಿಯನ್ ಡಾಲರ್‌ಗಳನ್ನು ಬಹುಮಾನವಾಗಿ ನೀಡುವೆನೆಂದು ಘೋಷಿಸಿದ. ಇನ್ನು ಮುಂಬೈನ ಬಾಲ್‌ಠಾಕ್ರೆ ಕೂಡ ತನ್ನ ಮುಖವಾಣಿ 'ಸಾಮ್ನಾ'ದಲ್ಲಿ "ಮುಂದೊಂದು ದಿನ ಬಾಲ್(ಕೂದಲು)ಗೆ ಹೆಚ್ಚು ಮೌಲ್ಯ ಬರುವುದರ ಬಗ್ಗೆ ದೂರದೃಷ್ಟಿ ಹೊಂದಿದ್ದ ನನ್ನ ತಂದೆ ನನಗೆ ಬಾಲ್ ಎಂದೇ ಹೆಸರಿಟ್ಟ" ಎಂಬ ಸಂಪಾದಕೀಯನ್ನು ಬರೆದ. ಆತನ ಅಳಿಯ ರಾಜ್ ಠಾಕ್ರೆ ಒಂದು ಹೆಜ್ಜೆ ಮುಂದೆ ಹೋಗಿ ಮರಾಠಿಗಳ ಒಂದೇ ಒಂದು ಕೂದಲು ಕೂಡ ನೆಲಕ್ಕೆ ಉರುಳದಂತೆ ನೋಡಿಕೊಳ್ಳುವ ಬಗ್ಗೆ ಶಪಥಗೈದು ತನ್ನ ಹಿಂಬಾಲಕರೆಲ್ಲರೂ ಇನ್ನು ಮುಂದೆ ತಮ್ಮ ತಲೆಗಳಿಗೆ 'ನೆಟ್'ಗಳನ್ನು ಕಟ್ಟಿಕೊಳ್ಳಬೇಕೆಂದು ಆದೇಶಿಸಿದ.

ಉತ್ತರ ಪ್ರದೇಶ ಹಾಗೂ ಬಿಹಾರದಂತಹ ರಾಜ್ಯಗಳಲ್ಲಂತೂ 'ಕೂದಲು ಕಳ್ಳರ' ದೊಡ್ಡ ತಂಡಗಳೇ ಸೃಷ್ಟಿಯಾದವು. ಆ ತಂಡಗಳು ಅಮಾಯಕರನ್ನು ಬಂಧಿಸಿ, ಬಂದೂಕನ್ನು ತೋರಿಸಿ ಅವರಿಗೆ ಬಲವಂತವಾಗಿ ಕ್ಷೌರ ಮಾಡಲಾರಂಭಿಸಿದವು. ಅಮೆರಿಕದ ಗೂಂಡಾಗಳಿಗಿಂತ ಕಡಿಮೆ ದರದಲ್ಲಿ ಭಾರತೀಯ ಗೂಂಡಾಗಳು ಸಿಗುವುದರಿಂದ ಕೂದಲನ್ನು 'ಸಂಗ್ರಹಿಸುವ' ಗುತ್ತಿಗೆಯನ್ನು ಬಹುರಾಷ್ಟ್ರೀಯ ಕಂಪನಿಗಳು ಇಲ್ಲಿನ ಗೂಂಡಾಗಳಿಗೆ ನೀಡಲಾರಂಭಿಸಿದವು.

ಕಲ್ಪಿತ ನೋವಿನಿಂದ ವಿಚಲಿತನಾಗಿ ಎಚ್ಚರಗೊಂಡ ನಾನು ನನ್ನ ತಲೆಯನ್ನು ಬಿಗಿಯಾಗಿ ಹಿಡಿದುಕೊಂಡು "ಇಲ್ಲ, ಇದು ನನ್ನ ತಲೆಗೂದಲು. ಈ ಕೂದಲಿನಿಂದ ಇಂಧನ ತಯಾರಿಸಲಾಗುವುದಿಲ್ಲ, ನನ್ನ ಕೂದಲಿನ ಮೇಲೆ ಯಾರಿಗೂ ಹಕ್ಕಿಲ್ಲ" ಎಂದು ಚೀರಲಾರಂಭಿಸಿದೆ.

ಹೀಗೆ ಎಚ್ಚರಗೊಂಡ ಸತ್ಯಸಾಗರ್ ಅವರು ತಮಗೆ ಬಿದ್ದ ವಿಚಿತ್ರ ಕನಸಿಗೂ, ಇವತ್ತು ಒರಿಸ್ಸಾದಲ್ಲಿ ನಡೆಯುತ್ತಿರುವ ರೈತರ ಹೋರಾಟಕ್ಕೂ ಸಂಬಂಧವಿದೆ ಎನ್ನುತ್ತಾರೆ.

ಅತಿಹೆಚ್ಚು ಪ್ರಮಾಣದಲ್ಲಿ ಅತ್ಯುತ್ತಮ ದರ್ಜೆಯ ಅದಿರನ್ನು ಹೊಂದಿರುವ ಒರಿಸ್ಸಾದಲ್ಲಿ ಗಣಿಗಾರಿಕೆ ನಡೆಸಿ ಅಲ್ಲಿನ ನಿಸರ್ಗ ಸಂಪತ್ತನ್ನು ಲೂಟಿ ಮಾಡಲು ಇವತ್ತು ಜಗತ್ತಿನ ಅತಿ ದೊಡ್ಡ ಕಂಪನಿಗಳೆಲ್ಲಾ ದೌಡಾಯಿಸುತ್ತಿವೆ. ಕಳೆದ ಐದು ವರ್ಷಗಳಲ್ಲಿ ಸುಮಾರು 1,60,132 ಕೋಟಿ ಮೌಲ್ಯದ ಎಂಓಯುಗಳಿಗೆ ವಿದೇಶಿ ಮತ್ತು ದೇಶಿ ಕಂಪನಿಗಳೊಂದಿಗೆ ಸಹಿ ಮಾಡಿರುವ ಒರಿಸ್ಸಾ ಸರ್ಕಾರ ಆ ಮೂಲಕ ಒರಿಯಾ ಜನರ ಕಾಲಡಿ ಇರುವ 20 ಬಿಲಿಯನ್ ಟನ್‌ನಷ್ಟು ಅದಿರಿನ ಮೇಲೆ ತನ್ನ ಹಕ್ಕನ್ನು ಬಿಟ್ಟುಕೊಟ್ಟಿದೆ. (ಸತ್ಯಸಾಗರ್ ಪ್ರಕಾರ ಒರಿಸ್ಸಾದ ಜನತೆ ರಕ್ತಹೀನತೆಯಿಂದ ಬಳಲುತ್ತಿರುವುದು ಅವರ ರಕ್ತದಲ್ಲಿನ ಕಬ್ಬಿಣಾಂಶವನ್ನೂ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಮಾರದಂತೆ ಅಡ್ಡಗಾಲಾಗಿದೆ!)

ಪಾಸ್ಕೋ ಎಂಬ ದಕ್ಷಿಣ ಕೊರಿಯಾದ ಕಂಪನಿಯೊಂದಿಗೆ ಒರಿಸ್ಸಾ ಸರ್ಕಾರ ಮಾಡಿಕೊಂಡಿರುವ ಒಪ್ಪಂದದಂತೆ ಬರುವ ಮೂವತ್ತು ವರ್ಷಗಳಲ್ಲಿ ಆ ಕಂಪನಿ 600 ಮಿಲಿಯನ್ ಟನ್‌ಗಳಷ್ಟು ಅದಿರನ್ನು ಬಗೆಯಬಹುದಾಗಿದೆ. ಅಷ್ಟೇ ಅಲ್ಲ, ಈಗ ಒಂದು ಟನ್ ಅದಿರಿನ ಬೆಲೆ 2,400 ರೂಪಾಯಿಗಳಾಗಿದ್ದರೂ, ಆ ಕಂಪನಿ ಪ್ರತಿ ಟನ್‌ಗೆ ಕೊಡುವ ರಾಯಧನ ಕೇವಲ 24 ರೂಪಾಯಿಗಳು. ಇದರಿಂದ ಸಾರ್ವಜನಿಕ ಶಾಖೆಗೆ ಆಗುವ ನಷ್ಟ ಕೇವಲ 1.4 ಟ್ರಿಲಿಯಿನ್ ರೂಪಾಯಿಗಳು! ಇನ್ನು ಪಾಸ್ಕೋ ಕಂಪನಿಗೆ ಸರ್ಕಾರ ಕಡಿಮೆ ದರದಲ್ಲಿ ನೀಡುತ್ತಿರುವ ಭೂಮಿ, ನೀರು, ತೆರಿಗೆ ರಿಯಾಯ್ತಿಗಳನ್ನು ಸೇರಿಸಿದರೆ ರಾಜ್ಯಕ್ಕೆ ಆಗುವ ನಷ್ಟ ಇನ್ನೂ ಹೆಚ್ಚಿನ ಪ್ರಮಾಣದ್ದಾಗುತ್ತದೆ.

ಇಂತಹ ಲೂಟಿ ಬರೀ ಒರಿಸ್ಸಾದಲ್ಲಿ ಮಾತ್ರವಲ್ಲ ಕರ್ನಾಟಕ ಸೇರಿದಂತೆ ಇತರೆ ರಾಜ್ಯಗಳಲ್ಲೂ ನಡೆಯುತ್ತಿದೆ. (ಕೆಲ ವರ್ಷಗಳ ಹಿಂದೆ ಚಿಕ್ಕಾಸೂ ಇಲ್ಲದೆ ಓಡಾಡುತ್ತಿದ್ದ ಬಳ್ಳಾರಿಯ ರೆಡ್ಡಿಗಳಿಗೆ ಇಷ್ಟೊಂದು ದುಡ್ಡು ಅದೆಲ್ಲಿಂದ ಬಂತು ಎಂಬುದು ಅರ್ಥವಾಗುತ್ತದೆಯಲ್ಲವೇ?) ಹಾಗಾಗಿ ತನಗೆ ಬಿದ್ದ ಕನಸಿನಲ್ಲಿ 'ತಲೆಗೂದಲು' ಪದದ ಬದಲಾಗಿ 'ಅದಿರು' ಎಂದು ಉಪಯೋಗಿಸಿದರೆ ಅದು ಕನಸಲ್ಲ, ವಾಸ್ತವ ಸಂಗತಿ ಆಗುತ್ತದೆ ಎನ್ನುತ್ತಾರೆ ಸತ್ಯಸಾಗರ್.

ಅವರು ತಮ್ಮ ಲೇಖನವನ್ನು ಹೀಗೆ ಅಂತ್ಯಗೊಳಿಸುತ್ತಾರೆ: "ಒಂದು ಆಶಯದ ಬಗ್ಗೆ ಚಿಂತಿಸುತ್ತಾ ಮತ್ತೆ ನಿದ್ದೆ ಮಾಡಲು ಯತ್ನಿಸಿದೆ. ಆ ಆಶಯವೇನೆಂದರೆ ಒಂದು ದಿನ ವಿಜ್ಞಾನಿಗಳು ತಮ್ಮ ಸಂಶೋಧನೆಯಿಂದ ರಾಜಕಾರಣಿಗಳು ಮತ್ತು ಕಾರ್ಪೊರೇಟ್ ಕಂಪನಿಗಳ ಮಾಲೀಕರ ಪಿತ್ತಜನಕಾಂಗದಿಂದ ತಲೆ ಬೋಡಾಗುವುದನ್ನು ತಡೆಯುವ ಮಾತ್ರೆಯನ್ನೋ, ವಯಾಗ್ರಾ ಮಾತ್ರೆಯ ಅಂಶವನ್ನು ಹೊಂದಿರುವ ಮಾತ್ರೆಯನ್ನೋ ತಯಾರಿಸುವುದನ್ನು ಕಂಡುಹಿಡಿದರೆ ಎಷ್ಟು ಚೆನ್ನಾ....."

* * * * * *

ಮೊನ್ನೆ ನನ್ನ ಬ್ಯಾಗ್ ಮತ್ತು ಪರ್ಸ್‌ನಲ್ಲಿದ್ದ ಚಿಲ್ಲರೆ ಕಾಯಿನ್‌ಗಳನ್ನು ಇಶಾಳ ಹೊಸ ಹುಂಡಿಗೆಂದು ತಗೆಯಲಾರಂಭಿಸಿದೆ. ಆಗ ಗಮನಕ್ಕೆ ಬಂದದ್ದು ಈಗ ಚಾಲ್ತಿಯಲ್ಲಿರುವ ಐವತ್ತು ಪೈಸೆ, ಒಂದು ಮತ್ತು ಎರಡು ರೂಪಾಯಿಗಳಲ್ಲೇ ಒಂದೇ ಗಾತ್ರ ಮತ್ತು ತೂಕವನ್ನು ಹೊಂದಿರುವುದು. ಒಂದು ಕ್ಷಣ ಕಣ್ಣುಮುಚ್ಚಿ ಆ ಕಾಯಿನ್‌ಗಳನ್ನು ವಿಂಗಡಿಸಲು ಯತ್ನಿಸಿದೆ. ಆದರೆ ಅಂಧರಿಗೆ ಸ್ಪರ್ಶದಲ್ಲಿರುವಷ್ಟು ಸೂಕ್ಷ್ಮತೆ ನನಗಿಲ್ಲವಾದ್ದರಿಂದ ನನ್ನ ಊಹೆಗಳೆಲ್ಲ ತಪ್ಪಾಗಿದ್ದವು.

ಆಗ ನನ್ನ ಡೇನಿಷ್ ಸ್ನೇಹಿತ ನೀಲ್ಸ್‌ನೊಂದಿಗಿನ ಸಂಭಾಷಣೆಯೊಂದು ನೆನಪಾಯಿತು. ಡೆನ್ಮಾರ್ಕ್ ದೇಶಕ್ಕೆ ಭೇಟಿ ನೀಡಿದ್ದಾಗ ಅಲ್ಲಿನ ಎಲ್ಲ ನಾಣ್ಯಗಳೂ ಒಂದೇ ಆಕಾರದಲ್ಲಿರುವುದನ್ನು ಗಮನಿಸಿ (ಆಗ ಭಾರತದಲ್ಲಿನ ನಾಣ್ಯಗಳು ವಿವಿಧ ಗಾತ್ರ ಮತ್ತು ತೂಕವನ್ನು ಹೊಂದಿದ್ದವು) ನಾನು "ಎಲ್ಲವೂ ಒಂದೇ ತರಹ ಇದ್ದರೆ ಅಂಧರು ಅವುಗಳನ್ನು ಹೇಗೆ ಪ್ರತ್ಯೇಕಿಸುತ್ತಾರೆ?" ಎಂದು ಕೇಳಿದೆ. ಆಗ ನೀಲ್ಸ್ ಆ ನಾಣ್ಯಗಳ ಅಂಚಿನಲ್ಲಿದ್ದ ಗುರುತುಗಳನ್ನು ತೋರಿಸಿ "ಅಂಧರು ನಾಣ್ಯಗಳ ಸುತ್ತ ಕೈಯಾಡಿಸಿದರೆ ಅದರ ಮೌಲ್ಯ ಅವರಿಗೆ ಗೊತ್ತಾಗುತ್ತದೆ" ಎಂದು ವಿವರಿಸಿದ. ಆತ ಹೇಳಿದಂತೆ ವಿವಿಧ ಬೆಲೆಯ ನಾಣ್ಯಗಳ ಅಂಚಿನಲ್ಲಿ ವಿವಿಧ ಗೆರೆಯ ಗುರುತುಗಳಿದ್ದವು. ಅವು ಎಷ್ಟು ಸ್ಪಷ್ಟವಾಗಿದ್ದವೆಂದರೆ ಅಂಧರು ಮಾತ್ರವಲ್ಲ, ಕಣ್ಣಿದ್ದವರೂ ಕತ್ತಲಿನಲ್ಲಿ ಗುರುತಿಸುವಂತಿದ್ದವು.

ಇಂತಹ ಗುರುತುಗಳನ್ನು ನಮ್ಮ ನಾಣ್ಯಗಳ ಅಂಚಿನಲ್ಲೂ ಸುಲಭವಾಗಿ ಅಳವಡಿಸಬಹುದು. ಅದಕ್ಕೆ ಬೇಕಾಗುವುದು ಕೇವಲ ನಾಣ್ಯಗಳನ್ನು ಟಂಕಿಸುವ ಅಚ್ಚುಗಳಲ್ಲಿ ಒಂದಿಷ್ಟು ಬದಲಾವಣೆಯಷ್ಟೇ. ಆದರೆ ಇಂತಹ ಚಿಕ್ಕ ಬದಲಾವಣೆಯನ್ನು ತರಲೂ ದೊಡ್ಡ ಪ್ರಮಾಣದ ಕಾಳಜಿ ಬೇಕಿರುತ್ತದಷ್ಟೇ.

ಅಂದಹಾಗೆ, ಇತ್ತೀಚೆಗೆ ಬೆಂಗಳೂರಿನ ಎಲ್ಲ ಸಿಗ್ನಲ್ ಲೈಟ್‌ಗಳಲ್ಲಿ ಹೊಸ ಯಂತ್ರವೊಂದನ್ನು ಅಳವಡಿಸಲಾಗಿದೆ. ಈಗಾಗಲೇ ಶಬ್ದ ಮಾಲಿನ್ಯದಿಂದ ತತ್ತರಿಸುತ್ತಿರುವ ಬೆಂಗಳೂರಿಗೆ ಈ ಯಂತ್ರಗಳೂ ತಮ್ಮ ಕೊಡುಗೆಯನ್ನು ಸೇರಿಸುತ್ತಿವೆ. "ಕುಯ್ಯೊ ಕುಯ್ಯೊ" ಎಂದು ಕೆಲ ನಿಮಿಷ ಈ ಯಂತ್ರಗಳು ಅರಚುತ್ತವೆ. ಆ ಯಂತ್ರಗಳು ಯಾವುವು, ಅವು ಹೀಗೇಕೆ ಅರಚುತ್ತಿವೆ ಎಂದು ಬಹಳಷ್ಟು ಬೆಂಗಳೂರಿಗರಂತೆ ನನಗೂ ಗೊತ್ತಿರಲಿಲ್ಲ. ಅಷ್ಟೇ ಅಲ್ಲ, ಅವು ಹೀಗೆ ಅರಚುತ್ತಾ ಶಬ್ದಮಾಲಿನ್ಯವನ್ನು ಹೆಚ್ಚಿಸುತ್ತಿದ್ದರೂ ಅದಕ್ಕೆ ಕೇರ್ ಮಾಡದೆ ವಾಹನಗಳ ಚಾಲಕರು ಗ್ರೀನ್‌ಸಿಗ್ನಲ್‌ಗೆ ಕಾಯದೆ ಹೊರಡುತ್ತಿರುವುದನ್ನು ಗಮನಿಸಿ ಆತಂಕಗೊಂಡಿದ್ದೆ.

ಮೊನ್ನೆ ಈ ಯಂತ್ರ ಮತ್ತದರ ಅರಚಾಟದ ಬಗ್ಗೆ ಈಗ ಅಮೆರಿಕದ ನಿವಾಸಿ ಆಗಿರುವ ಗೆಳೆಯ ಚಿದುನೊಂದಿಗೆ ಮಾತನಾಡುತ್ತಿದ್ದಾಗ ಆತ "ಆ ಯಂತ್ರದ ಉದ್ದೇಶ ಆ ಶಬ್ದ ಕೇಳಿಬಂದಾಗ ಅಂಧರು ಸುರಕ್ಷಿತವಾಗಿ ರಸ್ತೆಗಳನ್ನು ಕ್ರಾಸ್ ಮಾಡಬಹುದು ಎಂಬುದು" ಎಂದ. ಆದರೆ ಇದರ ಬಗ್ಗೆ ವಾಹನ ಚಾಲಕರಿಗಿರಲಿ, ಇಲ್ಲಿನ ಅಂಧರಿಗೂ ಗೊತ್ತಿರುವಂತಿಲ್ಲ. ಹಾಗೊಮ್ಮೆ ಅವರಿಗೆ ಗೊತ್ತಿದ್ದರೂ ವಾಹನ ಚಾಲಕರಿಗೆ ಗೊತ್ತಿಲ್ಲದಿರುವುದರಿಂದ ಈ ಯಂತ್ರಗಳು ಅಂಧರನ್ನು ಇನ್ನಷ್ಟು ಅಪಾಯಕ್ಕೆ ದೂಡುತ್ತವೆ ಎಂದು ಹೇಳಬಹುದು.

ಡೆನ್ಮಾರ್ಕ್ ದೇಶದಲ್ಲಿ ನಾಣ್ಯಗಳ ಅಂಚಿನಲ್ಲಿ ಚಿಕ್ಕ ಗುರುತುಗಳನ್ನು ಮೂಡಿಸುವ ಮೂಲಕ ಅಂಧರಿಗೆ ದೊಡ್ಡ ನೆರವು... ಇಲ್ಲಿ ರಾಜಕಾರಣಿಗಳಿಗೆ ಮತ್ತು ಅಧಿಕಾರಿಗಳಿಗೆ ಸಿಗುವ ದೊಡ್ಡ ಕಿಕ್‌ಬ್ಯಾಕ್‌ನಿಂದಾಗಿ ಯಾರಿಗೂ ಗೊತ್ತಿಲ್ಲದಿರುವ ಯಂತ್ರಗಳ ಅಳವಡಿಕೆ....

ನೈಜ ಕಾಳಜಿ ಮತ್ತು ದೊಡ್ಡ ಕಿಕ್‌ಬ್ಯಾಕ್ ನಡುವಿನ ವ್ಯತ್ಯಾಸ ಅರಿವಾಯಿತೆ....


ರಂಜನೆ | ಬೋಧನೆ | ಪ್ರಬೋಧನೆ
ಲಂಕೇಶ್



ಶಿವಸೇನೆಯ ವಡಾಪಾವ್ V/s ಕಾಂಗ್ರೆಸ್‌ನ ಕಾಂದಾಪೊಹೆ

ಮಹಾರಾಷ್ಟ್ರದಲ್ಲಿ - ಅದರಲ್ಲೂ ವಿಶೇಷವಾಗಿ ಮುಂಬೈನಲ್ಲಿ - ಇದ್ದು ಬಂದವರಿಗೆ ಅಥವಾ ಆ ರಾಜ್ಯದೊಂದಿಗೆ ನಿಕಟಸಂಪರ್ಕ ಇಟ್ಟುಕೊಂಡಿರುವವರಿಗೆ ವಡಾ-ಪಾವ್ ಮತ್ತು ಕಾಂದಾ-ಪೊಹೆ ಎಂಬ ಎರಡು ಲಘು ಉಪಾಹಾರಗಳ ಹೆಸರು ಚೆನ್ನಾಗಿ ಗೊತ್ತಿರುತ್ತದೆ. ಬನ್ನನ್ನು ಕತ್ತರಿಸಿ ಅದರೊಳಗೆ ಕರಿದ ಆಲೂಗಡ್ಡೆ ವಡೆಯನ್ನು, ಜೊತೆಗೆ ಒಂದಿಷ್ಟು ಒಣ ಮಸಾಲೆ, ಉಪ್ಪು ಕಾರ, ಅದರ ಮೇಲೊಂದೆರಡು ಕರಿದ ಹಸಿಮೆಣಸಿನ ಕಾಯಿಗಳನ್ನು ಹಾಕಿದರೆ ವಡಾ-ಪಾವ್ ಸಿದ್ಧ. ಅದೇ ರೀತಿ ತೋಸಿದ ಮಂಡಕ್ಕಿಗೆ ಒಗ್ಗರಣೆ ಹಾಕಿ, ಮೇಲೊಂದಿಷ್ಟು ಈರುಳ್ಳಿ ತುಂಡುಗಳು, ಹುರಿದ ಹಸಿಮೆಣಸಿಕನಕಾಯಿ ಮತ್ತು ಕೊತ್ತಂಬರಿ ಸೊಪ್ಪು ಹಾಕಿದರೆ ಕಾಂದಾ ಪೊಹೆ ರೆಡಿ.

ಮುಂಬೈನ ರಸ್ತೆ ಬದಿಯಲ್ಲಿ ಸಾವಿರಾರು ತಳ್ಳು ಅಂಗಡಿಗಳು, ಚಿಕ್ಕಪುಟ್ಟ ಹೋಟೆಲ್‌ಗಳು ದಿನನಿತ್ಯ ವಡಾ-ಪಾವ್ ಮತ್ತು ಕಾಂದಾ-ಪೊಹೆಗಳನ್ನು ಮಾರಾಟ ಮಾಡುತ್ತವೆ. ಮುಂಬೈನಲ್ಲಿ ಕೆಲಸ ಮಾಡುವ ಕೂಲಿ ಕಾರ್ಮಿಕರಿಂದ ಹಿಡಿದು ವಿವಿಧ ಚಿಕ್ಕ-ದೊಡ್ಡ ಕಂಪೆನಿಗಳಲ್ಲಿ ಕೆಲಸ ಮಾಡುವ ಎಕ್ಸಿಕ್ಯೂಟಿವ್‌ಗಳ ತನಕ ಲಕ್ಷಾಂತರ ಜನಕ್ಕೆ ಈ ಎರಡು ಆಹಾರಗಳೇ ಮಧ್ಯಾಹ್ನದ ಊಟವಾಗಿರುತ್ತದೆ. ಒಂದು ಅಂದಾಜಿನ ಪ್ರಕಾರ ಪ್ರತಿದಿನ ಏನಿಲ್ಲವೆಂದರೂ 2,00,000 ವಡಾ-ಪಾವ್‌ಗಳನ್ನು ಮಾರಾಟ ಮಾಡಲಾಗುತ್ತದೆ. ಹೆಚ್ಚೂಕಡಿಮೆ ಅಷ್ಟೇ ಸಂಖ್ಯೆಯ ಕಾಂದಾಪೊಹೆ ಪ್ಲೇಟ್‌ಗಳು ಖರ್ಚಾಗುತ್ತವೆ. ಸುಮಾರು 7,000 ಜನರು ತಳ್ಳುಗಾಡಿಗಳಲ್ಲಿ ಇವುಗಳನ್ನು ಮಾರಿಯೇ ತಮ್ಮ ಜೀವನ ಸಾಗಿಸುತ್ತಿದ್ದಾರೆ. ಮುಂಬೈನ ಕಾಸ್ಮೋಪಾಲಿಟನ್ ಕಲ್ಚರ್‌ನೊಂದಿಗೆ ಮುಂಬೈ ಮೂಲದ ಈ ಎರಡು ತಿನಿಸುಗಳೂ ಕೂಡ ಅವಿಭಾಜ್ಯ ಅಂಗವಾಗಿ ಬೆರೆತುಹೋಗಿವೆ.



▸ಕುಮಾರ್ ಬುರಡಿಕಟ್ಟಿ

ಮಹಾರಾಷ್ಟ್ರದಲ್ಲಿ ಈಗ ರಾಜಕೀಯ ಎಷ್ಟು ಕೆಟ್ಟು ಕೆರ ಹಿಡಿದಿದೆ ಎಂದರೆ ಮುಂಬೈನ ಈ ಎರಡು ತಿನಿಸುಗಳನ್ನೂ ಎದುರುಬದುರು ನಿಲ್ಲಿಸಿ ಜಗಳಕ್ಕಿಳಿಸಿದೆ! ಹೌದು, ವಡಾಪಾವ್ ಮತ್ತು ಕಾಂದಾಪೊಹೆಗಳು ಒಂದೊಂದು ರಾಜಕೀಯ ಪಕ್ಷದ ಬ್ರಾಂಡ್‌ಗಳಾಗಿ ಪರಿವರ್ತನೆಗೊಂಡು ಮುಂಬೈ ಬೀದಿಗಳಲ್ಲಿ ಮುಖಾಮುಖಿಯಾಗಿ ಪೈಪೋಟಿ ನಡೆಸಲಿವೆ.


ನಿಮಗೆ ನೆನಪಿರಬಹುದು, ಸಮಾಜದಲ್ಲಿ ಕೋಮುಗಲಭೆಗಳನ್ನು ಹಚ್ಚಿ ಜನರಲ್ಲಿ ಮರಾಠಿ ದುರಭಿಮಾನವನ್ನು ತುಂಬಿ ಸದಾ ಮುಸ್ಲಿಮರ ಹಾಗೂ ಮರಾಠಿಯೇತರ ಜನರ ರಕ್ತಕಾರುವುದಕ್ಕಾಗಿ ಹಾತೊರೆಯುವ ಶಿವಸೇನೆ ಈ ವರ್ಷದ ಆರಂಭದಲ್ಲಿ ಮುಂಬೈ ಜನರ ಸುಪ್ರಸಿದ್ಧ ತಿನಿಸಾದ ವಡಾಪಾವ್‌ಗೆ ಕೇಸರಿ ಬಣ್ಣ ಬಳಿದಿತ್ತು. 'ಶಿವ ವಡಾಪಾವ್' ಎಂಬ ಹೊಸ ಹೆಸರಿನಡಿಯಲ್ಲಿ ವಡಾಪಾವ್ ಮಾರುವುದಕ್ಕಾಗಿ ಮುಂಬೈನ 125 ಅಂಗಡಿಗಳಿಗೆ ಮಹಾನಗರ ಪಾಲಿಕೆಯಿಂದ ಲೈಸೆನ್ಸ್ ಕೊಡಿಸಿತ್ತು. ಇಲ್ಲಿ 'ಶಿವ' ಎಂದರೆ ಶಿವಾಜಿ.

ಮರಾಠಿ ಸಾಮ್ರಾಜ್ಯದ ಸಂಸ್ಥಾಪಕನಾಗಿ ಆಡಳಿತ ನಡೆಸಿದ್ದ ಶಿವಾಜಿ ತನ್ನ ಅಧಿಕಾರದುದ್ದಕ್ಕೂ ಮುಸ್ಲಿಮರನ್ನು ಮತ್ತು ಇತರ ಅನ್ಯ ಸಮುದಾಯಗಳ ಜನತೆಯನ್ನು ಮರಾಠಿಗರನ್ನು ಕಂಡಷ್ಟೇ ಗೌರವದಿಂದ, ಸಮಾನತೆಯಿಂದ ಕಂಡಿದ್ದ ಎಂಬುದಕ್ಕೆ ಎಷ್ಟು ಬೇಕಾದರೂ ಚಾರಿತ್ರಿಕ ಪುರಾವೆಗಳನ್ನು ಕೊಡಬಹುದು. ಆದರೆ, ಶಿವಾಜಿಯನ್ನೇ ತನ್ನ ಆದರ್ಶ ನಾಯಕನೆಂದು ಹೇಳಿಕೊಳ್ಳುವ ಶಿವಸೇನೆ (ಶಿವಾಜಿಯ ಸೇನೆ) ಶಿವಾಜಿಯ ಆದರ್ಶಗಳನ್ನೆಲ್ಲಾ ಸಮಾಧಿ ಮಾಡಿ ಮುಸ್ಲಿಮರ ಮತ್ತು ಅನ್ಯಭಾಷಿಕರ ಮೇಲೆ ನಿರಂತರವಾಗಿ ದಾಳಿ ನಡೆಸುತ್ತಾ ರಕ್ತಕಾರುತ್ತಿರುವುದು ನಮಗೆಲ್ಲಾ ಗೊತ್ತೇ ಇದೆ. ಶಿವಸೇನೆಯ ಅಧಿನೇತ ಭಾಳಠಾಕ್ರೆ ಶಿವಾಜಿಯ ಹೆಸರು ಹೇಳಿಕೊಂಡೇ ಹೇಗೆ ರಕ್ತಪಿಪಾಸು ರಾಜಕಾರಣಿಯಾಗಿದ್ದಾರೆ ಎಂಬುದೂ ತಿಳಿದಿದೆ. ಈಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವ ಶಿವಸೇನೆ ಮರಾಠಿಗರಲ್ಲಿ ಶಿವಾಜಿಯ ಬಗ್ಗೆ ಇರುವ ಅಭಿಮಾನವನ್ನು ಬಂಡವಾಳ ಮಾಡಿಕೊಂಡು ದುಡ್ಡು ಮಾಡುವ ಉದ್ದೇಶದಿಂದ ಮುಂಬೈನ ಸುಪ್ರಸಿದ್ಧ ತಿನಿಸಾದ ವಡಾಪಾವ್‌ಗೆ 'ಶಿವ ವಡಾಪಾವ್' ಎಂದು ಹೆಸರಿಟ್ಟು ಮಾರಾಟ ಮಾಡಲಾರಂಭಿಸಿದೆ. ಅಂದರೆ ಶಿವಸೇನೆಯ ಬ್ರಾಂಡ್‌ನ ಈ ವಡಾಪಾವ್ ತಿನ್ನುವವನು 'ದೇಶಪ್ರೇಮಿ', 'ಮರಾಠಿ ಪ್ರೇಮಿ' ಎಂದು ಬಿಂಬಿಸುತ್ತಾ ಪಕ್ಕಾ ಕೇಸರಿ ಬಿಸಿನೆಸ್‌ಗೆ ಇಳಿದಿದೆ.

ಶಿವ ವಡಾಪಾವ್ ಮಾರಿ ಭಾರಿ ದುಡ್ಡು ಗಳಿಸುತ್ತಿರುವ ಶಿವಸೇನೆಯನ್ನು ಕಂಡು ಈಗ ಕಾಂಗ್ರೆಸ್ ಪಕ್ಷ ಕೂಡ ಅಂತಹುದೇ ಬಿಸಿನೆಸ್‌ಗೆ ಇಳಿದಿದೆ. ಈಗಾಗಲೇ ವಿವರಿಸಿರುವಂತೆ ವಡಾಪಾವ್‌ನಷ್ಟೇ ಜನಪ್ರಿಯವಾಗಿರುವ ಕಾಂದಾಪೊಹೆಯನ್ನು ಕಾಂಗ್ರೆಸ್ ತನ್ನ ಬ್ರಾಂಡ್ ಹೆಸರಿನಲ್ಲಿ ಮಾರುಕಟ್ಟೆಗೆ ಬಿಡಲು ತೀರ್ಮಾನಿಸಿದೆ. ಇಲ್ಲಿ ಒಂದು ವಿಚಾರವನ್ನು ನೆನಪಿಟ್ಟುಕೊಳ್ಳಬೇಕು. ಈ ವರ್ಷದ ಜನವರಿಯಲ್ಲಿ ಬೃಹತ್ ಮುಂಬೈ ಮಹಾನಗರ ಪಾಲಿಕೆಯಲ್ಲಿ ಶಿವ ವಡಾ-ಪಾವ್ ಮಾರಾಟಕ್ಕೆ ಲೈಸೆನ್ಸ್ ಕೊಡುವ ವಿಚಾರ ಬಂದಾಗ ಕಾಂಗ್ರೆಸ್ ಸದಸ್ಯರು ಅದನ್ನು ಬಲವಾಗಿ ವಿರೋಧಿಸಿದ್ದರು. 'ನಾವು ವಡಾಪಾವ್ ವಿರೋಧಿಗಳಲ್ಲ, ಆದರೆ ಶಿವಸೇನೆ ಇಂಥ ಚೀಪ್ ರಾಜಕಾರಣಕ್ಕಿಳಿದಿರುವುದನ್ನು ಬಲವಾಗಿ ವಿರೋಧಿಸುತ್ತೇವೆ' ಎಂದು ಬೊಂಬಡಾ ಕೊಚ್ಚಿಕೊಂಡಿದ್ದರು.

ಈಗ ಒಂದು ವರ್ಷ ತುಂಬುವುದರೊಳಗಾಗಿ ಅದೇ ಕಾಂಗ್ರೆಸ್ 'ಕಾಂಗ್ರೆಸ್ ಕಾಂದಾಪೊಹೆ' ಮಾರಾಟಕ್ಕಿಳಿಯುವುದರೊಂದಿಗೆ ತಾನು ಶಿವಸೇನೆಗಿಂತ ಏನೂ ಕಡಿಮೆ ಚೀಪ್ ಅಲ್ಲ ಅನ್ನುವುದನ್ನು ತೋರಿಸಿಕೊಟ್ಟಿದೆ. ಶಿವಸೇನೆಯಿಂದ ಹೊರನಡೆದು ತನ್ನದೇ ಆದ 'ಮಹಾರಾಷ್ಟ್ರ ನವನಿರ್ಮಾಣ ಸೇನೆ' ಕಟ್ಟಿಕೊಂಡಿರುವ ರಾಜ್ ಠಾಕ್ರೆ ಈ ಎರಡು ಪಕ್ಷಗಳು ಇಂಥ ಬಿಸಿನೆಸ್‌ಗೆ ಇಳಿದು ದುಡ್ಡು ಮಾಡುತ್ತಿರುವುದನ್ನು ಸಹಿಸಲಾಗದೇ ತನ್ನದೇ ಆದ ಎಂಎನ್‌ಎಸ್ ಬ್ರಾಂಡಿನಲ್ಲಿ ಇನ್ನೊಂದು ತಿನಿಸನ್ನು ಮಾರುಕಟ್ಟೆಗೆ ಬಿಡುವುದಕ್ಕೆ ಯೋಚಿಸುತ್ತಿದ್ದಾನಂತೆ! ಬರುವ ದಿನಗಳಲ್ಲಿ ಪ್ರತಿ ತಿನಿಸೂ ಒಂದೊಂದು ರಾಜಕೀಯ ಪಕ್ಷದ ಬ್ರಾಂಡ್‌ನಲ್ಲಿ ಮಾರಾಟವಾಗುತ್ತದೆಯೋ ಏನೊ?


ತೆಲಂಗಾಣ ಘರ್ಜನೆ!



ಆಂಧ್ರಪ್ರದೇಶದಲ್ಲಿ ಪ್ರತ್ಯೇಕ ತೆಲಂಗಾಣ ರಾಜ್ಯಕ್ಕಾಗಿನ ಸುದೀರ್ಘ ಹೋರಾಟವೀಗ ಒಂದು ನಿರ್ಣಾಯಕ ಹಂತಕ್ಕೆ ಬಂದು ನಿಂತಿದೆ. ತೆಲಂಗಾಣ ಪ್ರದೇಶವನ್ನು ಆಂಧ್ರಪ್ರದೇಶ ರಾಜ್ಯದಿಂದ ಪ್ರತ್ಯೇಕಗೊಳಿಸಿ, ಭಾರತ ಏಕಾಧಿಪತ್ಯದೊಳಗೆ ಸ್ವತಂತ್ರ ರಾಜ್ಯವನ್ನಾಗಿ ರಚಿಸಬೇಕೆಂಬ ಬೇಡಿಕೆಯನ್ನು ಮುಂದಿಟ್ಟು ಹೋರಾಟ ನಡೆಸುತ್ತಿರುವ ತೆಲಂಗಾಣ ರಾಷ್ಟ್ರ ಸಮಿತಿಯ (ಟಿಆರ್ ಎಸ್) ಅಧ್ಯಕ್ಷ ಕೆ.ಚಂದ್ರಶೇಖರ್ ರಾವ್ ಅವರ ಆಮರಣಾಂತ ಉಪವಾಸ ಹತ್ತು ದಿನಗಳನ್ನು ದಾಟಿ ಅವರ ಆರೋಗ್ಯ ಪರಿಸ್ಥಿತಿಯೂ ಬಿಗಡಾಯಿಸುವುದರೊಂದಿಗೆ, ಪರಿಣಾಮವಾಗಿ ರಾಜಧಾನಿ ಹೈದರಾಬಾದ್ ಅನ್ನೂ ಒಳಗೊಂಡಂತೆ ಇಡೀ ತೆಲಂಗಾಣದಾದ್ಯಂತ ಟಿಆರ್‌ಎಸ್ ಕಾರ್ಯಕರ್ತರೂ ಸೇರಿದಂತೆ ಪ್ರತ್ಯೇಕ ತೆಲಂಗಾಣಕ್ಕಾಗಿ ಹಂಬಲಿಸುತ್ತಿರುವ ಜನರು ಬೀದಿಗಿಳಿಯುತ್ತಿದ್ದಂತೆಯೇ ಬೆದರಿದ ಕೇಂದ್ರ ಸರ್ಕಾರ ಕೊನೆಗೂ ಪ್ರತ್ಯೇಕ ರಾಜ್ಯ ರಚನೆಗೆ ಸಮ್ಮತಿ ನೀಡಿದೆ. ಇನ್ನೇನು ಆಂಧ್ರಪ್ರದೇಶ ಅಸೆಂಬ್ಲಿಯಲ್ಲಿ ಈ ಕುರಿತ ನಿರ್ಣಯವೊಂದನ್ನು ತೆಗೆದುಕೊಂಡ ಮೇಲೆ ಪ್ರತ್ಯೇಕ ರಾಜ್ಯ ರಚನೆಯಾಗುವ ನಿರೀಕ್ಷೆಗಳಿವೆ. ವಾಸ್ತವದಲ್ಲಿ ಇದು ಕೇಂದ್ರ ಸರ್ಕಾರ ತೆಲಂಗಾಣ ಜನತೆಗೆ ಕರುಣಿಸಿದ ಕಾಣಿಕೆಯೇನಲ್ಲ. ಪರಿಸ್ಥಿತಿ ಹೀಗೇ ಮುಂದುವರೆದರೆ ಇಡೀ ಆಂಧ್ರಪ್ರದೇಶ ಮತ್ತೊಂದು ಅಮೋಘ ಜನಾಂದೋಲನದಿಂದ ತಲ್ಲಣಗೊಳ್ಳುವ ಸ್ಥಿತಿ ಸೃಷ್ಟಿಯಾಗುತ್ತದೆ ಎಂದು ಬೆದರಿ ತೆಗೆದುಕೊಂಡ ತೀರ್ಮಾನ. ಏನೇ ಆದರೂ ಇದು ಕಳೆದ ಹತ್ತಾರು ವರ್ಷಗಳಿಂದ ತೆಲಂಗಾಣದ ಸಮಸ್ತ ಜನತೆ ನಡೆಸಿದ ಅಭೂತಪೂರ್ವ ಹೋರಾಟಕ್ಕೆ ಸಿಕ್ಕ ಜಯ ಎಂದೇ ಹೇಳಬಹುದು.

ವಾಸ್ತವದಲ್ಲಿ ಪ್ರತ್ಯೇಕ ತೆಲಂಗಾಣ ರಾಜ್ಯ ಸ್ಥಾಪನೆಯ ಬೇಡಿಕೆ ನಿನ್ನೆಮೊನ್ನೆ ಹುಟ್ಟಿದ್ದೇನಲ್ಲ. ಹತ್ತಾರು ವರ್ಷಗಳಿಂದ ತೆಲಂಗಾಣದ ಜನ ಆಂಧ್ರಾಧಿಪತ್ಯದೊಳಗೆ ಜರ್ಝರಿತರಾಗಿದ್ದು ಪ್ರತ್ಯೇಕ ರಾಜ್ಯದ ಕನಸನ್ನು ಕಾಣುತ್ತಲೇ ಬಂದಿದ್ದಾರೆ. ಕಳೆದ ಹತ್ತು-ಹದಿನೈದು ವರ್ಷಗಳಲ್ಲಿ ಆ ಕನಸುಗಳು ಸಂಘಟಿತ ರೂಪ ಪಡೆದುಕೊಂಡು ಹೋರಾಟವಾಗಿ ಪರಿವರ್ತನೆಗೊಂಡಿವೆ.

ತೆಲಂಗಾಣ ಎಂಬುದು ಆಂಧ್ರಪ್ರದೇಶದ ವಾರಂಗಲ್, ಅದಿಲಾಬಾದ್, ನಿಜಾಮಾಬಾದ್, ಕಮ್ಮಮ್, ಮೆಹಬೂಬ್‌ನಗರ, ನಲ್ಗೊಂಡ, ರಂಗಾರೆಡ್ಡಿ, ಕರೀಮ್‌ನಗರ, ನಿಜಾಮಾಬಾದ್ ಮತ್ತು ಮೇಡಕ್ ಜಿಲ್ಲೆಗಳನ್ನೊಳಗೊಂಡ ವಿಶಾಲವಾದ ಭೂಪ್ರದೇಶ. ಆಂಧ್ರದ ರಾಜಧಾನಿಯಾಗಿರುವ ಹೈದರಾಬಾದ್ ಕೂಡ ಈ ಪ್ರದೇಶದ ಹೃದಯಭಾಗದಲ್ಲಿದೆ. ಕೃಷ್ಣಾ ಮತ್ತು ಗೋದಾವರಿಗಳು ಈ ಪ್ರದೇಶದ ಜೀವನದಿಗಳಾಗಿವೆ. ನೈಸರ್ಗಿಕ ಸಂಪತ್ತಿನ ದೃಷ್ಟಿಯಿಂದ ನೋಡುವುದಾದರೆ ಈ ಪ್ರದೇಶ ಬಹಳ ಸಮೃದ್ಧವಾಗಿದೆ. ಆದರೆ ಅಲ್ಲಿ ಬದುಕುವ ಜನರ ಪಾಡು ಮಾತ್ರ ಶೋಚನೀಯವಾಗಿದೆ. ಪ್ರಾಯಶಃ ಭಾರತದ ಅತ್ಯಂತ ಹಿಂದುಳಿದ ಪ್ರದೇಶಗಳನ್ನು ಪಟ್ಟಿ ಮಾಡಿದರೆ ಅದರಲ್ಲಿ ತೆಲಂಗಾಣ ಅಗ್ರಸ್ಥಾನ ಪಡೆಯುತ್ತದೆ. ಶತಶತಮಾನಗಳಿಂದ ತೆಲಂಗಾಣ ಪ್ರಾಂತ್ಯ ಭೂಮಾಲಿಕ-ಪಾಳೆಯಗಾರರ ದರ್ಪ-ದೌರ್ಜನ್ಯಗಳಿಂದ ನಲುಗಿ ಹೋಗಿದೆ. ಒಂದೆಡೆ ಸಾವಿರಾರು ಎಕರೆ ಭೂಮಿಗೆ ಒಡೆಯನಾಗಿ ಮೆರೆಯುವ ಭೂಮಾಲಿಕ, ಇನ್ನೊಂದೆಡೆ ಆ ಭೂಮಿಯಲ್ಲೇ ಬೆವರು ಹರಿಸಿ ದುಡಿದರೂ ಪ್ರಾಣಿಗಿಂತ ಕೀಳಾಗಿ ಬದುಕುವ ಜೀತಗಾರ – ಇದು ಮೊನ್ನೆಮೊನ್ನೆಯ ತನಕದ ತೆಲಂಗಾಣದ ವಾಸ್ತವ ಚಿತ್ರಣ. ಎಪ್ಪತ್ತು ಮತ್ತು ಎಂಭತ್ತರ ದಶಕದಲ್ಲಿ ಮಾವೋವಾದಿ ನಕ್ಸಲೀಯರು ಬಹಳಷ್ಟು ಭೂಮಾಲಿಕರನ್ನು ನಿರ್ನಾಮ ಮಾಡಿ ಭೂಹೀನ ಬಡದಲಿತರಿಗೆ ಭೂಮಿ ಹಂಚಿದ ನಂತರವಷ್ಟೇ ತೆಲಂಗಾಣದ ಚಿತ್ರಣ ಸ್ವಲ್ಪಮಟ್ಟಿಗೆ ಬದಲಾದದ್ದು.



ಬ್ರಿಟಿಷರು ದೇಶದಿಂದ ಹೊರನಡೆದ ಮೇಲೆ ಚಾರಿತ್ರಿಕವಾಗಿ ತೆಲಂಗಾಣವನ್ನಾಳುತ್ತಿದ್ದ ಹೈದರಾಬಾದಿನ ನಿಜಾಮನೇ ಆ ಪ್ರದೇಶಕ್ಕೆ ಮತ್ತೆ ತಾನೆ ರಾಜನಾಗುತ್ತೇನೆಂದು ಹೊರಟಿದ್ದ. ಆದರೆ ಜವಾಹರಲಾಲ್ ನೆಹರೂ ಮತ್ತು ಸರ್ದಾರ್ ವಲ್ಲಭಬಾಯಿ ಪಟೇಲ್ ನಿಜಾಮನನ್ನು ಮಟ್ಟಹಾಕುವುದಕ್ಕೆ ಭಾರತೀಯ ಸೇನೆಯನ್ನು ಕಳಿಸುವ ಘೋಷಣೆ ಮಾಡಿದ ತಕ್ಷಣವೇ ತೆಲಂಗಾಣವನ್ನು ಭಾರತದ ಒಕ್ಕೂಟದೊಳಗೆ ವಿಲೀನಗೊಳಿಸುವುದಕ್ಕೆ ನಿಜಾಮ ಒಪ್ಪಿಕೊಂಡ. ಆದರೂ ಭಾರತೀಯ ಸೈನ್ಯ ತೆಲಂಗಾಣಕ್ಕೆ ಕಾಲಿಟ್ಟು ಆ ಪ್ರದೇಶದಲ್ಲಿ ಅಷ್ಟು ಹೊತ್ತಿಗಾಗಲೇ 'ಉಳುವವನಿಗೇ ಭೂಮಿ' ಧ್ಯೇಯದೊಂದಿಗೆ ಸಿಪಿಐ ನೇತೃತ್ವದಲ್ಲಿ ಭುಗಿಲೆದ್ದಿದ್ದ ಭೂಮಾಲಿಕ ವಿರೋಧಿ ಬಡಕೂಲಿ ಕಾರ್ಮಿಕರ ಹೋರಾಟವನ್ನು ನಿರ್ದಯವಾಗಿ ಹೊಸಕಿ ಹಾಕಿತು. ಅಸಲಿಗೆ ಭಾರತೀಯ ಸೇನೆ ಬಂದಿದ್ದೇ ಈ ಹೋರಾಟವನ್ನು ಬಗ್ಗುಬಡಿಯುವುದಕ್ಕೆ ಎಂದರೂ ತಪ್ಪಲ್ಲ.

ತದನಂತರ ಭಾಷಾವಾರು ಪ್ರಾಂತ್ಯಗಳ ರಚನೆಗಾಗಿ ಇಡೀ ದೇಶದಲ್ಲಿ ಚಳವಳಿಗಳು ಭುಗಿಲೆದ್ದಾಗ ಆಂಧ್ರಪ್ರದೇಶ ಅದರ ಮುಂಚೂಣಿಯಲ್ಲಿತ್ತು. ಮೂರು ವರ್ಷಗಳ ಸುದೀರ್ಘ ಚಳವಳಿಯ ನಂತರ ನವೆಂಬರ್ 1, 1956ರಲ್ಲಿ ಕನ್ನಡ ಭಾಷಿಕರಿಗೆ ಕರ್ನಾಟಕ ರಚನೆಯಾದ ದಿನವೇ ತೆಲುಗು ಮಾತನಾಡುವ ಆಂಧ್ರಪ್ರದೇಶವೂ ಅಸ್ತಿತ್ವಕ್ಕೆ ಬಂತು. ನೂತನವಾಗಿ ಅಸ್ತಿತ್ವಕ್ಕೆ ಬಂದ ಆಂಧ್ರಪ್ರದೇಶ ರಾಜ್ಯದಲ್ಲಿ ತೆಲಂಗಾಣ ಪ್ರಾಂತ್ಯವನ್ನು ವಿಲೀನಗೊಳಿಸಲಾಯಿತು. ವಾಸ್ತವದಲ್ಲಿ ಇದು ಸ್ವಾತಂತ್ರ್ಯಾನಂತರದಲ್ಲಿ ತೆಲಂಗಾಣದ ಮೇಲೆ ಪರಕೀಯರ ಆಧಿಪತ್ಯಕ್ಕೆ ಹಾದಿ ಮಾಡಿಕೊಟ್ಟ ಮೊದಲ ಕ್ರಮವಾಗಿತ್ತು. ಅಲ್ಲಿಂದಾಚೆಗೆ ಇಲ್ಲಿಯತನಕವೂ ತೆಲಂಗಾಣವನ್ನು ಅಕ್ಷರಶಃ ಹೊರಗಿನವರೇ ಆಳುತ್ತಿದ್ದಾರೆ.

ಭಾಷೆ, ಸಂಸ್ಕೃತಿ, ಆಚಾರ, ನಡೆನುಡಿಗಳು, ರಾಜಕೀಯ - ಎಲ್ಲಾ ವಿಚಾರಗಳಲ್ಲೂ ತೆಲಂಗಾಣ ಇನ್ನಿತರ ಆಂಧ್ರಕ್ಕಿಂತ ಭಿನ್ನವಾಗಿದ್ದು ತನ್ನದೇ ಆದ ಅನನ್ಯತೆಯನ್ನು, ವಿಶಿಷ್ಟತೆಯನ್ನು ಹೊಂದಿದೆ. ವಾಸ್ತವದಲ್ಲಿ ಇಂದಿಗೂ ಅಲ್ಲಿನ ಜನ ತಮ್ಮನ್ನು ತೆಲಂಗಾಣದವರು ಎಂದು ಕರೆದುಕೊಳ್ಳುತ್ತಾರೆಯೇ ಹೊರತು ತಾವೆಲ್ಲಾ ಆಂಧ್ರಕ್ಕೆ ಸೇರಿದವರು ಎಂಬ ಭಾವನೆ ಅವರಲ್ಲಿಲ್ಲ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ 'ಆಂಧ್ರ' ಎಂದರೆ ಅದು ತೆಲಂಗಾಣವನ್ನು ಹೊರತುಪಡಿಸಿದ ಉಳಿದ ಪ್ರದೇಶ ಎಂತಲೇ ತೆಲಂಗಾಣದಲ್ಲೂ, ಅದರ ಹೊರಗೂ ಇರುವ ಜನರ ಸಾಮಾನ್ಯ ಭಾವನೆ. ಹಾಗಾಗಿ, ಯಾವಾಗ ತೆಲಂಗಾಣವನ್ನು ಆಂಧ್ರಕ್ಕೆ ಸೇರಿಸಲಾಯಿತೋ ಅಂದಿನಿಂದಲೇ ತಮ್ಮ ಮೇಲೆ ಆಂಧ್ರದವರು ದಬ್ಬಾಳಿಕೆ ನಡೆಸುತ್ತಾರೆಂಬ ಭಯ ತೆಲಂಗಾಣದ ಜನರಲ್ಲಿ ಇದ್ದೇ ಇತ್ತು. ತದನಂತರದ ದಿನಗಳಲ್ಲಿ ಅದು ಸತ್ಯವೂ ಆಯಿತು. ಅಲ್ಲಿಂದಾಚೆಗೆ ಅಧಿಕಾರಕ್ಕೇರಿದ ಎಲ್ಲಾ ಸರ್ಕಾರಗಳೂ ಆಂಧ್ರದವರ ಕಪಿಮುಷ್ಠಿಯಲ್ಲೇ ಇದ್ದುದರಿಂದ ಆಂಧ್ರ ಸರ್ಕಾರ ತೆಲಂಗಾಣದ ಪ್ರಾಕೃತಿಕ ಸಂಪತ್ತನ್ನು ಕೊಳ್ಳೆ ಹೊಡೆದು ಆಂಧ್ರವನ್ನು ಅಭಿವೃದ್ಧಿಗೊಳಿಸಿತು. ಅದೇ ಹೊತ್ತಿನಲ್ಲಿ ತೆಲಂಗಾಣ ಕಿಂಚಿತ್ತೂ ಅಭಿವೃದ್ಧಿಯನ್ನು ಕಾಣದೇ ಹಾಗೇ ಹಾಳುಕೊಂಪೆಯಾಗಿ ಉಳಿದುಕೊಂಡಿತು. ಇದರಲ್ಲಿ ತೆಲಂಗಾಣದ ಭ್ರಷ್ಟ ರಾಜಕಾರಣಿಗಳೂ ಕೈಜೋಡಿಸಿದ್ದರು.

ಆಂಧ್ರಪ್ರದೇಶ ಸರ್ಕಾರ ಏಕಾಡಳಿತದಲ್ಲಿದ್ದರೂ ತೆಲಂಗಾಣದ ಜನರನ್ನು ಉದ್ದಕ್ಕೂ ಎಲ್ಲಾ ರೀತಿಯಿಂದಲೂ ವಂಚಿಸುತ್ತಾ ಬರಲಾಗಿದೆ. ಸರ್ಕಾರಿ ನೌಕರಿಗಳನ್ನೇ ತೆಗೆದುಕೊಳ್ಳಿ, ಖಾಸಗಿ ಕಂಪೆನಿಗಳನ್ನೇ ತೆಗೆದುಕೊಳ್ಳಿ ಎಲ್ಲದರಲ್ಲೂ ಆಂಧ್ರದವರೇ ತುಂಬಿಕೊಂಡಿದ್ದಾರೆಯೇ ಹೊರತು ತೆಲಂಗಾಣದ ಜನ ಸಿಗುವುದು ತೀರಾ ವಿರಳ. ಸರ್ಕಾರಿ ಕೆಲಸದಲ್ಲಿ ಬೀದಿ ಗುಡಿಸೋರು, ಅಟೆಂಡರ್, ಪ್ಯೂನ್, ಟೈಪಿಸ್ಟ್ - ಮುಂತಾದ ಅತ್ಯಂತ ಕೆಳದರ್ಜೆಯ ಕೆಲಸಗಳಲ್ಲಿ ತೆಲಂಗಾಣದವರನ್ನು ತುಂಬಿಕೊಂಡಿದ್ದರೆ ಉನ್ನತ ಅಧಿಕಾರಿಗಳೆಲ್ಲರೂ ಹೆಚ್ಚೂಕಡಿಮೆ ಆಂಧ್ರಕ್ಕೆ ಸೇರಿದವರಾಗಿದ್ದಾರೆ. ಇಂದಿಗೂ ತೆಲಂಗಾಣದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಎಲ್ಲಾ ತಾಲ್ಲೂಕುಗಳ ತಹಶೀಲ್ದಾರರು, ಪೊಲೀಸ್ ಇಲಾಖೆಯ ಎಸ್‌ಪಿಗಳು, ಡಿವೈಎಸ್‌ಪಿಗಳು, ಸರ್ಕಲ್ ಇನ್ಸ್‌ಪೆಕ್ಟರ್‌ಗಳು, ವಿವಿಧ ಇಲಾಖೆಗಳಲ್ಲಿರುವ ಐಎಎಸ್ ಅಧಿಕಾರಿಗಳು - ಹೀಗೆ ಎಲ್ಲರನ್ನೂ ಲೆಕ್ಕ ಹಾಕಿದರೆ ಮುಕ್ಕಾಲು ಭಾಗ ಆಂಧ್ರ ಮೂಲದವರೇ ತುಂಬಿಕೊಂಡಿರುವುದು ಕಂಡುಬರುತ್ತದೆ. ಎಲ್ಲಕ್ಕಿಂತ ಹೀನಾಯವಾದದ್ದೆಂದರೆ ಆಂಧ್ರದವರಲ್ಲಿ ತಾವೇ ನಿಜವಾದ ತೆಲುಗರು ಎಂಬ ದುರಭಿಮಾನ ತಾಂಡವವಾಡುತ್ತಿದ್ದು ಅವರು ತೆಲಂಗಾಣದ ಜನರನ್ನು ಎಂದೂ ಸಮಾನತೆಯಿಂದ ಕಂಡಿದ್ದಿಲ್ಲ. ತೆಲಂಗಾಣದವರು ಎಂದರೆ

ಮತಕ್ಷ್ಮ ಟಾರದ ಅತ್ಯಂತ ನಿಕೃಷ್ಟರು. ಕೀಳು ಎಂಬ ಭಾವನೆಯೇ ಅವರಲ್ಲಿ ಮನೆ ಮಾಡಿದೆ. ಹೀಗಾಗಿ ತೆಲಂಗಾಣದ ಜನ ಆಂಧ್ರ ದುರಭಿಮಾನಿಗಳ ಅವಮಾನಕ್ಕೆ ನಿರಂತರವಾಗಿ ತುತ್ತಾಗುತ್ತಲೇ ಬಂದಿದ್ದಾರೆ.

ತಾರತಮ್ಯ, ದೌರ್ಜನ್ಯ, ಶೋಷಣೆಗಳು ಹೆಚ್ಚಿದಂತೆ ಅವರ ವಿರುದ್ಧದ ಬಂಡಾಯವೂ ತೀವ್ರಗೊಳ್ಳುತ್ತದೆ ಎಂಬುದು ಚರಿತ್ರೆ ನಿರೂಪಿಸಿದ ಸತ್ಯ. ಅದು ತೆಲಂಗಾಣ ವಿಚಾರದಲ್ಲೂ ನಿಜವಾಗಿದೆ. ತಮ್ಮ ವಿರುದ್ಧ ಆಂಧ್ರದವರ ದಬ್ಬಾಳಿಕೆ ಹೆಚ್ಚಾಗುತ್ತಿದ್ದಂತೆಯೇ ಅವರ ವಿರುದ್ಧ ಪ್ರತಿಭಟನೆಗಳು ಪ್ರಾರಂಭವಾದವು. ಆಂಧ್ರಪ್ರದೇಶ ರಾಜ್ಯದೊಳಗೇ ಇದ್ದರೆ ತೆಲಂಗಾಣದ ಮೇಲಿನ ಆಂಧ್ರದ ದಬ್ಬಾಳಿಕೆಗೆ ಕೊನೆಯಿರುವುದಿಲ್ಲ ಎಂಬುದು ಅರ್ಥವಾಗುತ್ತಿದ್ದಂತೆಯೇ ಆಂಧ್ರದಿಂದ ಬೇರ್ಪಟ್ಟ ಪ್ರತ್ಯೇಕ ತೆಲಂಗಾಣ ರಾಜ್ಯ ರಚನೆಯ ಬೇಡಿಕೆಯಿಟ್ಟು ಹೋರಾಟ ಪ್ರಾರಂಭಿಸಿದರು. ಜನರ ಕೂಗನ್ನು ಆಲಿಸುವುದನ್ನು ಬಿಟ್ಟು ಎಲ್ಲಾ ಸರ್ಕಾರಗಳು ಈ ಹೋರಾಟವನ್ನು ಪೊಲೀಸ್ ಶಕ್ತಿಯ ಮೂಲಕ ಬಗ್ಗು ಬಡಿಯುತ್ತಾ ಬಂದವು. ಸುಮಾರು ಮೂರು ದಶಕಗಳಿಂದ ನಡೆಯುತ್ತಿರುವ ಈ ಹೋರಾಟ ಹೊಸ ಮಜಲನ್ನು ಪಡೆದದ್ದು ಪ್ರತ್ಯೇಕ ತೆಲಂಗಾಣ ರಚನೆಯನ್ನೇ ತನ್ನ ಪ್ರಧಾನ ಉದ್ದೇಶವನ್ನಾಗಿಸಿಕೊಂಡು ಚಂದ್ರಶೇಖರ್ ರಾವ್ ನೇತೃತ್ವದಲ್ಲಿ ತೆಲಂಗಾಣ ರಾಷ್ಟ್ರ ಸಮಿತಿ ಅಸ್ತಿತ್ವಕ್ಕೆ ಬಂದ ಮೇಲೆ. ಟಿಆರ್‌ಎಸ್‌ಗೆ ಇಡೀ ತೆಲಂಗಾಣದಾದ್ಯಂತ ಅಮೋಘ ಜನಬೆಂಬಲ ದೊರೆಯಿತು.


ಟಿಆರ್‌ಎಸ್‌ಗೆ ಸಿಗುತ್ತಿದ್ದ ಈ ಅಮೋಘ ಜನಬೆಂಬಲವನ್ನು ಕಂಡು ಕಾಂಗ್ರೆಸ್‌ಗೆ ದಿಗಿಲುಂಟಾಯಿತು. ಪರಿಸ್ಥಿತಿ ಹೀಗೇ ಮುಂದುವರೆದರೆ ತೆಲಂಗಾಣದಲ್ಲಿ ತನ್ನ ನೆಲೆ ಕಳೆದುಕೊಳ್ಳಬೇಕಾಗುತ್ತದೆಂಬುದು ಖಾತ್ರಿಯಾಗುತ್ತಿದ್ದಂತೆಯೇ ಪ್ರತ್ಯೇಕ ತೆಲಂಗಾಣ ರಚನೆಗೆ ತನ್ನ ಬೆಂಬಲವನ್ನು ಘೋಷಿಸಿತು. ಅಧಿಕಾರಕ್ಕೆ ಬಂದರೆ ಪ್ರತ್ಯೇಕ ರಾಜ್ಯ ಸ್ಥಾಪಿಸುವುದಾಗಿ ಇದೇ ಸೋನಿಯಾ ಗಾಂಧಿ ಮತ್ತು ಅಂದು ಆಂಧ್ರದಲ್ಲಿ ಪ್ರಶ್ನಾತೀತ ಕಾಂಗ್ರೆಸ್ ನಾಯಕರಾಗಿದ್ದ ವೈ.ಎಸ್.ರಾಜಶೇಖರ್ ರೆಡ್ಡಿ ಘೋಷಿಸಿದರು. ಟಿಆರ್‌ಎಸ್ ಜೊಂದಿಗೆ ಮೈತ್ರಿ ಸಾಧಿಸಿಕೊಂಡು ೨೦೦೪ರ ಚುನಾವಣೆಯನ್ನು ಎದುರಿಸಿದರು. ಪರಿಣಾಮವಾಗಿ ಕೇಂದ್ರದಲ್ಲೂ, ರಾಜ್ಯದಲ್ಲೂ ಕಾಂಗ್ರೆಸ್ ಅಧಿಕಾರಕ್ಕೇರಿತು.

ಅದಾಗಿ ಈಗ ಐದು ವರ್ಷ ಕಳೆದಿವೆ. ಸೋನಿಯಾ ಗಾಂಧಿಯಾಗಲೀ, ಕಾಂಗ್ರೆಸ್ ಪಕ್ಷವಾಗಲೀ ಪ್ರತ್ಯೇಕ ತೆಲಂಗಾಣ ರಚನೆಯ ಬಗ್ಗೆ ಚಕಾರವೆತ್ತಲಿಲ್ಲ. ಜನ ನಿರಂತರವಾಗಿ ಹೋರಾಡುತ್ತಿದ್ದರೆ ಅವರನ್ನು ಬಗ್ಗು ಬಡಿಯುವುದಕ್ಕೆ ಪೊಲೀಸರನ್ನು ಛೂ ಬಿಡಲಾಯಿತೇ ಹೊರತು ಅವರ ಬೇಡಿಕೆಯನ್ನು ಈಡೇರಿಸುವ ಕಾಳಜಿ ತೋರಲಿಲ್ಲ. ಅಸಲಿಗೆ ಪ್ರತ್ಯೇಕ ತೆಲಂಗಾಣ ಸ್ಥಾಪನೆಯ ಬೇಡಿಕೆಯನ್ನು ವಿರೋಧಿಸಿದರೆ ತೆಲಂಗಾಣದಲ್ಲಿ ತಮ್ಮ ವೋಟುಗಳನ್ನು ಕಳೆದುಕೊಳ್ಳಬೇಕಾಗುತ್ತದೆಂಬ ಭಯದಿಂದ ತೆಲುಗುದೇಶಂ ಪಕ್ಷವನ್ನೂ ಒಳಗೊಂಡಂತೆ ಎಲ್ಲಾ ರಾಜಕೀಯ ಪಕ್ಷಗಳು ಅದನ್ನು ಬೆಂಬಲಿಸಿದವು. (ಸಿಪಿಎಂನ ತರ್ಕ ಮಾತ್ರ ಅದನ್ನು ವಿರೋಧಿಸುತ್ತಿದೆ!) ಪ್ರತ್ಯೇಕ ರಾಜ್ಯವೊಂದು ರಚಿಸುವುದಕ್ಕೆ ತಾಂತ್ರಿಕವಾಗಿಯಾಗಲೀ, ಸಂವಿಧಾನಿಕವಾಗಲೀ ಯಾವುದೇ ಅಡೆತಡೆಗಳೂ ಇಲ್ಲ.

ಹಿಂದೆ ಜನಹೋರಾಟಕ್ಕೆ ಮಣಿದು ಉತ್ತರಖಂಡ, ಜಾರ್ಖಂಡ್ ಮತ್ತು ಛತ್ತೀಸ್‌ಗಡ ರಾಜ್ಯಗಳು ಅಸ್ತಿತ್ವಕ್ಕೆ ಬಂದಿರುವುದು ನಮ್ಮ ಕಣ್ಣಮುಂದೆಯೇ ಇದೆ. ಹಾಗಿದ್ದ ಮೇಲೂ ತೆಲಂಗಾಣ ರಾಜ್ಯ ರಚನೆಗೆ ಕಾಂಗ್ರೆಸ್ ಯಾಕೆ ಅಡ್ಡಗಾಲು ಹಾಕುತ್ತಿದೆ? ಪ್ರತ್ಯೇಕ ತೆಲಂಗಾಣ ರಚನೆಯಾದರೆ ಯಾರಿಗೆ ಏನು ತೊಂದರೆಯಾಗುತ್ತೆ? ಆಂಧ್ರದ ಧನಿಕರ ಪಾದಗಳಡಿಯಲ್ಲಿ ತೆಲಂಗಾಣ ಇನ್ನೆಷ್ಟು ದಿನ ನರಳಬೇಕು? ಪ್ರತ್ಯೇಕ ರಾಜ್ಯಕ್ಕಾಗಿ ಇನ್ನೆಷ್ಟು ಹೆಣಗಳು ಉರುಳಬೇಕು?

ಒಂದು ವಿಚಾರವನ್ನು ಇಲ್ಲಿ ನೆನಪಿಡಬೇಕು. ತೆಲಂಗಾಣದವರು ಈಗ ಕೇಳುತ್ತಿರುವುದು ಭಾರತ ಒಕ್ಕೂಟದೊಳಗೆ ಪ್ರತ್ಯೇಕ ರಾಜ್ಯವನ್ನು, ಅದಕ್ಕಾಗಿ ಅವರು ಅನುಸರಿಸುತ್ತಿರುವುದು ಸಾಂವಿಧಾನಿಕವಾದ, ಕಾನೂನುಬದ್ಧವಾದ ಹೋರಾಟ ರೂಪಗಳನ್ನು. ಅವರ ನ್ಯಾಯಯುತ ಕೂಗನ್ನು ಕೇಳಿಸಿಕೊಳ್ಳುವ ಸಂವೇದನೆಗಳನ್ನು ಕಳೆದುಕೊಂಡರೆ, ಅವರ ಸಾಂವಿಧಾನಿಕ, ಕಾನೂನುಬದ್ಧ ಹೋರಾಟಗಳನ್ನು ಉದಾಸೀನ ಮಾಡುವಷ್ಟು ಉದ್ಧಟತನ ತೋರಿದರೆ ಪ್ರತ್ಯೇಕ ರಾಜ್ಯದ ಬದಲಿಗೆ ಪ್ರತ್ಯೇಕ ದೇಶದ ರಚನೆಯ ಬೇಡಿಕೆ ಮುಂದೆ ಬರಬಹುದು. ಈಗಿರುವ ಕಾನೂನುಬದ್ಧ ಹೋರಾಟಗಳ ಜಾಗವನ್ನು ಸಶಸ್ತ್ರ ಹೋರಾಟಗಳು ಆಕ್ರಮಿಸಿಕೊಳ್ಳಬಹುದು. ಹಾಗಾದಾಗ ಕಾಂಗ್ರೆಸ್‌ನ ಜಡ ಚರ್ಮಕ್ಕೆ, ಸಿಪಿಎಂನ ಜಡ ತರ್ಕಕ್ಕೆ ಆಗ ಬಿಸಿ ಮುಟ್ಟಬಹುದೇನೋ? ಅದಕ್ಕೆ ಅವಕಾಶ ಕೊಡುವುದು, ಬಿಡುವುದು ಕೇಂದ್ರ ಸರ್ಕಾರದ ಕೈಯಲ್ಲಿದೆ. ಪ್ರತ್ಯೇಕ ತೆಲಂಗಾಣ ರಾಜ್ಯವನ್ನು ಆದಷ್ಟು ಬೇಗ ರಚಿಸಿದರೆ ಅಂಥ ಅನಾಹುತವನ್ನು ತಪ್ಪಿಸಬಹುದು. ●

ಜಯ ಕರ್ನಾಟಕದಿಂದ ಜಾಣಗೆರೆ ಕಿಕ್‌ಔಟ್?



ಇದೀಗ ಬಂದ ಸುದ್ದಿಯೇನೆಂದರೆ ಜಯ ಕರ್ನಾಟಕ ಸಂಘಟನೆಯಿಂದ ಅದರ ರಾಜ್ಯಾಧ್ಯಕ್ಷ ಜಾಣಗೆರೆ ವೆಂಕಟರಾಮಯ್ಯನವರನ್ನು ಉಚ್ಚಾಟಿಸಲಾಗಿದೆ. ಕೊಟ್ಟಿದ್ದ ಇನೋವಾ ಕಾರು ಮತ್ತು ಹೆಡ್ಡಾಫೀಸಿನ ಬೀಗದ ಕೈಯನ್ನು ಸಂಸ್ಥಾಪಕ ಅಧ್ಯಕ್ಷನ ಧೂತರ ಕೈಗೊಪ್ಪಿಸಿದ ಜಾಣಗೆರೆ ಸಾಹೇಬರು ಜಯ ಕರ್ನಾಟಕದ ವಿಜಯನಗರದ ಅಡ್ಡೆಯಿಂದ ಜಾಗ ಖಾಲಿ ಮಾಡಿದ್ದಾರೆಂಬ ಸುದ್ದಿ ಕೂಡ ಖಚಿತಗೊಂಡಿದೆ.

ತಮಾಷೆಯಿರುವುದು ಉಚ್ಚಾಟನೆಗಿರುವ ಕಾರಣದಲ್ಲಿ. ತಾವು ಇತ್ತೀಚೆಗೆ ಉತ್ತರ ಕರ್ನಾಟಕ ಪ್ರವಾಸ ಕೈಗೊಂಡು ನೆರೆ ಸಂತ್ರಸ್ತರ ದುಃಖ ದುಮ್ಮಾನ ಕೇಳಲು ಹೋದಾಗ ಅಲ್ಲಿನ ಜಯ ಕರ್ನಾಟಕದ ಪದಾಧಿಕಾರಿಗಳು ತನಗೆ ಹಾರ ತುರಾಯಿ ಹಾಕಿ ಬಿರಿಯಾನಿ ತಿನ್ನಿಸಲಿಲ್ಲ ಎಂಬುದು ಜಾಣಗೆರೆಯ ಸಿಟ್ಟು. ಪ್ರವಾಹ ಪೀಡಿತರಿಗೆ ಕುಡಿಯಲು ಗಂಜಿ ಸಿಗದಿರುವಾಗ ನಿನಗೆಲ್ಲಿಂದ ಬಿರಿಯಾನಿ ತಿನ್ನಿಸೋದು? ಎಂಬುದು ಉ.ಕ.ದ ಜಯ ಕರ್ನಾಟಕದ ಪದಾಧಿಕಾರಿಗಳ ಕೊಂಕು.

ಹೀಗೆ ಹೊಗೆಯಾಡಿದ ವಾದವಿವಾದ ತಾರಕಕ್ಕೇರಿ ಕೊನೆಗೆ ಏನೇನೋ ತಿರುವು ಪಡೆದು ಅಂತಿಮವಾಗಿ ಸಂಸ್ಥಾಪಕನಿಗೂ ರಾಜ್ಯಾಧ್ಯಕ್ಷರಿಗೂ ಕೈಕೈ ಮಿಲಾಯಿಸುವ ಮಟ್ಟಕ್ಕೆ ಬಂದು ಜಾಣಗೆರೆಯ ಉಚ್ಚಾಟನೆಯಲ್ಲಿ ಪರ್ಯಾವಸಾನಗೊಂಡಿದೆಯಂತೆ.

ಜಾಣಗೆರೆಯ ಹುಟ್ಟುಗುಣ ಮತ್ತು ಸಂಸ್ಥಾಪಕನ ಜಾಯಮಾನ ಗೊತ್ತಿದ್ದವರಿಗೆ ಇವತ್ತಲ್ಲಾ ನಾಳೆ ಇಂಥದೊಂದು ಪ್ರಹಸನ ನಡೆಯುವ ಬಗ್ಗೆ ಯಾವುದೇ ಗುಮಾನಿಗಳಿರಲಿಲ್ಲ. ಈ ಹಿಂದೆ ನಾರಾಯಣಗೌಡನ ರಕ್ಷಣಾ ವೇದಿಕೆಯಿಂದಲೂ ಇಂಥದ್ದೇ ಕಾರಣಗಳಿಗಾಗಿ ಹೊರದಬ್ಬಿಸಿಕೊಂಡವರು ಜಾಣಗೆರೆ.

ಒಂದಷ್ಟು ದಿನ ನಿರುದ್ಯೋಗಿಯಾಗಿದ್ದ ಜಾಣಗೆರೆಯನ್ನು ಕರೆತಂದು ಜಯ ಕರ್ನಾಟಕದ ಹೊರೆಹೊರಿಸಿದ ಸಂಸ್ಥಾಪಕ ಅಧ್ಯಕ್ಷನು ಕಾರ್ಪೋರೇಟ್ ಕಂಪೆನಿಗಳ ಐಷಾರಾಮವನ್ನೂ ಮೀರಿದ ಸವಲತ್ತು ಕಲ್ಪಿಸಿಕೊಟ್ಟನು. ಓಡಾಡಲು ಏರ್‌ಕಂಡೀಷನ್ಡ್ ಕಾರು, ಐಷಾರಾಮಿ ಆಫೀಸು, ಪ್ರತಿನಿತ್ಯ ಬಿರಿಯಾನಿ ಕೂಳು, ತಿಂಗಳಿಗೆ ಮೂವತ್ತು ಸಾವಿರ ರೂಪಾಯಿ ಸಂಬಳ, ಕಾರಿಗೆ ಪೆಟ್ರೋಲು ಎಲ್ಲವನ್ನೂ ಪೂರೈಸಿದ್ದನು. ಇಷ್ಟೆಲ್ಲಾ ಸೌಲಭ್ಯ ಸಿಕ್ಕಮೇಲೆ ಯಾರಾದರೂ ಯಾವ ಕಾರಣಕ್ಕೆ ಹೋರಾಡುತ್ತಾರೆ?

ಐಷಾರಾಮಿ ಕಾರನ್ನೇರಿ ಸಂಘಟನಾ ಪ್ರವಾಸದ ಜಾಲಿ ಟ್ರಿಪ್ಪಿಗೆ ಹೊರಟ ಜಾಣಗೆರೆ ಸಾಹೇಬರಿಗೆ ಪ್ರವಾಹಪೀಡಿತರ ಮಧ್ಯೆ ಉತ್ತರ ಕರ್ನಾಟಕದ ಪದಾಧಿಕಾರಿಗಳು ತನಗೆ ಹಾರ-ತುರಾಯಿ ಹಾಕಿ ಸ್ವಾಗತಿಸಲಿಲ್ಲ ಎಂಬುದೇ ಅವಮಾನಕರ ಸಂಗತಿಯಾಯ್ತು. ಬೆಂಗಳೂರಿಗೆ ಬಂದಿದ್ದೇ ರಾಜ್ಯ ಮಟ್ಟದ ಪದಾಧಿಕಾರಿಗಳ ಸಭೆ ಕರೆದು ತನಗೆ ಆತಿಥ್ಯ ನೀಡದ ಪದಾಧಿಕಾರಿಗಳನ್ನೆಲ್ಲ ವಾಚಾಮಗೋಚರ ಬೈದರಂತೆ.

ಹಾಗಂತ ಜಯ ಕರ್ನಾಟಕದ ಪದಾಧಿಕಾರಿಗಳು ಬಿಡಬೇಕಲ್ಲ? 'ಅಲ್ರಿ, ಬರೀ ಬಿರಿಯಾನಿ ತಿಂದ್ಕೊಂಡು ಜಾಲಿ ಟ್ರಿಪ್ ಮಾಡ್ಕೊಂಡಿದ್ದೀರಲ್ಲ, ಮೊದ್ಲು ಸಂಘಟನೆ ಮಾಡ್ರೀ, ನಿಮ್ಮ ಯೋಗ್ಯತೆಗೆ ನೆಟ್ಟಗೊಂದು ಹೋರಾಟ ಮಾಡಿಲ್ಲವಲ್ರೀ? ನಿಮ್ಮಿಂದಾಗಿ ಸಂಘಟನೆಗೆ ಹಿನ್ನಡೆಯೇ ಹೊರತು ಉದ್ಧಾರವಾಗುತ್ತೇನ್ರೀ..?'ಎಂದು ಝಾಡಿಸಿಬಿಟ್ಟರಂತೆ.

ಪಕ್ಕದಲ್ಲೇ ಕೂತಿದ್ದ ಸಂಸ್ಥಾಪಕ ಅಧ್ಯಕ್ಷ ತಾನೇ ಏನು ಮಾಡಲು ಸಾಧ್ಯ? ತನ್ನನ್ನು ಪದಾಧಿಕಾರಿಗಳು ಝಾಡಿಸುತ್ತಿದ್ದರೆ ಆ ಬಗ್ಗೆ ಆತ ಚಕಾರವೆತ್ತದೇ ಕೂತಿದ್ದೇ ಅಪರಾಧವೆಂಬುದು ಜಾಣೆಂ ಸಿಟ್ಟು. ಆತ ಕುಮ್ಮಕ್ಕು ಕೊಟ್ಟೇ ತನ್ನ ವಿರುದ್ಧ ಪದಾಧಿಕಾರಿಗಳನ್ನು ಎತ್ತಿಕಟ್ಟಿದ್ದಾನೆಂಬುದು ಅವರ ಸಿಟ್ಟಿಗೆ ಪಿಳ್ಳೆನೆಪವಾಯ್ತು. ಪತ್ರ ಬರೆದು ಸಂಸ್ಥಾಪಕನಿಗೇ ವಾಚಾಮಗೋಚರ ಬಯ್ದರು. 'ಎಲಾ ಇವ್ನ? ನನ್ನ ಬಿರಿಯಾನಿ ತಿಂದು ನನಗೆ ರೋಪು ಹಾಕ್ತಾನಲ್ಲ' ಎಂಬುದು ಸಂಸ್ಥಾಪಕನ ನೋವು.

'ನಿಮ್ಮನ್ನು ಗೌರವಿಸಿದ್ದೀನಿ. ಸಹಾಯ ಮಾಡಿದ್ದೀನಿ. ಗೌರವದಿಂದ ನಡಕೊಳ್ಳೋದು ಗೊತ್ತಿಲ್ಲದಿದ್ರೆ ನೀವು ಹೋಗಬಹುದು' ಎಂದನಂತೆ ಸಂಸ್ಥಾಪಕ. ಅದಕ್ಕೂ ಸಿಟ್ಟಿಗೆದ್ದ ಜಾಣಗೆರೆ ಬೆಂಗಳೂರು ನಗರ ಜಿಲ್ಲಾ ಅಧ್ಯಕ್ಷ ಜಗದೀಶ್ ರೋಲ್‌ಕಾಲ್ ಮಾಡ್ತಾರೆ ಎಂದು ಹೀಯಾಳಿಸಿದ್ದಾರೆ. ಅದಕ್ಕೆ ಪ್ರತಿಯಾಗಿ ಜಗದೀಶ್ ಕಚೇರಿ ಖರ್ಚಿಗೆ ತಾನು ಎಷ್ಟೆಲ್ಲ ಕಷ್ಟಪಟ್ಟೆ ಎಂಬ ಲೆಕ್ಕ ಕೊಟ್ಟಿದ್ದಾರೆ. ಅಲ್ಲಿಗೆ ಸಂಸ್ಥಾಪಕನ ಸಹನೆಯೂ ಮುಗಿದುಹೋಗಿದೆ. ಗೆಟ್‌ಔಟ್ ಎಂದಿದ್ದಾನೆ.

ಹೀಗೆ ರಾಜೀನಾಮೆ ಕೊಟ್ಟ ಜಾಣಗೆರೆ ಮಹಾತ್ಮರು ಸದ್ಯ ತಲೆಮರೆಸಿಕೊಂಡಿದ್ದಾರೆಂಬುದು ಒಂದು ಸುದ್ದಿ. ಅಧ್ಯಕ್ಷ ಪದವಿ ತೊರೆಯುವ ಮುನ್ನ ತನ್ನಿಂದ ಪಡೆದ ಸಾಲವನ್ನು ಕೊಟ್ಟೇ ಹೋಗಬೇಕೆಂದು ಸಂಸ್ಥಾಪಕ ಆದೇಶಿಸಿದ್ದಾನೆಂಬುದು ಇನ್ನೊಂದು ಸುದ್ದಿ. ನಟರಾಜ್, ನರಸಿಂಹಯ್ಯ ಮುಂತಾದವರಷ್ಟೇ ಜಾಣಗೆರೆ ಜೊತೆ ಸಂಘಟನೆ ಬಿಟ್ಟಿದ್ದಾರೆಂದೂ ಉಳಿಕೆ ಪದಾಧಿಕಾರಿಗಳೆಲ್ಲ ಸಂಸ್ಥಾಪಕನ ಜೊತೆ ಉಳಿದಿದ್ದಾರೆಂಬುದು ಮಗದೊಂದು ಸುದ್ದಿ.


ಈ ಮಧ್ಯೆ ಜಾಣಗೆರೆ ಹೊಸ ಸಂಘಟನೆ ಕಟ್ಟುತ್ತಾರಂತೆ. ಅದರ ಖರ್ಚು ವೆಚ್ಚ ಲೆಕ್ಕ ಭರಿಸಲು ಮತ್ತೊಬ್ಬ ಲ್ಯಾಂಡ್ ಡೀಲರ್ ಸಿಕ್ಕಿದ್ದಾನಂತೆ!

● ಮಲ್ಲಿ



ಉತ್ತರ ಕನ್ನಡ : ಫೋಟನೇಕರ್ ಚೆಲ್ಲಾಟ; ಪ್ರಭು ಪೇಚಾಟ!

ಸಂಘಪರಿವಾರದ ಸೋಗಲಾಡಿಗಳು ಮೇಲ್ಮನೆ ಟಿಕೆಟ್‌ಗಾಗಿ ಮಾಡಿದ ಕಸರತ್ತು ರೋಚಕವಾಗಿದೆ. ರೆಡ್ಡಿ ಬಣ, ಯಡ್ಡಿ ಗ್ಯಾಂಗ್ ಮತ್ತು ಚೆಡ್ಡಿ ಟೋಳಿಯ ಮೂರು ಕ್ಯಾಂಡಿಡೇಟ್‌ಗಳು ಅಂತಿಮ ಕ್ಷಣದವರೆಗೂ ನೆಕ್ ಟು ನೆಕ್ ಫೈಟಿಂಗ್ ಮಾಡಿದರು. ಮಾಜಿ ಮಂತ್ರಿ ದೀವ ಲಾಬಿಯ ಶಿವಾನಂದನಾಯ್ಕ ಬೆನ್ನಿಗೆ ಸಾಕ್ಷಾತ್ ಸಿಎಂ ಸಾಹೇಬರೇ ನಿಂತಿದ್ದರು. ಚೆಡ್ಡಿಗಳು ಮತ್ತು ಜಿಲ್ಲಾ ಮಂತ್ರಿ ಕಾಗೇರಿ ವಿನೋದ್ ಪ್ರಭು ಎಂಬ ನಾಜೂಕಯ್ಯನೇ ನಮ್ಮ ಯುದ್ಧ ಕುದುರೆ ಎಂದು ಮುಂದೆ ಬಿಟ್ಟಿದ್ದರು.


ಫೋಟನೇಕರ್

ಉತ್ತರ ಕನ್ನಡ ಮೇಲ್ಮನೆ ಅಖಾಡದಲ್ಲಿ ಕುದ್ರ ಹೂಂದ ಹಣಾಹಣಿ ಏರ್ಪಟ್ಟಿದೆ. ಪರಂಪರಾಗತ ಎದುರಾಳಿಗಳಾದ ಕಾಂಗ್ರೆಸ್-ಬಿಜೆಪಿ ಪಕ್ಷಗಳ ಚುನಾವಣಾ ಪಂಡಿತರು ಮೂರು ಕಾಲು ಸಾವಿರದಷ್ಟಿರುವ ಸ್ಥಳೀಯಾಡಳಿತ ಸದಸ್ಯ ಮತದಾರರಲ್ಲಿ ಒಂದರ್ಧದಷ್ಟಾದರೂ ಖರೀದಿಸಿದರೆ ಗೆಲುವು ಗ್ಯಾರಂಟಿಯೆಂದುಕೊಂಡು ಸ್ಟ್ರಟಜಿ ಹೆಣೆಯುತ್ತಿದ್ದಾರೆ. ಪಕ್ಷ ನಿಷ್ಠೆ ಅಭ್ಯರ್ಥಿಗಳಿಗೂ ಇಲ್ಲ; ಮತದಾರರಿಗೂ ಇಲ್ಲ. ದುಡ್ಡು ಮತ್ತು ಜಾತಿಯೇ ಪ್ರಚಾರ ಸಾಮಗ್ರಿ!

ಫೋಟನೇಕರ್ ಗುದುಮುರಿಗೆ

ಜಿಲ್ಲಾ ಮಧ್ಯವರ್ತಿ ಬ್ಯಾಂಕ್ ಅಧ್ಯಕ್ಷ ಹಳಿಯಾಳದ ಶ್ರೀಕಾಂತ ಫೋಟನೇಕರ್ ಗುರು ದೇಶಪಾಂಡೆಗೆ ಫ್ರೇಟ್ ಕೊಟ್ಟೇ ಟಿಕೆಟ್ ಗಿಟ್ಟಿಸಿದ್ದಾರೆ. ಸ್ವಕ್ಷೇತ್ರ ಹಳಿಯಾಳದಲ್ಲಿ ತನಗೆ ಸಮಾನಾಂತರವಾದ ಇನ್ನೊಂದು ಪವರ್ ಸೆಂಟರ್ ಸೃಷ್ಟಿಯಾಗುವುದೆಂದೂ ದೇಶಪಾಂಡೆ ಸಹಿಸುವುದಿಲ್ಲ. ಇದು ಆತ 27 ವರ್ಷದ ರಾಜಕಾರಣದಲ್ಲಿ ಪಾಲಿಸಿಕೊಂಡು ಬಂದಿರುವ ಪಾಲಿಸಿ. ದೊಡ್ಡ ಆಲದ ಮರದಡಿ ಗರಿಕೆಯೂ ಚಿಗುರದೆನ್ನುತ್ತಾರಲ್ಲ ಹಾಗೆ ದೇಶಪಾಂಡೆ ನೆರಳಿನಲ್ಲಿ ಆತನ ಯಾವ ಶಿಷ್ಯನೂ ಉದ್ಧಾರ ಆಗಿದ್ದಿಲ್ಲ.


ಇದನ್ನು ಅರ್ಥಮಾಡಿಕೊಂಡಿರುವ ದೇಶಪಾಂಡೆಯ ಸಹಚರರು ಆತನ ಹೆದರಿಸಿ, ಬೆದರಿಸಿಯೇ ಅವಕಾಶ ಪಡೆಯುತ್ತಿದ್ದಾರೆ. ಹಿಂದೆ ದೇಶಪಾಂಡೆ ಪಟೇಲರ ಸಚಿವ ಸಂಪುಟದಲ್ಲಿದ್ದಾಗ ಆತನ ಬಲಗೈ ಬಂಟನಾಗಿದ್ದ ವಿ.ಡಿ.ಹೆಗಡೆ (ಹಾಲಿ ಜೆಡಿಎಸ್ ಶಾಸಕ ಸುನೀಲ್ ಹೆಗಡೆ ಅಪ್ಪ) ಬಾಸ್‌ನ ಕೊರಳಪಟ್ಟಿ ಹಿಡಿದೇ ಟಿಕೆಟ್ ಪಡೆದು ವಿಧಾನ ಪರಿಷತ್ ಪ್ರವೇಶಿಸಿದ್ದರು. ಇವತ್ತು ಫೋಟನೇಕರ್ ಅದೇ ತಂತ್ರಗಾರಿಕೆಯಿಂದ ಟಿಕೆಟ್ ಪಡೆದಿದ್ದಾರೆ.

ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಮಾಜಿ ಶಾಸಕ-ಟಿಟ್‌ಡೇಟೆಡ್ ಪುಢಾರಿ ಉಮೇಶ್ ಭಟ್ಟ ಯಾನೆ ಉಮ್ಮಾಣಿ ಭಟ್ ಒಂದಿಷ್ಟು ಮ್ಯಾಗಿ ಬಂಟರ ಕಟ್ಟಿಕೊಂಡು ತಿರುಗಿ ಬಿದ್ದಿದ್ದಾರೆ. ದೇಶಪಾಂಡೆ ಕ್ಯಾಂಡಿಡೇಟ್ ಫೋಟನೇಕರ್ ಸೋತರೆ ಇವರಿಗೆಲ್ಲ ಖುಷಿ. ಮ್ಯಾಗಿ ರಾಜ್ಯಪಾಲ ಹುದ್ದೆಯ ಪಾವಿತ್ರ್ಯಕ್ಕೆ ಅಪಚಾರ ಬಗೆದು ಒಳರಾಜಕೀಯದಲ್ಲಿ ನಿರತಳಾಗಿದ್ದಾಳೆ. ಹಾಗಂತ ಮ್ಯಾಗಿ ಬಣಕ್ಕಾಗಲಿ, ತಿರಸ್ಕೃತ ಉಮ್ಮಾಣಿ ಭಟ್ಟನಿಗಾಗಲಿ ಫೋಟನೇಕರ್‌ನ ಸೋಲಿಸುವ ತಾಕತ್ತು ಇಲ್ಲ. ಮ್ಯಾಗಿ ಅದೆಷ್ಟೇ ಹಾರಾಡಿದರೂ ಅಂತಿಮವಾಗಿ ದೇಶಪಾಂಡೆ ಎದುರು ಮಂಡಿಯೂರಿ ಶರಣಾಗಿದ್ದು ಜಿಲ್ಲಾ ಕಾಂಗ್ರೆಸ್‌ನ ಇತಿಹಾಸದಲ್ಲಿ ಹಲವೆಡೆ ದಾಖಲಾಗಿದೆ.

ಪ್ರಭುಗೆ ಪ್ರಾಣಸಂಕಟ


ಸಂಘಪರಿವಾರದ ಸೋಗಲಾಡಿಗಳು ಮೇಲ್ಮನೆ ಟಿಕೆಟ್‌ಗಾಗಿ ಮಾಡಿದ ಕಸರತ್ತು ರೋಚಕವಾಗಿದೆ. ರೆಡ್ಡಿ ಬಣ, ಯಡ್ಡಿ ಗ್ಯಾಂಗ್ ಮತ್ತು ಚೆಡ್ಡಿ ಟೋಳಿಯ ಮೂರು ಕ್ಯಾಂಡಿಡೇಟ್‌ಗಳು ಅಂತಿಮ ಕ್ಷಣದವರೆಗೂ ನೆಕ್ ಟು ನೆಕ್ ಫೈಟಿಂಗ್ ಮಾಡಿದರು. ಮಾಜಿ ಮಂತ್ರಿ ದೀವ ಲಾಬಿಯ ಶಿವಾನಂದನಾಯ್ಕ ಬೆನ್ನಿಗೆ ಸಾಕ್ಷಾತ್ ಸಿಎಂ ಸಾಹೇಬರೇ ನಿಂತಿದ್ದರು. ಚೆಡ್ಡಿಗಳು ಮತ್ತು ಜಿಲ್ಲಾ ಮಂತ್ರಿ ಕಾಗೇರಿ ವಿನೋದ್ ಪ್ರಭು ಎಂಬ ನಾಜೂಕಯ್ಯನೇ ನಮ್ಮ ಯುದ್ಧ ಕುದುರೆ ಎಂದು ಮುಂದೆ ಬಿಟ್ಟಿದ್ದರು. ಕೊನೇ ಹಂತದಲ್ಲಿ ಇದೇ ಕ್ಷೇತ್ರದ ಹಾಲಿ ಎಮ್ಮೆಲ್ಸಿ ಶುಭಲತಾ ಅಸ್ನೋಟಿಕರ್ (ಮಂತ್ರಿ ಆನಂದ ಅಸ್ನೋಟಿಕರ್ ತಾಯಿ) ನಮ್ಮ ಕ್ಯಾಂಡಿಡೇಟ್ ಎಂದು ರೆಡ್ಡಿ ತಂಡ ತರಲೆ ಶುರುಹಚ್ಚಿಕೊಂಡಿತ್ತು.

ಕಳೆದ ಲೋಕಸಭೆ ಚುನಾವಣೆಯಲ್ಲಿ ತನಗೆ ಹೆಲ್ಪ್ ಮಾಡಿದ್ದ ಶಿವಾನಂದನಿಗೆ ಬಿಜೆಪಿ ಟಿಕೆಟ್ ಕೊಟ್ಟರೆ ಗೆಲ್ಲಿಸುವ ಹೊಣೆ ತನ್ನದೆಂದು ಉತ್ತರಖಂಡದ ರಾಜ್ಯಪಾಲೆ ಮ್ಯಾಗಿಯೇ ಖುದ್ದು ಸಿಎಂ ಯಡ್ಡಿಯ ಮನೆಗ್ಹೋಗಿ ಪ್ರಾಮಿಸ್ ಮಾಡಿ ಬಂದರು. ಇದೊಂದು ರಾಜ್ಯಪಾಲರು ಶಿಷ್ಟಾಚಾರ ಕಡೆಗಣಿಸಿ ರಾಜಕೀಯ ಮಾಡಿದ ಕೊಳಕು ಪ್ರಸಂಗವೆಂಬ ಬೊಬ್ಬೆ ಬಿಜೆಪಿ-ಕಾಂಗ್ರೆಸ್ ಎರಡೂ ಕಡೆಯೆದ್ದಿತು. ಮೂರ್ಖ ಮ್ಯಾಗಿ ಅಂದುಸುಟ್ಟ ಬೆಕ್ಕಂತೆ ತೆಪ್ಪಗೆ ಜಾಗ ಖಾಲಿ ಮಾಡಿದರು.


ಅನಿಲ್‌ಕುಮಾರ್

ಇತ್ತ ಬ್ರಾಹ್ಮಣರ ಆರೆಸ್ಸೆಸ್ ಲಾಬಿ ಶೂದ್ರ ಶಿವಾನಂದ ನಾಯ್ಕನ ಮೇಲೆ ಇಡಿಯಾಗೇ ಮುರುಕೊಂಡು ಬಿತ್ತು. ಸಂಸದ ಅನಂತ್ಕಾಣಿ ಮತ್ತು ಜಿಲ್ಲಾ ಮಂತ್ರಿ ಕಾಗೇರಿ ಎಂಬ ಗುಳ್ಳೇನರಿ ಆರೆಸ್ಸೆಸ್ ವಲಯದಲ್ಲಿ ಶಿವಾನಂದ ನಾಯ್ಕನ ವಿರುದ್ಧ ಬಿರುಗಾಳಿ ಎಬ್ಬಿಸಿದರು. ಶೂದ್ರ ಶಿವಾನಂದ ಎಮ್ಮೆಲ್ಸಿಯಾದರೆ ತಮ್ಮ ಬ್ರಾಹ್ಮಣ ಆಧಿಪತ್ಯಕ್ಕೆ ಧಕ್ಕೆ ಗ್ಯಾರಂಟಿ ಎಂಬ ಭಯವೇ ಇದಕ್ಕೆ ಕಾರಣ. ಆದರೆ ಮಂತ್ರಿ ಅಸ್ನೋಟಿಕರ್ ಕೊನೇ ಗಳಿಗೆಯಲ್ಲಿ ತನ್ನ ತಾಯಿಯನ್ನೇ ಹುರಿಯಾಳಾಗಿಸಲು ರೆಡ್ಡಿಗಳ ಮೂಲಕ ಆಡಿದ ಆಟ ಬ್ರಾಹ್ಮಣರನ್ನು ಬೆಚ್ಚಿ ಬೀಳಿಸಿತು. ಯಾವಾಗ ಅನಂತಕುಮಾರ್ ಶಾಸ್ತ್ರಿ ಎಂಬ ರಾಜ್ಯ ಬಿಜೆಪಿ ತಂತ್ರಗಾರ- ರೆಡ್ಡಿಗಾರುಗಳ ಗೆಳೆಯನ ಎಂಟ್ರಿಯಾಯ್ತೋ ಆಗ ಕಾಗೇರಿಯ ಚೆಡ್ಡಿ ಬಣ ನೆಮ್ಮದಿಯ ನಿಟ್ಟುಸಿರು ಬಿಟ್ಟಿತು.

ಶೂದ್ರ ಬಂಡಾಯ



ಅಂತೂ-ಇಂತೂಮಹಾಬ್ರಾಹ್ಮಣ ಅನಂತ್ ಶಾಸ್ತ್ರಿ ಸ್ವಜಾತಿ ಬಣದ ವಿನೋದ್ ಪ್ರಭು ಎಂಬ ಕೊಂಕಣಿ ಬ್ರಾಹ್ಮಣನಿಗೆ (ಗೌಡ ಸಾರಸ್ವತ ಬ್ರಾಹ್ಮಣ) ಟಿಕೆಟ್ ಕೊಡಿಸಿ ಕಾಗೇರಿಯ ಮೂಗುಳಿಸಿದರು. ಇದರಿಂದ ಕೆರಳಿದ ದೀವರ ಗ್ಯಾಂಗು ಬಂಡಾಯದ ಬಾವುಟ ಹಾರಿಸಿತು! ಜಿಲ್ಲಾ ರಾಜಕಾರಣದಲ್ಲಿ ಲಾಗಾಯ್ತಿನಿಂದಲೂ ಎಲ್ಲ ಪಕ್ಷದಲ್ಲೂ ಬಲಾಢ್ಯ ಜಾತಿಗಳಾದ ಹೈಗರ V/s ದೀವರ ಮೇಲಾಟ ಇದ್ದದ್ದೇ. ಟಿಕೆಟ್ ವಂಚಿತ ಶಿವಾನಂದ ನಾಯ್ಕ ತನ್ನ ಆತ್ಮಾಪ್ತ ಸ್ವಜಾತಿ ಸಖ ಅನಿಲ್‌ಕುಮಾರ್ ಎಂಬ ಧನವಂತನನ್ನು ಈಗ ಕ್ಯಾಂಡಿಡೇಟಾಗಿ ಕಣಕ್ಕಿಳಿಸಿ ಚೆಂದ ನೋಡುತ್ತಿದ್ದಾರೆ. ಬೆಂಗಳೂರು ಒಡಿಶಾದಲ್ಲಿ ದೊಡ್ಡ ಪ್ರಮಾಣದ ಗುತ್ತಿಗೆದಾರಿಕೆ ನಡೆಸುವ ಅನಿಲ್ ದೀವರ ತಾಕತ್ತು ತೋರಿಸುವ ಹಠದಿಂದ ತನ್ನ ಕೊಪ್ಪರಿಗೆ ಕಾಸಲ್ಲಿ ಒಂದಿಷ್ಟನ್ನು ಹರಿಸುತ್ತ ಜಿಲ್ಲೆಯ ಉದ್ದಗಲಕ್ಕೆ ಓಡಾಡುತ್ತಿದ್ದಾರೆ. ಇದು ಕಾಗೇರಿ ಅನಂತ್ಕಾಣಿಗಳ ಹೈಗರ ಡೇರೆಯಲ್ಲಿ ಕಂಗಾಲು ಮೂಡಿಸಿಬಿಟ್ಟಿದೆ. ಹೇಗಾದರೂ ಮಾಡಿ ಬಿಜೆಪಿ ಸೋಲಿಸೋ ಹಠ ಅನಿಲ್‌ಗೆ.


ಸೋಲು-ಗೆಲುವಿನ ಗಣಿತ

ಇಡೀ ಜಿಲ್ಲೆಯಲ್ಲಿ ಸುಮಾರು 350ರಷ್ಟಿರುವ ದೀವರ (ಈಡಿಗರ) ಮತ ತನಗೆ ಬರುತ್ತದೆಂಬ ಲೆಕ್ಕಾಚಾರ ಬಿಜೆಪಿ ಬಂಡಾಯ ಅಭ್ಯರ್ಥಿ ಅನಿಲ್ ಗುಂಪಿನದು. ಇದು ಬಿಜೆಪಿಗೆ ದೊಡ್ಡ ಹೊಡೆತ ನೀಡುವುದು ಖಾತ್ರಿ. ಶಿವಾನಂದನಾಯ್ಕರ ತಂಡದ ವಿರೋಧದಿಂದ ಬಣ್ಣಗೆಟ್ಟಿರುವ ಬಿಜೆಪಿ ಕ್ಯಾಂಡಿಡೇಟ್ ವಿನೋದ್ ಪ್ರಭುಗೆ ಸ್ವಂತ ಚರಿಷ್ಮಾ ಒಂಚೂರೂ ಇಲ್ಲ. ಒಂಥರಾ 'ಕೊಮ್ಮ'ನಂಥ ಪ್ರಭು ಜಿಲ್ಲಾ ಬಿಜೆಪಿ ಅಧ್ಯಕ್ಷನಾಗಿದ್ದುಕೊಂಡೇ ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಸ್ವಪಕ್ಷದ ಕುಮಟಾ ಮತ್ತು ಭಟ್ಕಳದ ಕ್ಯಾಂಡಿಡೇಟ್‌ಗಳ ಸೋಲಿಗೆ ಶಕ್ತಿ ಮೀರಿ ಪ್ರಯತ್ನಿಸಿದ್ದ.

ಪಾಪದ ಶಶಿಭೂಷಣ ಹೆಗಡೆ ಮತ್ತು ಶಿವಾನಂದ ನಾಯ್ಕರ ವಿರುದ್ಧ ಹೊಟ್ಟೆಕಿಚ್ಚಿನ ರಾಜಕಾರಣ ಮಾಡಿದ ಪಾಪವೇ ಈಗ ಪ್ರಭುಗೆ ಮುಳುವಾಗಿದೆ. ಆನಂದ ಅಸ್ನೋಟಿಕರನ ಕಳ್ಳ ಕಾಸಿಗೆ ಆರೆಸ್ಸೆಸ್ 'ಗಣವೇಷ'ವನ್ನೇ ಹರಾಜು ಹಾಕಿದ್ದ ಪ್ರಭು ಎಂದರೆ ಕಾಗೇರಿ-ಅನಂತ್ಕಾಣಿ ಬಿಟ್ಟರೆ ಉಳಿದೆಲ್ಲರೂ ಅಸಹ್ಯದಿಂದ ಮೂಗು ಮುರಿಯುತ್ತಾರೆ. ಜಿಲ್ಲೆಯ ಹನ್ನೊಂದು ತಾಲ್ಲೂಕುಗಳ ಮತದಾರರ ಜಾತಿ ಮಾದರಿ ಮತ್ತು ಬಿಜೆಪಿಯೊಳಗಿನ ಬಂಡಾಯ ನೋಡಿದರೆ ವಿನೋದ್ ಪ್ರಭು ಗೆಲ್ಲುವ ಛಾನ್ಸೇ ಕಾಣಿಸದು.

ಅಂಕೋಲ-ಕಾರವಾರದಲ್ಲಿ ಸಚಿವ ಆನಂದನ ಅವಾಂತರ-ಆರ್ಭಟದಿಂದ ಬಿಜೆಪಿಗೆ ಮೈನಸ್ ಆಗುವುದು

ಮಹಿಮಾ ಮಹಿಮೆಗೆ ಬೆಚ್ಚಿಬಿದ್ದ ಬಿಜೆಪಿ


ಮಹಿಮಾ ಪಾಟೀಲ್

ಮುಖ್ಯಮಂತ್ರಿ ಯಡಿಯೂರಪ್ಪನವರ ತವರು ಶಿವಮೊಗ್ಗದಲ್ಲಿ ವಿಧಾನ ಪರಿಷತ್ ಚುನಾವಣೆ ತೀವ್ರ ಕುತೂಹಲ ಮೂಡಿಸಿದೆ. ಈ ಬಾರಿ ಬಿಜೆಪಿಗೆ ಸೋಲು ಖಚಿತ ಎಂಬುದು ಗೊತ್ತಾಗುತ್ತಿದ್ದಂತೆಯೇ ಯಡ್ಡಿ ಮತ್ತು ಅವರ ಬಣ ಸಿದ್ದರಾಮಣ್ಣ ಎಂಬ ಹಿಂದುಳಿದ ಜಾತಿಗೆ ಸೇರಿದ ಹಳೇ ಚೆಡ್ಡಿಯನ್ನು ಕಣಕ್ಕಿಳಿಸಿ, ಅವರ ರಾಜಕೀಯ ಭವಿಷ್ಯವನ್ನು ಬಲಿ ನೀಡಲು ಹೊರಟಿದೆ.


ವಿಧಾನ ಪರಿಷತ್ ಚುನಾವಣೆಯ ದಿನಾಂಕ ಪ್ರಕಟವಾಗುತ್ತಿದ್ದಂತೆಯೇ ಬಿಜೆಪಿಯ ದೊಡ್ಡ ದೊಡ್ಡ ನಾಯಕರ ಹೆಸರು ಅಭ್ಯರ್ಥಿ ಸ್ಥಾನಕ್ಕೆ ಕೇಳಿಬಂದಿತ್ತು. ಅವುಗಳ ಪೈಕಿ ರಾಜ್ಯ ಬಿಜೆಪಿಯ ಪ್ರಧಾನ ಕಾರ್ಯದರ್ಶಿ ಭಾನು ಪ್ರಕಾಶ್, ಮಾಜಿ ಸಂಸದ ಆಯನೂರು ಮಂಜುನಾಥ್, ಮಾಜಿ ವಿಧಾನ ಪರಿಷತ್ ಸದಸ್ಯ ಶಾಂತವೀರಪ್ಪ ಗೌಡ, ಮಾಜಿ ಶಾಸಕ ಎಚ್.ಎಂ.ಚಂದ್ರಶೇಖರಪ್ಪ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಆರ್.ಎಂ. ಮಂಜುನಾಥ ಗೌಡರ ಹೆಸರು ಮುಂಚೂಣಿಯಲ್ಲಿದ್ದವು. ಇನ್ನು ತೆರೆಮರೆಯಲ್ಲಿ ಈಶ್ವರಪ್ಪ ಮಗ ಕೂಡ ತಾನೇ ಅಭ್ಯರ್ಥಿ ಎಂದು ಬೀಗುತ್ತಾ ಓಡಾಡಿಕೊಂಡಿದ್ದ.

ಆದರೀಗ ಕಿತ್ತಾಟ ಮತ್ತು ಬಂಡಾಯದಿಂದ ಬಿಜೆಪಿ ವರ್ಚಸ್ಸು ಕಳೆದುಕೊಂಡಿರುವುದರಿಂದ ತಾವು ಗೆಲ್ಲುವುದು ಕಷ್ಟ ಎಂದರಿತ ಎಲ್ಲ ದೊಡ್ಡ ನಾಯಕರು ಜಾತಿ, ಸ್ಥಾನಮಾನ, ಅಧಿಕಾರ, ಸಮಯದ ಅಭಾವ ತರಹದ ವಿವಿಧ ಕಾರಣಗಳನ್ನು ನೀಡಿ ಸ್ಪರ್ಧಿಸುವ ನಿರ್ಧಾರದಿಂದ ಒಬ್ಬೊಬ್ಬರಾಗಿ ಹಿಂದೆ ಸರಿದರು. ಆಗ ವಿಧಿ ಇಲ್ಲದೆ 'ಕಾಟಿಕ್' ಸಮುದಾಯದ ಮಾಜಿ ನಗರಸಭಾ ಅಧ್ಯಕ್ಷ ಆರ್.ಕೆ. ಸಿದ್ದರಾಮಣ್ಣರನ್ನು ಪತ್ತೆ ಹಚ್ಚಿ ಆತನನ್ನು ಮನೆಯಿಂದ ಕರೆತಂದ ಬಿಜೆಪಿ ನಾಯಕರು ಅವರನ್ನು ಚುನಾವಣಾ ಕಣದಲ್ಲಿ 'ಬಲಿ' ನೀಡಲು ಸಿದ್ಧತೆ ನಡೆಸಿದ್ದಾರೆ.


ಏನೇ ಆದರೂ ಮುಖ್ಯಮಂತ್ರಿ ತಮ್ಮ ಕೈ ಬಿಡುವುದಿಲ್ಲ, ತಮಗೆ ಟಿಕೆಟ್ ಕೊಟ್ಟೇಕೊಡುತ್ತಾರೆ ಎಂದು ಅವರ ಹಿಂದೆ-ಮುಂದೆ ಓಡಾಡಿಕೊಂಡಿದ್ದ ಶಾಂತವೀರಪ್ಪ ಗೌಡರಿಗೆ ಬೇಕಂತಲೇ ಯಡ್ಡಿ ಟಿಕೆಟ್ ನೀಡಲಿಲ್ಲ. ಒಂದು ವೇಳೆ ಶಿಕಾರಿಪುರದವರಾದ ಶಾಂತವೀರಪ್ಪ ಗೌಡ ಸೋತರೆ, ತಾವೇ ಸೋತಂತೆ ಎಂದು ಯಡ್ಡಿ ಭಾವಿಸಿದ್ದರಿಂದ ಗೌಡರಿಗೆ ಟಿಕೆಟ್ ಕೊಡುವ ಧೈರ್ಯ ಮಾಡಿಲ್ಲ. ಕೊನೆಯ ಕ್ಷಣದವರೆಗೂ ಯಡ್ಡಿ ಕೊಟ್ಟ ಮಾತನ್ನು ತಪ್ಪಲಾರರು ಎಂದೇ ನಂಬಿದ್ದ ಶಾಂತವೀರಪ್ಪ ಗೌಡ ಆರಂಭದಲ್ಲಿ ಬಂಡಾಯದ ಬಾವುಟ ಹಾರಿಸುವುದಾಗಿ ಬೆದರಿಸಿದರಾದರೂ ಈಗ ಅದನ್ನು ಕೈಬಿಟ್ಟು ತಮ್ಮ ಮನೆಯಲ್ಲಿ ಕುಳಿತು ತಮ್ಮ ದಪ್ಪ ಮೀಸೆಯಲ್ಲಿನ ಕೂದಲನ್ನು ಎಣಿಸುತ್ತಿದ್ದಾರೆ.

ಮಹಿಮಾ ಮಹಿಮೆ

ಇತ್ತೀಚೆಗೆ ಕಾಂಗ್ರೆಸ್ ಸೇರಿದ ಮಾಜಿ ಮುಖ್ಯಮಂತ್ರಿ ಜೆ.ಎಚ್.ಪಟೇಲರ ಮಗ ಮಹಿಮಾ ಪಟೇಲ್ ಕಾಂಗ್ರೆಸ್ ಅಭ್ಯರ್ಥಿ. ಮಾಜಿ ಸಚಿವ ಕಾಗೋಡು ತಿಮ್ಮಪ್ಪರನ್ನು ಕಣಕ್ಕಿಳಿಸಲು ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ಉದ್ದೇಶಿಸಿತ್ತಾದರೂ, ಚುನಾವಣೆಗೆ ಕಾಗೋಡು ಹೆದರಿ ಓಡಿಹೋದರು. ಕೇವಲ ಗತ್ತಿನ ರಾಜಕೀಯ ಮಾಡುವ ತಮ್ಮನ್ನು ಯಾರೂ ಬೆಂಬಲಿಸಲಾರರು ಎಂಬ ಭಯ ಕಾಗೋಡುಗೆ ಇದ್ದಿರಬೇಕು. ಏನೇ ಇರಲಿ, ಈಗ ಲಿಂಗಾಯತ ಸಮುದಾಯದ ಅಭ್ಯರ್ಥಿಯನ್ನು ಕಾಂಗ್ರೆಸ್ ಕಣಕ್ಕಿಳಿಸಿರುವುದರಿಂದ ಚುನಾವಣೆಗೆ ರಂಗು ಬಂದಿದೆ. ಮಹಿಮಾ ಮಹಿಮೆಗೆ ಹೆಚ್ಚುಕಡಿಮೆ ಬಿಜೆಪಿ ಬೆಚ್ಚಿಬಿದ್ದಿದ್ದು, ಕಾಂಗ್ರೆಸ್ ಗೆಲುವಿಗೆ ದಾರಿ ಸುಗಮವಾಗಿದೆ.



ದಾವಣಗೆರೆ ಜಿಲ್ಲೆಗೆ ಸೇರಿರುವ ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕುಗಳು ಈ ಕ್ಷೇತ್ರದ ವ್ಯಾಪ್ತಿಗೆ ಬರುತ್ತವೆ. ಹೆಚ್ಚುಕಡಿಮೆ 960 ಮತಗಳು ಈ ತಾಲ್ಲೂಕುಗಳಲ್ಲಿವೆ. ಹೀಗಾಗಿ ಅಭ್ಯರ್ಥಿಗಳ ಗೆಲುವಿನಲ್ಲಿ ಈ ತಾಲೂಕುಗಳ ಮತದಾರರ ಪಾತ್ರ ಬಹಳ ದೊಡ್ಡದು. ಮಹಿಮಾರ ಬಗ್ಗೆ ಸಹಾನುಭೂತಿಯ ಅಲೆ ಇರುವುದರಿಂದ ಅವರ ಗೆಲುವು ಖಚಿತ ಎಂದೇ ಹೇಳಲಾಗುತ್ತಿದೆ. ಆದರೂ ಒಂದಂತೂ ಸ್ಪಷ್ಟ, ಇನ್ನು ಮುಂದಾದರೂ ಮಹಿಮಾ ಕಲ್ಲಿಗಿಂತ ಜನರನ್ನು ನಂಬಿ ರಾಜಕಾರಣ ಮಾಡುವ ನಿರ್ಧಾರಕ್ಕೆ ಬಂದರೆ ಅವರಿಗೆ ಒಳಿತು. ಯಡ್ಡಿಯ ಕುಟುಂಬ ರಾಜಕಾರಣ ಮತ್ತು ದೌರ್ಬಲ್ಯಗಳು ಈಗ ಮತದಾರರಲ್ಲಿ ರೇಜಿಗೆ ಮೂಡಿಸಿವೆ. ಇನ್ನು ಚುನಾವಣೆ ಸಂದರ್ಭದಲ್ಲಿ ಭರವಸೆಗಳ ಮಹಾಪೂರವನ್ನೇ ಹರಿಸುವ ಯಡ್ಡಿ ಗ್ಯಾಂಗ್‌ನ ಮಾತನ್ನು ನಂಬುವ ಸ್ಥಿತಿಯಲ್ಲಿ ಜನರಿಲ್ಲ. ಯಾಕೆಂದರೆ, ಕಳೆದ ಲೋಕಸಭೆ ಚುನಾವಣಾ ಸಂದರ್ಭದಲ್ಲಿ ಯಡ್ಡಿ ಕೊಟ್ಟ ಮಾತನ್ನು ಇಲ್ಲಿಯ ತನಕ ಈಡೇರಿಸಿಲ್ಲ. ಹೀಗಾಗಿ ಇವತ್ತು ಜನ ಮಾತ್ರವಲ್ಲ ಈ ಚುನಾವಣ



ಗ್ಯಾರಂಟಿ. ಹೊನ್ನಾವರ, ಭಟ್ಕಳ ಮತ್ತು ಸಿದ್ದಾಪುರದಲ್ಲಿ ಕಾಂಗ್ರೆಸ್‌ಗೆ ಫೈಟ್ ಕೊಡುತ್ತಿರುವುದು ಬಂಡಾಯ ಬಿಜೆಪಿ ...ಪನೇ ಹೊರತು ಗುಮ್ಮನ ಗುಸುಕ ಪ್ರಭು ಅಲ್ಲ! ...ಮಟಾದಲ್ಲಿ ತವರೂರವನೆಂಬ ಸಣ್ಣ ಸಿಂಪಥಿ ಪ್ರಭು ...ಗ್ಗೆ ಇದೆ. ಶಿರಸಿಯಲ್ಲಿ ಕಾಗೇರಿ ಕೈಚಳಕ ನೆರವಾಗಲಿದೆ. ...ನಂತ್ಮಾಣಿಯಿಂದ ಪ್ರಭುಗೆ ಲಾಭಕ್ಕಿಂತ ಹಾನಿಯೇ ಜಾಸ್ತಿ ...ನಂತ್ಮಾಣಿಯ ಜಾತಕವೇ ಹಾಗಿದೆ. ಹಳಿಯಾಳ-ಮುಂಡ ...ಗೋಡ್-ಜೋಯಿಡಾ-ಯಲ್ಲಾಪುರಗಳಲ್ಲಿ ಕಾಂಗ್ರೆಸ್‌ನ ಘೋಟನೇಕರ್‌ನ ಬಲವೇ ಜಾಸ್ತಿ. ಇಲ್ಲಿ ಘೋಟನೇಕರ್ ...ಮುತ್ತವನ ಬಾಸ್ ದೇಶಪಾಂಡೆಗಳ ಒಳ ಆಟದ ಎದುರು ಪ್ರಭುನ ಬ್ರಾಹ್ಮಣ ಬಣ ಲೆಕ್ಕಕ್ಕೇ ಇಲ್ಲ. ಮುಂಡಗೋಡ್ ಬಿಜೆಪಿ ಎಮ್ಮೆಲ್ಲೆ ವಿ.ಎಸ್.ಪಾಟೀಲರಿಗೆ ಪ್ರಭುನ ದೊರೆ ...ನಂತ್ಮಾಣಿಯ ಕಂಡರಾಗದು.


ಜಿಲ್ಲೆಯಲ್ಲಿ ಸುಮಾರು 500 ಅಲ್ಪಸಂಖ್ಯಾತರ ಮತವಿದೆ. ಇದರಲ್ಲಿ ಒಂದೇ ಒಂದು ಬಿಜೆಪಿಗೆ ಸಿಗದು. ...ಜೊತೆಗೆ ಜೆಡಿಎಸ್ ಜತೆಗಿನ ಮೈತ್ರಿ ಕಾಂಗ್ರೆಸ್‌ಗೆ ಇನ್ನಷ್ಟು ಲಾಭ ತರಲಿದೆ. ದೇಶಪಾಂಡೆ ಮೇಲಿನ ಸಿಟ್ಟಿಂದ ಹಳಿಯಾಳದ ಜೆಡಿಎಸ್ ಎಮ್ಮೆಲ್ಲೆ ಸುನೀಲ್ ಹೆಗಡೆ ಘೋಟನೇಕರ್‌ಗೆ ಹೆಲ್ಪ್ ಮಾಡದಿದ್ದರೂ ಬಿಜೆಪಿ ಪರ ...ಬಿಸ ಮಾಡುವ ಸ್ಥಿತಿಯಲ್ಲಿಲ್ಲ. ಆತ ತಾನು ತಟಸ್ಥನೆಂದು ...ಮ್ಮ ಹೇಳಿದ್ದರೂ ಹೈಕಮಾಂಡ್ ಫರ್ಮಾನಿಗೆ ಅಂತಿಮವಾಗಿ ...ಲೆಬಾಗುವ ಸಾಧ್ಯತೆಯೇ ಜಾಸ್ತಿ.

ಇದೆಲ್ಲಕ್ಕಿಂತ ಹೆಚ್ಚಾಗಿ ಕಾಂಗ್ರೆಸ್‌ನ ಘೋಟನೇಕರ್‌ಗೆ ಸಹಕಾರಿ ನೆಟ್‌ವರ್ಕ್ ಇದೆ. ಕೆಡಿಸಿಸಿ ಬ್ಯಾಂಕ್ ಅಧ್ಯಕ್ಷನಾಗಿ ...ತ ಜಿಲ್ಲೆಯಲ್ಲಿ ಪರಿಚಿತ. ಹಾಗೆಯೇ ಕೆಪಿಸಿಸಿ ಅಧ್ಯಕ್ಷ ದೇಶಪಾಂಡೆಗೆ ಘೋಟನೇಕರ್‌ನ ಗೆಲ್ಲಿಸಿಕೊಳ್ಳುವುದು ಅನಿವಾರ್ಯವಾಗಿದೆ. ಜಿಲ್ಲಾ ಮಂತ್ರಿ ಕಾಗೇರಿಗಿಂತಲೂ ದೇಶಪಾಂಡೆಯೇ ಇವತ್ತಿಗೂ ಜಿಲ್ಲೆಯಲ್ಲಿ ಪ್ರಭಾವಿ ನಾಯಕ. ...ತಿ ತಾಲ್ಲೂಕಲ್ಲೂ ದೇಶಪಾಂಡೆಯ ನಿಷ್ಠಾವಂತರ ಬಂಟರ ...ಡೆಯಿದೆ. ಇವರೆಲ್ಲ ಗಂಡನ್ನು ಹೆಣ್ಣು, ಹೆಣ್ಣನ್ನು ಗಂಡು ಮಾಡಬಲ್ಲ ಗೋಲ್‌ಮಾಲ್ ವೀರರು. ಇವರಿಗೆ ಇಂಥ ...ಂಬಾಗಿಲ ಚುನಾವಣೆ ಎದುರಿಸುವ ಕಲೆ ಕರಗತವಾಗಿದೆ! ...ತಿಕಾರಣಕ್ಕೆ ಪ್ರಭುನತ್ತ ವಾಲಿದ್ದ ಜಿಪಂ ಕಾಂಗ್ರೆಸ್ ...ಧ್ಯಕ್ಷ ಎಲ್.ವಿ.ಶಾನಭಾಗ್‌ಗೆ ಉಗಿದು ದೇಶಪಾಂಡೆ ...ಕಿಗೆ ತಂದಿದ್ದಾರೆ. ಇದೆಲ್ಲ ಕಾಂಗ್ರೆಸ್‌ಗೆ ಪ್ಲಸ್‌ಪಾಯಿಂಟ್ ...ು. ಬಿಜೆಪಿ ಕ್ಯಾಂಡಿಡೇಟ್ ಪ್ರಭುನ ಲೋಪ್ರೊಫಾಯಿಲ್, ...ತನ ಹಿಂದೆ-ಮುಂದಿರುವ ಪ್ರಚಂಡ ಸಂಸದ ಅನಂತ್ಮಾಣಿ ಮತ್ತು ನಯವಂಚಕ ಕಾಗೇರಿ ಸೊಕ್ಕುತನ ಮತ್ತು ದೀವರ ...ಡಾಯ ಅಭ್ಯರ್ಥಿಯ ಆರ್ಭಟ ಕಾಂಗ್ರೆಸ್‌ನ ಧಾಡಸಿ ...ೋಟನೇಕರ್‌ಗೆ ಗೆಲುವಿನ ದಾರಿ ಸಲೀಸು ಮಾಡಿಕೊಟ್ಟಿದೆ. ಸೋಲಿನ ಭಯದಿಂದ ಬಿಜೆಪಿಗರು ...ಂದು ಓಟಿಗೆ 25,000 ರೂ. ಕೊಡಲು ರೆಡಿಯಾಗಿದ್ದಾರೆ. ...ಂಗ್ರೆಸ್‌ನ ಘೋಟನೇಕರ್‌ನೂ ಇಷ್ಟೇ ಹಣ ಕೊಡಲು ...ಟಿಟ್ ಮಾಡಿಕೊಂಡಿದ್ದಾರೆ.

ಈ ಹಣದ ಹಣಾಹಣಿಯಲ್ಲಿ 'ಹ್ಯಾಪ' ಪ್ರಭುಗಿಂತ ...ರಾಟಗಾರ' ಘೋಟನೇಕರ್ ಆಯ್ಕೆಯೇ ಬಹುತೇಕ ...ಚಿತವಾಗಿದೆ.

● ನಹುಶ

ರಾಯಚೂರು: ಗೆಲುವಿನ ಹಾದಿಯಲ್ಲಿ ಹಾಲಪ್ಪ


ಹಾಲಪ್ಪ


ರಾಯಚೂರು ವಿಧಾನ ಪರಿಷತ್ ಚುನಾವಣೆಗೆ ಮೈದಾನವೀಗ ಸಿದ್ಧಗೊಂಡಿದೆ. ಅಖಾಡದಲ್ಲಿ ಮೂರು ಜನ ಉಳಿಯುವುದರೊಂದಿಗೆ ಬಲಾಬಲದ ಸ್ಪಷ್ಟ ಚಿತ್ರಣವೂ ದೊರೆಯಲಾರಂಭಿಸಿದೆ. ಬಿಜೆಪಿ ಅಭ್ಯರ್ಥಿ ಹಾಲಪ್ಪ ಆಚಾರ್ಯ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಬಸವರಾಜ ಪಾಟೀಲ್ ನಡುವೆಯೇ ನಿಜವಾದ ಹಗ್ಗ ಜಗ್ಗಾಟ ನಡೆಯಲಿದ್ದು ಪಕ್ಷೇತರನಾಗಿ ಸ್ಪರ್ಧಿಸಿರುವ ಸುಭಾಷ್ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬ ಪರಿಸ್ಥಿತಿಯಿದೆ. ಕ್ಷೇತ್ರದಲ್ಲಿ ಒಟ್ಟು 6300 ಮತದಾರರಿದ್ದು ಅವರಲ್ಲಿ ಗ್ರಾಮ ಪಂಚಾಯತಿ ಸದಸ್ಯರೇ ಸಹಜವಾಗಿ ನಿರ್ಣಾಯಕರಾಗಿದ್ದಾರೆ.

MLC ಚುನಾವಣೆ


ಕಾಂಗ್ರೆಸ್ ಅಭ್ಯರ್ಥಿ ಬಸವರಾಜ್ ಪಾಟೀಲ್ ಅವರು ಈ ಹಿಂದೆ ವಿಧಾನ ಪರಿಷತ್ ಸದಸ್ಯರಾಗಿ ಜನಸಾಮಾನ್ಯರೊಂದಿಗೆ ಗುರುತಿಸಿಕೊಂಡವರು. ಈ ಭಾಗದ ಕಾಂಗ್ರೆಸ್ ಧುರೀಣ, ಮಾಜಿ ಸಂಸದ ಎಚ್.ಜಿ.ರಾಮುಲು ಅವರ ಪುತ್ರ ಎಚ್.ಆರ್.ಶ್ರೀನಾಥ್ ಅವರು ತಮ್ಮ ತಂದೆಯ ಪ್ರಭಾವ ಬಳಸಿಕೊಂಡು ಈ ಹಿಂದೆ ಎರಡು ಬಾರಿ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿಕೊಂಡಿದ್ದರು. ಆದರೆ ಈಗ ತಂದೆ ರಾಮುಲು ಅವರ ಪ್ರಭಾವ ಕಾಂಗ್ರೆಸ್ ಪಾಳೆಯದಲ್ಲಿ ಕಡಿಮೆಯಾಗಿದ್ದರಿಂದ ಈ ಬಾರಿಯ ಟಿಕೆಟ್ ಬಸವರಾಜ್ ಪಾಟೀಲ್ ಪಾಲಾಗಿದೆ. ಬಸವರಾಜ್ ಪಾಟೀಲ್ ಇದ್ದುದರಲ್ಲಿ ಉತ್ತಮ ರಾಜಕಾರಣಿಯೇನೋ ಹೌದು. ಆದರೆ ಸ್ಥಳೀಯ ಸಂಸ್ಥೆಗಳಲ್ಲಿ ಬಿಜೆಪಿಯ ಪ್ರಭಾವ ಜಾಸ್ತಿಯಾಗಿರುವುದರಿಂದ ಹಾಗೂ ಜಿಲ್ಲೆಯಲ್ಲಿ ಕಾಂಗ್ರೆಸ್ ಒಡೆದ ಮನೆಯಾಗಿರುವುದರಿಂದ ಅವರ ಸನ್ನಡತೆಗಳು ಕೆಲಸಕ್ಕೆ ಬಾರದೇ ಹೋಗುವ ಲಕ್ಷಣಗಳೇ ಕಾಣಿಸುತ್ತಿವೆ.

ಬಿಜೆಪಿ ಅಭ್ಯರ್ಥಿಯಾಗಿರುವ ಹಾಲಪ್ಪ ಆಚಾರ್ಯ ರಾಜಕೀಯವಾಗಿ ಅಂಬೆಗಾಲಿಡುವುದನ್ನು ಕಲಿತಿದ್ದು ಜನತಾ ದಳದಲ್ಲಿ. ಮೂಲತಃ ಯಲಬುರ್ಗಾ ತಾಲ್ಲೂಕಿನವರಾದ ಹಾಲಪ್ಪನಿಗೆ ರಾಜಕೀಯ ಗುರು ಎಂದರೆ ಬಸವರಾಜ ರಾಯರೆಡ್ಡಿ. ರಾಯರೆಡ್ಡಿ ದಳದಲ್ಲಿರುವಾಗಿನಿಂದ ಅವರೊಂದಿಗೆ ಹೆಜ್ಜೆ ಇಡುತ್ತಾ ಬಂದ ಹಾಲಪ್ಪ ಒಮ್ಮೆ ವಿಧಾನಸಭಾ ಚುನಾವಣೆಗೆ ಸಂಯುಕ್ತ ದಳದಿಂದ ಸ್ಪರ್ಧಿಸಿ ಸೋಲುಂಡಿದ್ದರು. ರಾಯಚೂರು ಜಿಲ್ಲಾ ಬ್ಯಾಂಕಿನ ನಿರ್ದೇಶಕರಾಗಿರುವ ಹಾಲಪ್ಪ ಅದ್ಯಾವ ಕಾರಣಕ್ಕೋ ಗೊತ್ತಿಲ್ಲ, ಈಗ ರಾಯರೆಡ್ಡಿಯಿಂದ ದೂರವಾಗಿ ಕಳೆದ ವಿಧಾನಸಭಾ ಚುನಾವಣೆಯ ಮುನ್ನಾ ಬಿಜೆಪಿ ಅಂಗಳಕ್ಕೆ ಬಂದು ಬಿದ್ದರು. ನಂತರ ಕೊಪ್ಪಳ ಜಿಲ್ಲಾ ಬಿಜೆಪಿ ಅಧ್ಯಕ್ಷರೂ ಆದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಯಲಬುರ್ಗಾ ಟಿಕೆಟ್‌ಗಾಗಿ ಪಟ್ಟು ಹಿಡಿದಿದ್ದರು. ಆಗ ಯಡಿಯೂರಪ್ಪ ವಿಧಾನಪರಿಷತ್ ಮೆಂಬರ್ ಮಾಡುವುದಾಗಿ ವಾಗ್ದಾನ ಮಾಡಿದ್ದ ಹಿನ್ನೆಲೆಯಲ್ಲಿ ಹಾಲಪ್ಪ ಟಿಕೆಟ್ ತ್ಯಾಗ ಮಾಡಿದ್ದರು. ಅದರಂತೆ ಈಗ ಅವರಿಗೆ ಪರಿಷತ್ ಟಿಕೆಟ್ ಸಿಕ್ಕಿದೆ. ರೆಡ್ಡಿ ಜನಾಂಗಕ್ಕೆ ಸೇರಿರುವ ಹಾಲಪ್ಪ ಅವರಿಗೆ ಕ್ಷೇತ್ರದಲ್ಲಿ ಸ್ವಜಾತಿಯ ಬೆಂಬಲವೇನೂ ಹೇಳಿಕೊಳ್ಳುವಂತಿಲ್ಲ. ಹಾಗಾಗಿ ಪಕ್ಷದ ಬೆಂಬಲ ಮತ್ತು ದುಡ್ಡಿನ ಬೆಂಬಲಗಳನ್ನೇ ನೆಚ್ಚಿಕೊಂಡು ಚುನಾವಣೆ ಎದುರಿಸುತ್ತಿದ್ದಾರೆ.


ಬಸವರಾ...


ಶಿವರಾಮೇಗೌಡ


ಸಂಗಣ್ಣ ಕರಡಿ


ವಿರೂಪಾಕ್ಷಪ್ಪ

ರಾಯಚೂರು ಜಿಲ್ಲೆಯಲ್ಲಿ ನಾಲ್ಕು ಕ್ಷೇತ್ರಗಳಲ್ಲಿ ಇಬ್ಬರು ಬಿಜೆಪಿ ಶಾಸಕರಿದ್ದರೆ ಉಳಿದಂತೆ ಕಾಂಗ್ರೆಸ್ ಮತ್ತು ಜೆಡಿಎಸ್‌ನಿಂದ ತಲಾ ಒಬ್ಬೊಬ್ಬರು ಶಾಸಕರಿದ್ದಾರೆ. ಕೊಪ್ಪಳ ಜಿಲ್ಲೆಯಲ್ಲಿ ಮೂವರು ಬಿಜೆಪಿ ಶಾಸಕರು ಹಾಗೂ ಕಾಂಗ್ರೆಸ್ ಮತ್ತು ಜೆಡಿಎಸ್‌ನಿಂದ ತಲಾ ಒಬ್ಬೊಬ್ಬರು ಶಾಸಕರಿದ್ದಾರೆ. ಜಾತಿಯಾಧಾರಿತವಾಗಿ ನೋಡುವುದಾದರೆ ಕಾಂಗ್ರೆಸ್‌ನ ಬಸವರಾಜ್ ಪಾಟೀಲ್ ಹೆಚ್ಚು ಮತ ಪಡೆಯಬಹುದು. ವಿಧಾನ ಪರಿಷತ್ ಚುನಾವಣೆಗಳಲ್ಲಿ ಜಾತಿರಾಜಕಾರಣ ವರ್ಕ್‌ಔಟ್ ಆಗುವುದು ತುಸು ಕಷ್ಟ. ಎರಡು ಜಿಲ್ಲೆಗಳಲ್ಲಿರುವ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಗಳಲ್ಲಿ ಬಿಜೆಪಿಯೇ ಪ್ರಾಬಲ್ಯ ಸಾಧಿಸಿದೆ. ಹಾಗಾಗಿ ಇಲ್ಲಿ ಜಾತಿ ಲೆಕ್ಕಾಚಾರ ತಲೆಕೆಳಗಾಗುವ ಸಾಧ್ಯತೆಯೇ ಹೆಚ್ಚು. ಬಿಜೆಪಿಯ ಶಾಸಕರು, ಸಂಸದರು, ಸಚಿವರು ತಮ್ಮ ಅಭ್ಯರ್ಥಿಯ ಗೆಲುವನ್ನು ಒಂದು ಪ್ರತಿಷ್ಠೆಯ ಪ್ರಶ್ನೆಯಾಗಿ ತೆಗೆದುಕೊಂಡಿರುವುದರಿಂದ ಅದು ನಿಸ್ಸಂದೇಹವಾಗಿ ಹಾಲಪ್ಪರಿಗೆ ಆನೆಬಲ ತಂದುಕೊಡಲಿದೆ. ಇನ್ನು ಕಾಂಗ್ರೆಸ್-ಜೆಡಿಎಸ್ ಹೊಂದಾಣಿಕೆ ಮಾಡಿಕೊಂಡಿವೆಯಾದರೂ ಸ್ಥಳೀಯ ಸಂಸ್ಥೆಗಳಲ್ಲಿ ಅವರ ಪ್ರಾಬಲ್ಯವಿಲ್ಲದಿರುವುದರಿಂದ ಅದು ಬಹಳಷ್ಟು ಉಪಯೋಗಕ್ಕೆ ಬರುವುದಿಲ್ಲ. ರಾಯಚೂರು ಜಿಲ್ಲೆಯಲ್ಲಿರುವ ಪ್ರಭಾವಿ ಜೆಡಿಎಸ್ ಮುಖಂಡ ಬಸವರಾಜ್ ಪಾಟೀಲ್ ಅನ್ವರಿ ಸ್ವಜಾತಿಪ್ರೇಮ ಮರೆತು ಪಕ್ಷಕ್ಕೆ ನಿಷ್ಠನಾಗಿ ಕಾರ್ಯನಿರ್ವಹಿಸಿದರೆ ಹಾಲಪ್ಪರ ಓಟಕ್ಕೆ ಒಂದಿಷ್ಟು ಬ್ರೇಕ್ ಬೀಳಬಹುದು. ಸದ್ಯಕ್ಕಿರುವ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಹಾಲಪ್ಪ ನಿಸ್ಸಂದೇಹವಾಗಿ ರೇಸ್‌ನಲ್ಲಿ ಮುಂದಿದ್ದಾರೆ.

● ವಿನಯ್ ಹುರುಳಿಕುಪ್ಪಿ

...ಲ್ಲಿ ಮತದಾರರಾಗಿರುವ ಬಹಳಷ್ಟು ಜನಪ್ರತಿನಿಧಿಗಳೇ ...ರಂಗವಾಗಿಯೇ ಬೈದುಕೊಂಡು ಓಡಾಡುತ್ತಿದ್ದಾರೆ.


ಈ ಮಧ್ಯೆ ಯಡ್ಡಿಯನ್ನು ನಂಬಿ 'ಆಪರೇಷನ್ ...ಲ'ಕ್ಕೆ ತುತ್ತಾಗಿ ವಂಚಿತರಾದವರಂತೂ ಈಗ ಇನ್ನಿಲ್ಲದಂತೆ ...ತಪಿಸುತ್ತಿದ್ದಾರೆ. ಆದ್ದರಿಂದ ಈಗ ಎದುರಾಗಿರುವ ...ಕಾಶವನ್ನು ಸದುಪಯೋಗಪಡಿಸಿಕೊಂಡು ಯಡ್ಡಿಗೆ ...ಕ್ಷವಾಗಿ ಎಚ್ಚರಿಕೆ ನೀಡಲು ಇವರೆಲ್ಲಾ ಸಜ್ಜಾಗುತ್ತಿದ್ದಾರೆ.

ಇನ್ನು ಬಿಜೆಪಿಯಲ್ಲಿನ ಭಿನ್ನಮತ ಕೂಡ ಕಾಂಗ್ರೆಸ್ ...ಲುವಿಗೆ ಸಹಕಾರಿಯಾಗಲಿದೆ. ಚಿಡ್ಡಿ ಶಾಸಕರಾದ ...ಂಕಾಚಾರ್ಯ ಮತ್ತು ಗೋಪಾಲಕೃಷ್ಣ ಬೇಳೂರು ...ಲೂ ಯಡ್ಡಿ ಕಂಡರೆ ಉರಿದುಬೀಳುತ್ತಾರೆ. ಸಚಿವ ...ರಪ್ಪ, ಡಿ.ಎಚ್. ಶಂಕರಮೂರ್ತಿ ಮತ್ತಿತರರ ವಿರುದ್ಧ ...ಡ್ಡಿ ಗ್ಯಾಂಗ್ ನಡೆಸುತ್ತಿರುವ ಮುಸುಕಿನ ಗುದ್ದಾಟ ...ದಿನಂತೆ ಮುಂದುವರೆದಿದೆ. ಇಂತಹ ಪರಿಸ್ಥಿತಿಯಲ್ಲಿ ... ಮಗನನ್ನೇ ಪಕ್ಷದ ಅಭ್ಯರ್ಥಿ ಮಾಡಿದರೆ ಆತ ...ಲ್ಲುವುದು ಕಷ್ಟ ಎಂಬ ಕಾರಣಕ್ಕೇ ಸಚಿವ ಈಶ್ವರಪ್ಪ ... ಮಗ ಕಣಕ್ಕಿಳಿಯಲು ಬಿಡಲಿಲ್ಲ. ಈ ಎಲ್ಲ ...ಗೆಗಳಿಂದ ಬೇಸತ್ತಿರುವ ಜನಪ್ರತಿನಿಧಿಗಳು ಬಿಜೆಪಿಗೆ ...ನ್ನ ಕಲಿಸಲು ಕಾಂಗ್ರೆಸ್‌ಅನ್ನು ಗೆಲ್ಲಿಸುವ ತೀರ್ಮಾನಕ್ಕೆ ...ದಿದ್ದಾರೆ.

...ಒಟ್ಟಾರೆ ಬಿಜೆಪಿಯ ಆಂತರಿಕ ರಾಜಕೀಯಕ್ಕೆ ಪಾಪ ...ಯಲ್ಲಿ ತಮ್ಮ ಪಾಡಿಗೆ ತಾವು ಕೂತಿದ್ದ ಸಿದ್ದರಾಮಣ್ಣ ...ವಾಗಬೇಕಾಗಿ ಬಂದಿದೆ. ಹಿಂದೆಸರಿದಲೂ ಹಿಂದುಳಿದ ...ವರನ್ನು ಬಿಜೆಪಿ ಬಳಸಿಕೊಳ್ಳುತ್ತಿರುವುದು ಇಂತಹ ...ಕ್ಕೆ ಹಾಗೆ? ಸಿದ್ದರಾಮಣ್ಣ ಲೇಟೆಸ್ಟ್ ಉದಾಹರಣೆ.

● ನೀರದ ಬೆಂಗಳೂರು

ಬಳ್ಳಾರಿ: ದುರಹಂಕಾರಿ ರೆಡ್ಡಿಗಳಿಗೆ ಘೋರ್ಪಡೆ ಸೆಡ್ಡು



ಒಳಗೊಳಗೇ ಸಿಬಿಐ ತನಿಖೆಯ ಬಿಸಿ ಬುಡಕ್ಕೆ ತಾಗಿದ್ದರೂ, ನಾನ್‌ಸೆನ್ಸ್ ಮುಖ್ಯಮಂತ್ರಿ ಯಡಿಯೂರಪ್ಪನ ಕಾರಣದಿಂದ ದರ್ಪ, ಅಹಂಕಾರಗಳಿಂದ ಮೆರೆಯುತ್ತಿರುವ ಬಳ್ಳಾರಿಯ ರೆಡ್ಡಿಗಳಿಗೆ ಎಂಎಲ್‌ಸಿ ಚುನಾವಣೆಯಲ್ಲಿ ಮುಖಭಂಗವಾಗಲಿರುವುದು ದಿನೇದಿನೇ ಖಚಿತಗೊಳ್ಳತೊಡಗಿದೆ.

ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ಮಾಜಿ ಸಚಿವ ಘೋರ್ಪಡೆ ಸಹೋದರ ವೆಂಕಟರಾವ್ ಘೋರ್ಪಡೆ ಹಣಬಲದಲ್ಲೂ ಸೈ, ತೋಳ್ಬಲದಲ್ಲೂ ಸೈ. ಈ ಕಾರಣದಿಂದಾಗಿ ರೆಡ್ಡಿಗಳಿಗೆ ಸೋಲಿನ ಭಯ ಕಾಡತೊಡಗಿದೆ. ಬಿಜೆಪಿಯಿಂದ ಸ್ಪರ್ಧಿಸಿರುವ ಮೃತ್ಯುಂಜಯ ಜಿನಗಾ ಎಂಬ ಆರ್‌ಎಸ್‌ಎಸ್ ಕ್ರಿಮಿ ಈಗ ರೆಡ್ಡಿಗಳ ಗುಲಾಮ. ಈತನಿಗೆ ರೆಡ್ಡಿಗಳ ಹಣಬಲ ಬಿಟ್ಟರೆ ಜನಬೆಂಬಲವಿಲ್ಲ.

ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಕಾಂಗ್ರೆಸ್ ಪ್ರಬಲವಾಗಿದೆ. ಒಟ್ಟು ೪೫೦೦ ಸ್ಥಳೀಯ ಸಂಸ್ಥೆ ಸದಸ್ಯರ ಪೈಕಿ ಬಹುತೇಕರು ಕಾಂಗ್ರೆಸ್‌ನವರು. ಹಡಗಲಿ ಹಾಗೂ ಹರಪನಹಳ್ಳಿ ತಾಲೂಕುಗಳಲ್ಲಿ ಎಂ.ಪಿ. ಪ್ರಕಾಶರ ಪುತ್ರ ರವೀಂದ್ರರ ಹಿಡಿತ ಚೆನ್ನಾಗಿರುವುದು ಕಾಂಗ್ರೆಸ್‌ನ ಘೋರ್ಪಡೆಗೆ ಮತ್ತೊಂದು ಪ್ಲಸ್ ಪಾಯಿಂಟ್. ದೇವೇಗೌಡರ ಕಾರಣದಿಂದ ಜೆಡಿಎಸ್‌ನ ಎಲ್ಲ ಮತಗಳೂ ಘೋರ್ಪಡೆ ಪಾಲಾಗುವುದೂ ಗ್ಯಾರಂಟಿ.

ಒಬಳಾಪುರ ಮೈನ್ಸ್ ವಿವಾದದಿಂದಾಗಿ ರೆಡ್ಡಿಗಳ ತಲೆರೋಸಿ ಹೋಗಿರುವುದರಿಂದ ಇಲೆಕ್ಷನ್ನಿನಲ್ಲಿ ಅವರ್‍ಯಾರೂ ಆಸಕ್ತಿಯಿಂದ ಪಾಲ್ಗೊಳ್ಳುತ್ತಿಲ್ಲ. ರೆಡ್ಡಿಗಳನ್ನು ಹಣಿಯಲು ಇದು ಸೂಕ್ತ ಕಾಲ. ರೆಡ್ಡಿಗಳ ಚೇಲಾಗಳಂತಿರುವ ಅಧಿಕಾರಿವರ್ಗ ಬಿಜೆಪಿಯ ಜಿನಗಾಪರ ಕೆಲಸ ಮಾಡಬಹುದು. ಹೀಗಾಗದಂತೆ ನೋಡಿಕೊಳ್ಳುವುದು ಕಾಂಗ್ರೆಸ್‌ನ ಜವಾಬ್ದಾರಿ. ಕಳೆದ ಎಂ.ಪಿ. ಚುನಾವಣೆಯಲ್ಲಿ ಶ್ರೀರಾಮುಲು ಸಹೋದರಿ ತರಕಾರಿ ಶಾಂತ ಅಪರಾತಪರಾ ಲೆಕ್ಕದಲ್ಲಿ ಸಾವಿರ ಚಿಲ್ರೆ ಮತಗಳಿಂದ ಗೆದ್ದಿದ್ದಳಷ್ಟೇ. ಈಗ ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿದ್ದ ಕಾರಣದಿಂದ ಆಕೆಯ ಸ್ಥಾನಕ್ಕೂ ಕುತ್ತು ಬರುವ ಛಾನ್ಸ್‌ಗಳಿವೆ.

ಬಳ್ಳಾರಿ ಏರ್‌ಪೋರ್ಟ್ ವಿಷಯದಲ್ಲಿ ಗೂಂಡಾಗಿರಿ ನಡೆಸುತ್ತಿರುವ ರೆಡ್ಡಿಗಳ ವಿರುದ್ಧ ಜನಾಭಿಪ್ರಾಯ ರೂಪುಗೊಳ್ಳತೊಡಗಿದೆ. ಕಾಂಗ್ರೆಸ್ ನಾಯಕರಾದ ಅಲ್ಲಂ ವೀರಭದ್ರಪ್ಪ, ದಿವಾಕರ ಬಾಬು, ಕೊಂಡಯ್ಯನವರು ಭಿನ್ನಾಭಿಪ್ರಾಯ ಹಿಂದಿಕ್ಕಿ ಒಂದಿಷ್ಟು ಬೆವರು ಸುರಿಸಿದರೆ ಕಾಂಗ್ರೆಸ್ಸಿನ ಘೋರ್ಪಡೆ ಗೆಲುವು ಶತಃಸಿದ್ಧ. ಅಲ್ಲಿಗೆ ರೆಡ್ಡಿಗಳ ಆರ್ಭಟಕ್ಕೆ ಭಾರಿ ಏಟು ಕೊಟ್ಟಂತಾಗುತ್ತದೆ. ●

ಬಿಜಾಪುರ: ಕಾಂಗ್ರೆಸ್‌ಗೊಂದು ಖಚಿತ

ಅಖಂಡ ಬಿಜಾಪುರ ಜಿಲ್ಲೆ (ಬಿಜಾಪುರ, ಬಾಗಲಕೋಟೆ ಜಿಲ್ಲೆಗಳು)ಯ ಎರಡು ಸ್ಥಾನಗಳಿಗೆ ಶುರುವಾಗಿರುವ ಜಿದ್ದಾಜಿದ್ದಿಯಲ್ಲಿ ಜಾತಿವಾಸನೆಯೂ ಇದೆ, ಸಾಧನೆಗೆ ಮನ್ನಣೆಯೂ ಇದೆ.

ಜೆಡಿಎಸ್‌ನೊಂದಿಗೆ ಹೊಂದಾಣಿಕೆ ಮಾಡಿಕೊಂಡಿರುವ ಕಾಂಗ್ರೆಸ್ ಈ ಸಲ ಒಂದೇ ಸ್ಥಾನಕ್ಕೆ ಸ್ಪರ್ಧಿಸಿ ಹಿಂದಿನ ಎಂಎಲ್‌ಸಿ ಎಸ್.ಆರ್. ಪಾಟೀಲರನ್ನು ಕಣಕ್ಕಿಳಿಸಿ ಜಯದತ್ತ ಸಾಗಿದೆ. ಇಬ್ಬರು ಸಂಸದರು, ಬಾಗಲಕೋಟೆಯ ಎಲ್ಲ ಶಾಸಕರು, ಬಿಜಾಪುರದ ಐವರು ಶಾಸಕರು ತನ್ನವರೆಂಬ ಹುಮ್ಮಸ್ಸಿನಲ್ಲಿ ಬಿಜೆಪಿ ಎರಡೂ ಸ್ಥಾನಗಳಿಗೆ ಸ್ಪರ್ಧಿಸಿ, ಈಗ ಒಂದಾದರೂ ಸಿಗಲಿ ಎಂದು ಬಡಿದಾಡುತ್ತಿದೆ.



ಬಿಜೆಪಿಯ ಚಂದ್ರಶೇಖರ್ ಕವಟಗಿ, ಜಿ.ಎಸ್. ನ್ಯಾಮಗೌಡ ಕಣದಲ್ಲಿದ್ದು, ಇಂಡಿಯ ದಾದಾಗೌಡ ಪಾಟೀಲ್ ಬಂಡಾಯ ಅಭ್ಯರ್ಥಿಯಾಗಿ ತಲೆನೋವು ತಂದಿದ್ದಾರೆ. ಪಟ್ಟಣ ಪಂಚಾಯತ್‌ಗಳ ಹೆಚ್ಚಿನ ಸದಸ್ಯರು ಬಿಜೆಪಿಯವರಾದರೂ, ಗ್ರಾ.ಪಂ., ತಾ.ಪಂ., ಜಿ.ಪಂ.ಗಳಲ್ಲಿ ಕಾಂಗ್ರೆಸ್ಸಿನದೇ ಪ್ರಾಬಲ್ಯವಿದೆ. ಗ್ರಾಮೀಣ ಪ್ರದೇಶಗಳಲ್ಲಿ ಅತ್ಯುತ್ತಮ ಗುಣಮಟ್ಟದ ಶಾಲೆಗಳು, ಸಹಕಾರಿ ಬ್ಯಾಂಕ್‌ಗಳನ್ನು ಸ್ಥಾಪಿಸಿ ಜನಾನುರಾಗಿಯಾಗಿರುವ ಕಾಂಗ್ರೆಸ್‌ನ ಎಸ್.ಆರ್. ಪಾಟೀಲ್ ಒಂದು ಸ್ಥಾನ ಗೆಲ್ಲುತ್ತಾರೆ, ಇನ್ನೊಂದಕ್ಕಾಗಿ ಬಿಜೆಪಿಗರಲ್ಲೇ ಕಿತ್ತಾಟ ನಡೆಯಲಿದೆ.


● ಮೇಘರಾಜ್

ಮಹಾಲಕ್ಷ್ಮಿ ಲೇಔಟ್


ನರೇಂದ್ರ ಬಾಬು ತಮ್ಮನೂ ಆರ್.ವಿ. ಹರೀಶ್ ಎಂಬ ಗುಮ್ಮನೂ

ವಾರ್ಡ್ ವಾರ್ 3 BBMP

ಆರ್.ವಿ. ಹರೀಶ್ ಎಂಬ ಅನುಭವಿ ನಾಯಕನ ಅಳಿವುಉಳಿವು ಈ ಸಲದ ಪಾಲಿಕೆ ಚುನಾವಣೆ ನಿರ್ಧರಿಸುತ್ತಾ?


ಆರ್.ವಿ.ಹರೀಶ್

ಎಂತೆಂಥವರೋ ಎಮ್ಮೆಲ್ಲೆಗಳಾದರು. ಒಂದಾನೊಂದು ಕಾಲಕ್ಕೆ ಹರೀಶ್‌ಗೆ ಛೇಲಾಗಳಾಗಿದ್ದ ದೀಕೆ, ಆರ್.ವಿ. ದೇವರಾಜ್, ಸಂಪಂಗಿ ಮುಂತಾದವರೆಲ್ಲ ಏನೇನೋ ಆದರು. ಆದರೆ ಆ ಕಾಲದ ವಿದ್ಯಾರ್ಥಿ ನಾಯಕ ಹರೀಶ್ ಮಾತ್ರ ಒಂದಲ್ಲ ನಾಲ್ಕು ಬಾರಿ ನಿಂತರೂ ಎಮ್ಮೆಲ್ಲೇಯಾಗಿ ಗೆಲ್ಲಲೇ ಇಲ್ಲ. ಕಳೆದ ಬಾರಿ ಮಹಾಲಕ್ಷ್ಮಿಲೇಔಟಿಗೆ ಬಿಜೆಪಿ ಅಭ್ಯರ್ಥಿಯಾಗಿದ್ದ ಹರೀಶ್ ಇನ್ನೇನು ಗೆದ್ದೇ ಬಿಡುತ್ತಾರೆಂಬ ಉಮೇದಿನಲ್ಲೇ ಅವರ ಆಪ್ತೇಷ್ಟರಿದ್ದರು. ವಿಧಿ ಇಲ್ಲೂ ದೋಖಾ ಕೊಟ್ಟಿತು. ಸರಿಸುಮಾರು ಮೂರೂವರೆ ಸಾವಿರ ಮತಗಳಿಂದ ಕಾಂಗ್ರೆಸ್ ಅಭ್ಯರ್ಥಿ ನೆ.ಲ. ನರೇಂದ್ರಬಾಬು ಗೆದ್ದು ಹರೀಶ್‌ರ ಕೊನೆಯಾಸೆಯನ್ನು ಮಣ್ಣುಗೂಡಿಸಿಬಿಟ್ಟರು.


ನಾರಾಯಣ್

ಬಹುಶಃ ಗೆದ್ದಿದ್ದರೆ ಹರೀಶ್ ಏನಾಗುತ್ತಿದ್ದರೊ. ಈಗ ಪಾಲಿಕೆ ಚುನಾವಣೆ ಬಂದಿದೆ. ಎಮ್ಮೆಲ್ಲೇಯಾಗದಿದ್ದರೇನಂತೆ ಕನಿಷ್ಠ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲರ್ ಆದರೂ ಆಗಿಬಿಡೋಣ ಎಂಬ ಸಣ್ಣ ಆಸೆಯೊಂದು ಹರೀಶ್ ತಲೆ ಹೊಕ್ಕಿದೆ. ಜೊತೆಗೆ ಬಿಜೆಪಿಯ ಕನಿಷ್ಠ ಐದು ಮಂದಿ ಕೌನ್ಸಿಲರ್‌ಗಳನ್ನಾದರೂ ಗೆಲ್ಲಿಸುವ ನಿರೀಕ್ಷೆಯೂ ಮೊಳಕೆಯೊಡೆದಿದೆ.


ಭಾರತಿ


ಬಿಜೆಪಿಯ ದುರಂತವೆಂದರೆ ಮಹಾಲಕ್ಷ್ಮಿ ಲೇಔಟ್ ಕ್ಷೇತ್ರದಲ್ಲಿ ಅದಕ್ಕೆ ಅಭ್ಯರ್ಥಿಗಳೇ ಸಿಗುತ್ತಿಲ್ಲ!

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅದೆಂಥಾ ಜಿದ್ದಾಜಿದ್ದಿಯಿತ್ತೆಂದರೆ ಜೆಡಿಎಸ್ ಅಭ್ಯರ್ಥಿ ಗೋಪಾಲಯ್ಯ ಇನ್ನೇನು ಗೆದ್ದೇಬಿಟ್ಟರೆಂಬ ಟ್ರೆಂಡ್ ಏರ್ಪಟ್ಟಿತ್ತು. ಪೈಪೋಟಿಯೇನಿದ್ದರೂ ಜೆಡಿಎಸ್‌ನ ಗೋಪಾಲಯ್ಯ ಮತ್ತು ಹರೀಶ್ ಮಧ್ಯೆಯೇ ಎಂಬಂತಿದ್ದದ್ದು ಉಲ್ಟಾ ಹೊಡೆದದ್ದು ನೆ.ಲ. ರವಿಶಂಕರ್ ಎಂಬಾತನ ಚಾಲಾಕಿತನದಿಂದ. ರವಿಶಂಕರ್ ಶಾಸಕ ನರೇಂದ್ರ ಬಾಬು ತಮ್ಮ.


ಜಯಮ್ಮ


ನರೇಂದ್ರ ಬಾಬುಗೆ ಎಲೆಕ್ಷನ್ ಕಸುಬಿನ ಒಳ ವ್ಯವಹಾರಗಳು ಗೊತ್ತಿಲ್ಲ. ಹೆಂಡ ಹಂಚಲಾರ. ದುಡ್ಡೂ ಬಿಚ್ಚಲಾರ. ಬೆಳಿಗ್ಗೆ ಮನೆಯಿಂದ ಹೊರಬಿದ್ದರೆ ಜೇಬಿನಲ್ಲಿದ್ದ ನೂರು ರೂಪಾಯಿಯು ನಯಾಪೈಸೆ ಕೂಡ ಖರ್ಚಾಗದಂತೆ ಜೋಪಾನವಾಗಿಟ್ಟುಕೊಂಡು ವಾಪಸ್ಸಾಗುವುದು ಬಾಬು ಬುದ್ಧಿಯಾದರೆ ತಮ್ಮ ರವಿಶಂಕರ್ ಅದಕ್ಕೆ ತೀರಾ ವಿರುದ್ಧ ಬುದ್ಧಿಯ ಆಸಾಮಿ. ಮನೆಯಿಂದ ಹೊರಬಿದ್ದನೆಂದರೆ ವಾಪಸ್ಸಾಗುವ ಹೊತ್ತಿಗೆ ಜೇಬಲ್ಲಿ ಲಕ್ಷ ರೂಪಾಯಿಗಳಿದ್ದರೂ ನಯಾಪೈಸೆ ಉಳಿಸಲಾರ. ಇಂಥ ಚಾಲಾಕಿ ತಮ್ಮನ ಅಂಡರಗ್ರೌಂಡ್ ಕಾರಸ್ಥಾನಗಳ ಫಲವಾಗಿಯೇ ಗೋಪಾಲಯ್ಯ ಮತ್ತು ಹರೀಶ್ ಥರದ ಘಟಾನುಘಟಿಗಳನ್ನು ಮಣಿಸಿ ಗೆದ್ದಿದ್ದು ನರೇಂದ್ರ ಬಾಬು.

ಈಗ ಪಾಲಿಕೆ ಚುನಾವಣೆ ಬಂದಿದೆ. ಆಗಿದ್ದ ಮಹಾಲಕ್ಷ್ಮಿ ಲೇಔಟ್ ಕ್ಷೇತ್ರಕ್ಕೂ ಈಗಿರುವುದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಕಾಂಗ್ರೆಸ್ ಶಾಸಕ ನರೇಂದ್ರ ಬಾಬು ಬೇರುಗಳು ಇನ್ನಷ್ಟು ಆಳಕ್ಕಿಳಿದಿವೆ. ಬಿಜೆಪಿ ಸರ್ಕಾರವಿದ್ದಾಗ್ಯೂ ಕ್ಷೇತ್ರದ ಮೇಲೆ ಹರೀಶ್ ಹಿಡಿತ ಮತ್ತಷ್ಟು ಬಿಗಿಯಾಗಿದ್ದರೂ ನರೇಂದ್ರ ಬಾಬು ಕೈಚೆಲ್ಲಿ ಕೂತಿಲ್ಲ. ಈ ಬಾರಿಯ ಪಾಲಿಕೆ ಚುನಾವಣೆಯಲ್ಲಿ ಶತಗತಾಯ ಕಾಂಗ್ರೆಸ್ ಆಧಿಪತ್ಯ ಸ್ಥಾಪಿಸಿ ಹರೀಶ್ ಪ್ರಾಬಲ್ಯ ಹೆಚ್ಚಾಗದಂತೆ ತಡೆಯಲು ಬಾಬು ನಡೆಸುತ್ತಿರುವ ಸರ್ಕಸ್ಸುಗಳು ಒಂದೆರಡಲ್ಲ.


ಶಿವರಾಜ್

ವೃಷಭಾವತಿನಗರ, ಶಕ್ತಿ ಗಣಪತಿನಗರ, ಶಂಕರಮಠ, ಮಹಾಲಕ್ಷ್ಮಿಪುರ, ನಂದಿನಿ ಲೇಔಟ್, ಮಾರಪ್ಪನಪಾಳ್ಯ ಮತ್ತು ನಾಗಪುರ ಇತ್ಯಾದಿ ಏಳು ವಾರ್ಡುಗಳ ಪೈಕಿ ಯಾವುದಾದರೂ ಒಂದು ವಾರ್ಡಿಗೆ ಸ್ಪರ್ಧಿಸಿ ಕೌನ್ಸಿಲರ್ ಆಗುವುದು ಆರ್.ವಿ. ಹರೀಶ್ ಒತ್ತಾಸೆ. ಆದರೆ ಜನರಲ್ ವಾರ್ಡ್ ಅಂತಿರುವುದು ಶಂಕರಮಠ ಮಾತ್ರ. ಪಕ್ಕದ ನಾಗಪುರ ವಾರ್ಡೇನಾದರೂ ಹಿಂದುಳಿದ 'ಎ' ಕ್ಯಾಟಗರಿ ಆಗದೇ ಹೋಗಿದ್ದರೆ ಅಲ್ಲಿಂದ ಕಣಕ್ಕಿಳಿಯುವುದು ಹರೀಶ್ ಇರಾದೆಯಾಗಿತ್ತು. ಈಗ ಆ ಆಶೆಯೂ ಕಮರಿ ಹೋಗಿದೆ.

ಹಾಗಂತ ಶಂಕರಮಠಕ್ಕೇನಾದರೂ ಕಾಲಿಟ್ಟರೆ ಅಲ್ಲಿ ಕಾಂಗ್ರೆಸ್ಸಿನ ಹೆಬ್ಬುಲಿಗಳ ಹಿಂಡೇ ನಿಂತಿದೆ. ಹಿಂದೆ ಕಮಲಾನಗರಕ್ಕೆ ಕೌನ್ಸಿಲರ್ ಆಗಿದ್ದ ಶಿವರಾಜ್ ಅಥವಾ ಗೆಳೆಯರ ಬಳಗಕ್ಕೆ ಕಾರ್ಪೊರೇಟರ್ ಆಗಿದ್ದ ಕುರುಬರಹಳ್ಳಿ ನಾಗರಾಜ್ ಇಬ್ಬರ ಪೈಕಿ ಯಾರೇ ಕಾಂಗ್ರೆಸ್ ಅಭ್ಯರ್ಥಿಯಾದರೂ ಹರೀಶ್ ಮುಲಾಜಿಗೆ ಬೀಳಲೇಬೇಕು. ಏಕೆಂದರೆ ಕುರುಬರಹಳ್ಳಿ ನಾಗರಾಜ್ ಮತ್ತು ಶಿವರಾಜ್ ಇಬ್ಬರೂ ಹರೀಶ್ ಆತ್ಮೀಯರೆ. ಹಾಗಿದ್ದೂ ಒಂದು ಕೈ ನೋಡೇಬಿಡೋಣ ಅಂದರೆ ಕಮಲಾನಗರದ ಶಿವರಾಜ್ ಆಗಲಿ ಕುರುಬರಹಳ್ಳಿ ನಾಗರಾಜ್ ಆಗಲಿ ಸುಲಭಕ್ಕೆ ಮಣಿಯುವ ಆಸಾಮಿಗಳಲ್ಲ. ಶಿವರಾಜ್ ಮಹಾನ್ ಸಂಘಟಕ ಮತ್ತು ನಿಷ್ಕಳಂಕದ ವ್ಯಕ್ತಿಯಾದರೆ ಕುರುಬರಹಳ್ಳಿ ನಾಗರಾಜ್ ಸುಲಭಕ್ಕೆ ಮಣಿಯುವ ಆಸಾಮಿಯಲ್ಲ.



ನೆ.ಲ.ರವಿಶಂಕರ್

ಸದ್ಯ ಇಲ್ಲಿಂದಲೇ ನಿಂತು ಹೆಣಗಾಡುವಂತೆ ಹರೀಶ್ ಬೆಂಬಲಿಗರೆಲ್ಲ ಪಟ್ಟು ಹಿಡಿದಿದ್ದಾರಾದರೂ ರಿಸ್ಕಿಗೆ ಕೈಹಾಕಲು ಹರೀಶ್‌ಗೆ ಇಷ್ಟವಿಲ್ಲ. ಅದಕ್ಕೆ ಬದಲಾಗಿ ಪಕ್ಕದ ಮಾರಪ್ಪನಪಾಳ್ಯ ವಾರ್ಡಿನಿಂದ ತನ್ನ ಪತ್ನಿ ಹೇಮಲತಾರನ್ನು ಕಣಕ್ಕಿಳಿಸುವ ಆಶೆ ಕೂಡ ಹರೀಶ್‌ಗಿದೆ. ಜನರಲ್ ಲೇಡಿ ಕ್ಯಾಟಗರಿಗೊಳಪಟ್ಟ ಮಾರಪ್ಪನಪಾಳ್ಯ ಹೇಳಿಕೇಳಿ ನರೇಂದ್ರಬಾಬು ಭದ್ರಕೋಟೆ. ಅಲ್ಲಿಗೆ ಬೆಂಗಳೂರು ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಭಾರತಿ ಶಂಕರ್ ಅನ್ನು ನಿಲ್ಲಿಸಿ ಗೆಲ್ಲಿಸುವುದು ಬಾಬು ಸಂಕಲ್ಪವಾದರೂ ಅದಕ್ಕೆ ಅಡ್ಡಗಾಲಿಟ್ಟವಳು ಮಾಜಿ ಕೌನ್ಸಿಲರ್ ಜಯಮ್ಮ.


ಕಳೆದ ಬಾರಿ ಮಹಾಲಕ್ಷ್ಮಿ ಲೇಔಟಿಗೆ ಕೌನ್ಸಿಲರ್ ಆಗಿದ್ದ ಜಯಮ್ಮನಿಗೆ ಕಾಂಗ್ರೆಸ್ ಟಿಕೆಟ್ ಸಿಕ್ಕರಷ್ಟೇ ಹರೀಶ್ ಪತ್ನಿ ಹೇಮಲತಾ ಗೆಲ್ಲುತ್ತಾರೆ. ಏಕೆಂದರೆ ಜಯಮ್ಮ ಎಂಥವಳೆಂಬುದು ಜನಕ್ಕೀಗಾಗಲೇ ಗೊತ್ತಾಗಿದೆ. ಕೌನ್ಸಿಲರ್ ಆಗಿದ್ದಷ್ಟೂ ದಿನ ಕಳ್ಳಬಿಲ್ಲು ವ್ಯವಹಾರ ಬಿಟ್ಟರೆ ಜಯಮ್ಮ ಬಿಜಿಯಾಗಿದ್ದು ಚೀಟಿ, ಫೈನಾನ್ಸಿಂಗ್ ಮತ್ತು ವಸೂಲಿ ದಂಧೆಯಲ್ಲೆ. ಭಾರತಿಶಂಕರ್ ಪಕ್ಕಾ ಸಂಘಟಕಿ. ಜನರ ಮಧ್ಯೆ ಬೆರೆತು ಕಷ್ಟ ಸುಖಕ್ಕೆ ಸ್ಪಂದಿಸುವಾಕೆ. ಭಾರತಿಗೇನಾದರೂ ಕಾಂಗ್ರೆಸ್ ಟಿಕೆಟ್ ತಪ್ಪಿದರಷ್ಟೇ ಹರೀಶ್ ಮನಸ್ಸು ಮಾಡಬಹುದು. ಇಲ್ಲದೇಹೋದರೆ ಹರೀಶ್ ಪಾಲಿಗುಳಿವುದು ಶಂಕರ ಮಠವೊಂದೆ.


ನರೇಂದ್ರಬಾಬು

ಇಡೀ ಕ್ಷೇತ್ರದುದ್ದಗಲಕ್ಕೂ ನರೇಂದ್ರ ಬಾಬುಗಿರುವ ಹಿಡಿತ ಕಂಡೇ ಹರೀಶ್ ಕಾಂಗ್ರೆಸ್ಸಿಗೆ ಗಾಳ ಹಾಕಿದ್ದಾರೆ. ಕಮಲಾನಗರದ ಶಿವರಾಜ್ ಅಥವಾ ಕುರುಬರಹಳ್ಳಿ ನಾಗರಾಜ್‌ರನ್ನು ಬಿಜೆಪಿಗೆ ಸೆಳೆದು ಕಣಕ್ಕಿಳಿಸುವುದು ಹರೀಶ್ ತಂತ್ರ. ಆದರೆ ಶಿವರಾಜ್ ಅಥವಾ ನಾಗರಾಜ್ ಪೈಕಿ ಯಾರೊಬ್ಬರೂ ಬಿಜೆಪಿಗೆ ಬರಲು ರೆಡಿಯಿಲ್ಲ.


...ವಮೂರ್ತಿ

ಹಾಗೊಮ್ಮೆ ಶಿವರಾಜ್‌ಗೆ ಶಂಕರಮಠದ ಕಾಂಗ್ರೆಸ್ ಟಿಕೆಟ್ ಕೊಟ್ಟರೆ ಕುರುಬರಹಳ್ಳಿ ನಾಗರಾಜ್‌ರನ್ನು ನಂದಿನಿ ಲೇಔಟ್‌ನಿಂದ ನಿಲ್ಲಿಸುವ ಆಶೆ ನರೇಂದ್ರಬಾಬುಗಿದೆ. ನಂದಿನ ಲೇಔಟಗೆ ಬಿಜೆಪಿ ಟಿಕೆಟ್ ಕೇಳುತ್ತಿರುವ ರಾಜೇಂದ್ರಕುಮಾರ್ ಎಷ್ಟಿದ್ದರೂ ಅನಾಮಧೇಯ. ಪುರುಷೋತ್ತಮ್ ಎಂಬ ಮತ್ತೊಬ್ಬ ಕಾಂಗ್ರೆಸ್ ಕಾರ್ಯಕರ್ತ ಕೂಡ ನಂದಿನಿ ಲೇಔಟಗೆ ಅಣಿಯಾಗಿದ್ದಾನೆ. ಆದರೆ ನರೇಂದ್ರಬಾಬು ಲೆಕ್ಕಾಚಾರವೇ ಬೇರೆಯಿದೆ. ತಮ್ಮ ರವಿಶಂಕರ್‌ಗಿಲ್ಲಿ ವ್ಯಾಪಕ ಬೆಂಬಲವಿದೆ. ಕಾಂಗ್ರೆಸ್ ಕಾರ್ಯಕರ್ತರ ದೊಡ್ಡ ನೆಟ್‌ವರ್ಕ್ ಇದೆ. ಯಾರ್‍ಯಾರನ್ನೋ ನಿಲ್ಲಿಸುವ ಬದಲು ತಮ್ಮ ರವಿಯನ್ನೇ ನಿಲ್ಲಿಸಿ ಎನ್ನುವುದು ಕಾಂಗ್ರೆಸ್ ಕಾರ್ಯಕರ್ತರ ಒತ್ತಾಯ. ತಮ್ಮ ನೆ.ಲ. ರವಿಶಂಕರ್ ನಂದಿನಿ ಲೇಔಟಗೇನಾದರೂ ನಿಂತನೆಂದರೆ ಖಂಡಿತಾ ಗೆಲ್ಲುತ್ತಾನೆ. ಆದರೆ ಕುರುಬರಹಳ್ಳಿ ನಾಗರಾಜ್‌ರಂಥ ಹಿರೀಕನಿಗೊಂದು ಜಾಗ ಕಲ್ಪಿಸಲೇಬೇಕಲ್ಲ–


ನಾಗರಾಜ್

ಅದಕ್ಕೆಂದು ನರೇಂದ್ರಬಾಬು ಬೇರೆಯದೇ ತಂತ್ರ ರೂಪಿಸಿದ್ದಾರೆ. ನಂದಿನಿ ಲೇಔಟನಂತೆ ಪಕ್ಕದ ನಾಗಪುರ ವಾರ್ಡ್ ಕೂಡ ಬಿಸಿಎಂ(ಎ) ಕ್ಯಾಟಗರಿಗೀಡಾಗಿದೆ. ನಾಗಪುರಕ್ಕೆ ತಮ್ಮ ರವಿಶಂಕರ್‌ನನ್ನು ನಿಲ್ಲಿಸಿ ಕುರುಬರಹಳ್ಳಿ ನಾಗರಾಜ್‌ಗೆ ನಂದಿನಿ ಲೇಔಟ್ ಬಿಟ್ಟುಕೊಟ್ಟರೆ ಬಿಜೆಪಿಗೆ ಸೆಳೆಯುವ ಹರೀಶ್ ತಂತ್ರ ಮಣ್ಣುಗೂಡುತ್ತದೆ. ಅಷ್ಟಿಷ್ಟು ಹೆಣಗಿದರೆ ನಾಗಪುರದಲ್ಲಿ ತಮ್ಮನನ್ನು ಗೆಲ್ಲಿಸುವುದು ದೊಡ್ಡ ಕಷ್ಟವೇನಲ್ಲ.

ಏಕೆಂದರೆ ನಾಗಪುರಕ್ಕೆ ಬಿಜೆಪಿ ಅಭ್ಯರ್ಥಿಯಾಗಿರುವ ನಾಯಿ ಹರೀಶ ಮಹಾಕೇಡಿ ಮತ್ತು ಹೆಸರಾಂತ ರೌಡಿ. ಕಾಮಾಕ್ಷಿಪಾಳ್ಯದ ಅನಿಲ್ ರಂಗಣ್ಣನಂಥ ಪುಡಿ ರೌಡಿಯನ್ನು ಕಟ್ಟಿಕೊಂಡು ಪ್ರತಿನಿತ್ಯ ಹಾವಳಿಯಿಡುವ ಕರ್ಪಿ ಹರೀಶ ಉರ್ಫ್ ನಾಯಿ ಹರೀಶನ ಮುಖ ಕಂಡರೇನೇ ಜನ ಕ್ಯಾಕರಿಸಿ ಉಗಿಯುತ್ತಾರೆ. ತನ್ನ ಬರ್ತ್‌ಡೆ ಪಾರ್ಟಿಯಂದು ಕುಡಿದು ಚಿತ್ತಾಗಿ ನಾಯಿ ಬಾಲಕ್ಕೆ ಪಟಾಕಿ ಕಟ್ಟಿ ಕೇಕೆ ಹಾಕಿದ ಕಾರಣಕ್ಕೇ ಆತನಿಗೆ ನಾಯಿ ಹರೀಶ್‌ನೆಂಬ ಬಿರುದು ಕೊಟ್ಟರು. ಇಂಥವನ ವಿರುದ್ಧ ನೆ.ಲ. ರವಿಶಂಕರ್ ಕಾಂಗ್ರೆಸ್ ಅಭ್ಯರ್ಥಿಯಾದರೆ ಪ್ರಚಾರ ಮಾಡುವುದೇ ಬೇಕಿಲ್ಲ.


ಇನ್ನು ಶಕ್ತಿ ಗಣಪತಿನಗರ ಹೇಳಿಕೇಳಿ ಪರಿಶಿಷ್ಟ ಮೀಸಲು ವಾರ್ಡು. ಕಾಂಗ್ರೆಸ್ಸಿನ ಚಿಕ್ಕರಾಮಯ್ಯ/ ಆನಂದ್ ಮೂರ್ತಿ ಅಥವಾ ಪತ್ರಕರ್ತ ಸೋಸಲೆ ಸಿದ್ಧರಾಜು ಈ ಮೂವರ ಪೈಕಿ ಯಾರು ನಿಂತರೂ ಗೆಲ್ಲುವುದು ಕಷ್ಟವಲ್ಲ. ಏಕೆಂದರೆ ಬಿಜೆಪಿಗಿಲ್ಲಿ ಅಭ್ಯರ್ಥಿಗಳೇ ಇಲ್ಲ. ಅಷ್ಟಿಷ್ಟು ಹೆಣಗಾಡಬೇಕು ಅಂತಿದ್ದರೆ ಅದು ಮಹಾಲಕ್ಷ್ಮಿಪುರಕ್ಕೆ ಮಾತ್ರ. ಬಿಸಿಎಂ(ಬಿ) ಕ್ಯಾಟಗರಿಗೊಳಪಟ್ಟ ಮಹಾಲಕ್ಷ್ಮಿಪುರಕ್ಕೆ ಬಿಜೆಪಿ ಅಭ್ಯರ್ಥಿ ಆಗಿರುವ ಶಿವಾನಂದ್ ಪ್ರಬಲ ಅಭ್ಯರ್ಥಿಯೇ. ಈತನ ಬೆನ್ನಿಗೇನಾದರೂ ಆರ್.ವಿ. ಹರೀಶ್ ನಿಂತರೆಂದರೆ ದೊಡ್ಡ ಮಟ್ಟದ ಹಣಾಹಣಿ ಗ್ಯಾರಂಟಿ. ಬಹುಶಃ ರೈಲ್ವೇ ನಾರಾಯಣ ಎನ್ನುವ ನರೇಂದ್ರ ಬಾಬು ಶಿಷ್ಯ ನಿಲ್ಲದಿದ್ದರೆ ಬಿಜೆಪಿಗಿಲ್ಲಿ ಸಲೀಸಾಗುತ್ತಿತ್ತೇನೊ. ಸತತ ಐವತ್ತು ದಿನಗಳ ಕಾಲ ನೆಲಗಳ್ಳರ ವಿರುದ್ಧ ಪ್ರತಿಭಟನೆ ನಡೆಸಿ ಆಟದ ಮೈದಾನ ಮತ್ತು ಕನ್ನಡ ಶಾಲೆಯ ಜಮೀನು ಉಳಿಸಿಕೊಟ್ಟ ರೈಲ್ವೇ ನಾರಾಯಣನಿಗಿಲ್ಲಿ ವಿಪರೀತ ಜನ ಬೆಂಬಲವಿದೆ. ನೆಲಗಳ್ಳರ ವಿರುದ್ಧ ಪ್ರತಿಭಟಿಸಿ ಆಟದ ಮೈದಾನ ಉಳಿಸಿಕೊಟ್ಟ ರೈಲ್ವೇ ನಾರಾಯಣ ಆ ಕಾರಣಕ್ಕೇ ಹದಿನೇಳು ಕ್ರಿಮಿನಲ್ ಕೇಸುಗಳನ್ನು ಹೊತ್ತ. ಹೀಗಾಗಿ ಬಿಜೆಪಿಯ ಶಿವಾನಂದನಿಗಿಂತಲೂ ನಾರಾಯಣನೇ ಇಲ್ಲಿ ಹೆಚ್ಚು ಜನಪ್ರಿಯ.

ಹಾಗೊಮ್ಮೆ ನಾರಾಯಣನಿಗೆ ಕಾಂಗ್ರೆಸ್ ಟಿಕೆಟ್ ತಪ್ಪಿ ಕೇತಮಾರನಹಳ್ಳಿಯ ಕೇಶವಮೂರ್ತಿ ನಿಂತರೂ ಶಿವಾನಂದ್ ಗೆಲ್ಲುವುದು ಕಷ್ಟವೆ. ನರೇಂದ್ರ ಬಾಬು ಭದ್ರಕೋಟೆಯನ್ನು ಭೇದಿಸುವ ಹರೀಶ್ ಹುಮ್ಮಸ್ಸು ಕೈಕೊಡುತ್ತಾ ಅಥವಾ ಫಲ ಕೊಡುತ್ತಾ ಎಂಬುದಷ್ಟೇ ಬಾಕಿಯಿರುವ ಪ್ರಶ್ನೆ.

ಆರ್.ವಿ. ಹರೀಶ್ ಎಂಬ ಹೆಸರು ಸದ್ಯ ಕಾಂಗ್ರೆಸ್ ಕಾರ್ಯಕರ್ತರ ಪಾಲಿಗೆ ಗುಮ್ಮದಂತೆ ಕಾಡುತ್ತಲೇ ಇದೆ.

● ರಾ. ಸೋಮನಾಥ್

ವೃಷಭಾವತಿನಗರ ಗೋಪಾಲಯ್ಯನ ಸಾಮ್ರಾಜ್ಯದಲ್ಲಿ



ನರೇಂದ್ರಬಾಬು ಸಾಮ್ರಾಜ್ಯದಲ್ಲಿ ಕಾಮಾಕ್ಷಿಪಾಳ್ಯದ ಗೋಪಾಲಯ್ಯನ ಭದ್ರಕೋಟೆಯಂತಿರುವುದು ವೃಷಭಾವತಿ ನಗರ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಾಬು ವಿರುದ್ಧ ಜೆಡಿಎಸ್ ಅಭ್ಯರ್ಥಿಯಾಗಿದ್ದ ಗೋಪಾಲಯ್ಯ ಕೊಟ್ಟ ಪೈಪೋಟಿ ಕೂಡ ಅಷ್ಟಿಷ್ಟಲ್ಲ.

ಹಾಗೊಮ್ಮೆ ಕಾಂಗ್ರೆಸ್-ಜೆಡಿಎಸ್ ಹೊಂದಾಣಿಕೆಯಾದರೆ ವಿಧಿಯಿಲ್ಲದೇ ನರೇಂದ್ರಬಾಬು ತನ್ನ ಎದುರಾಳಿಯನ್ನೇ ಬೆಂಬಲಿಸಬೇಕಾಗುತ್ತದೆ. ಸದ್ಯ ವೃಷಭಾವತಿನಗರ ಬಿಸಿ-ಎ, ಮಹಿಳಾ ಕ್ಯಾಟಗರಿಗೊಳಪಟ್ಟದ್ದು ತನ್ನ ನಂಬಿಕಸ್ತ ಮಹಿಳೆಯೊಬ್ಬರನ್ನು ನಿಲ್ಲಿಸಿ ಗೆಲ್ಲಿಸುವುದು ಗೋಪಾಲಯ್ಯ ತಂತ್ರ. ಕಳೆದ ಬಾರಿ ಚಂದ್ರಮ್ಮ ಕಲ್ಲೇಶಪ್ಪ ಎಂಬಾಕೆಯನ್ನು ನಿಲ್ಲಿಸಿ ಗೆಲ್ಲಿಸಿದ ಗೋಪಾಲಯ್ಯ ಹಣೆ ಚಚ್ಚಿಕೊಂಡಿದ್ದೇ ಬಂತು. ಗೆದ್ದ ಚಂದ್ರಮ್ಮ ಕಾಸು ಬಾಚುವುದರಲ್ಲೇ ಬಿಜಿಯಾಗಿ ಗೆಲ್ಲಿಸಿದ ಧಣಿಗೆ ಕೈಕೊಟ್ಟಳು. ಗಂಡ ಕಲ್ಲೇಶಪ್ಪ ಗಾರೆ ಕೆಲಸಕ್ಕೆ ಹೋಗುತ್ತಿದ್ದವನು ಕುಡಿಕುಡಿದೇ ದುಂಡಗಾದ.

ಪಾಠ ಕಲಿತ ಗೋಪಾಲಯ್ಯ ಯಾರಾದರೂ ದೇವಾಂಗ ಜನಾಂಗದ ನಂಬಿಕಸ್ತ ಮಹಿಳೆಯನ್ನು ನಿಲ್ಲಿಸಿ ಗೆಲ್ಲಿಸಲು ಹೆಣಗಾಡುತ್ತಿದ್ದಾರೆ. ಕ್ಯಾಟಗರಿಯೇನಾದರೂ ಬದಲಾಗಿ ಮಹಿಳಾ ಜನರಲ್ ಆಯಿತೆಂದರೆ ಗೋಪಾಲಯ್ಯ ಪತ್ನಿಯೇ ಇಲ್ಲಿ ಜೆಡಿಎಸ್ ಅಭ್ಯರ್ಥಿಯಾಗಬಹುದು. ಅದೂ ರದ್ದಾಗಿ ಜನರಲ್ಲಾಯಿತೆಂದರೆ ಸ್ವತಃ ಗೋಪಾಲಯ್ಯನೇ ನಿಲ್ಲಬಹುದು. ಸದ್ಯ ಗೋಪಾಲಯ್ಯ ಕಣ್ಣಿಟ್ಟಿರುವುದು ಪಕ್ಕದ ಕಾಮಾಕ್ಷಿಪಾಳ್ಯ ವಾರ್ಡಿನ ಮೇಲೆ. ಅಲ್ಲಿ ಬಿಜೆಪಿಯ ರಂಗಣ್ಣ ಹಳೇ ವೈರಿ. ರಂಗಣ್ಣನ ಮಗ ಅನಿಲ್ ರಂಗಣ್ಣನ ಹಾವಳಿಗೆ ರೋಸತ್ತ ಕಾಮಾಕ್ಷಿಪಾಳ್ಯದ ಜನಕ್ಕೆ ಗೋಪಾಲಯ್ಯನಲ್ಲದೇ ಬೇರೆ ಆಯ್ಕೆಯಿಲ್ಲದ?

ಸಿಡಬ್ಲ್ಯೂಸಿ ಅಧ್ಯಕ್ಷೆ ಹಿಲ್ಡಾ ರಾಯಪ್ಪನ್ ವಜಾ

ಮಂಗಳೂರು

ಕಳ್ಳರಿಗೆ ರಕ್ಷಣೆ - ದಕ್ಷರಿಗೆ ಗೇಟ್ ಪಾಸ್

ಇಂಥ ಆಡಳಿತವನ್ನು ಯಡಿಯೂರಪ್ಪನ ನೇತೃತ್ವದ ಕರ್ನಾಟಕ ಸರ್ಕಾರದಲ್ಲಿ ಬಿಟ್ಟು ಪ್ರಾಯಶಃ ಬೇರಾವ ಕಡೆಯೂ ನೋಡಲು ಸಾಧ್ಯವಿಲ್ಲ. ಕಳ್ಳರನ್ನು, ದುಷ್ಟರನ್ನು, ಭ್ರಷ್ಟರನ್ನು ರಕ್ಷಿಸುವುದು, ಅವರ ಮೇಲೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳುವುದಕ್ಕಾಗಿ ದಕ್ಷತೆಯಿಂದ ಕೆಲಸ ಮಾಡುವ ಅಧಿಕಾರಿಗಳನ್ನು ಅವರವರ ಹುದ್ದೆಯಿಂದಲೇ ಕಿತ್ತು ಹಾಕುವುದು - ಇಂಥ ಆಡಳಿತವನ್ನು ಬೇರೆಲ್ಲಿ ನೋಡಲು ಸಾಧ್ಯ ಹೇಳಿ? ದಕ್ಷಿಣ ಕನ್ನಡ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷೆ ಹಿಲ್ಡಾ ರಾಯಪ್ಪನ್ ಮತ್ತು ಸದಸ್ಯರುಗಳಾದ ರಿನೇ ಪೀಟರ್ ಡಿ'ಸೋಜ ಮತ್ತು ಜಿಯೋ ಜೇಮ್ಸ್ ಡಿ'ಸಿಲ್ವ ಅವರನ್ನೊಳಗೊಂಡ ಇಡೀ ಸಮಿತಿಯನ್ನು ವಜಾ ಮಾಡಿರುವುದು ಯಡಿಯೂರಪ್ಪನ ಆಡಳಿತ ಮಾದರಿಗೊಂದು ತಾಜಾ ಉದಾಹರಣೆ. ಇಲ್ಲೊಂದು ವಿಚಾರವನ್ನು ನೆನಪಿಟ್ಟುಕೊಳ್ಳಬೇಕು. ಕಳೆದ ವರ್ಷ ಇದೇ ಹಿಲ್ಡಾ ರಾಯಪ್ಪನ್ ಅಧ್ಯಕ್ಷತೆಯ ಮಕ್ಕಳ ಕಲ್ಯಾಣ ಸಮಿತಿಗೆ 'ರಾಜ್ಯದ ಅತ್ಯುತ್ತಮ ಮಕ್ಕಳ ಕಲ್ಯಾಣ ಸಮಿತಿ' ಎಂಬ ಪುರಸ್ಕಾರವನ್ನು ರಾಜ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನೀಡಿತ್ತು! ಈಗ ಒಂದು ವರ್ಷ ತುಂಬುವುದರೊಳಗಾಗಿ ಅವರನ್ನು ಏಕಾಏಕಿ ವಜಾ ಮಾಡಿದ್ದಾರೆಂದರೆ ಯಾರಿಗಾದರೂ ಅನುಮಾನ ಬರುವುದು ಸಹಜ. ಈ ವಿಚಾರದ ಬೆನ್ನು ಹತ್ತಿ ಸ್ವಲ್ಪ ಕೆದಕುತ್ತಾ ಹೋದರೆ ಅಸಲೀ ಸತ್ಯಗಳು ಕಣ್ಣಿಗೆ ರಾಚುತ್ತವೆ.

ಹಿಲ್ಡಾ ರಾಯಪ್ಪನ್ ಅವರೇ ಯಾಕೆ ಟಾರ್ಗೆಟ್?

ಹಿಲ್ಡಾ ರಾಯಪ್ಪನ್ ಅವರನ್ನೇ ಬಿಜೆಪಿ ಸರ್ಕಾರ ಯಾಕೆ ಟಾರ್ಗೆಟ್ ಮಾಡಿ ಬಲಿಪಶು ಮಾಡಿತು ಎಂಬುದನ್ನು ಅರ್ಥ ಮಾಡಿಕೊಳ್ಳುವ ಮೊದಲು ಅವರು ಅಧ್ಯಕ್ಷರಾಗಿದ್ದ ಮಕ್ಕಳ ಕಲ್ಯಾಣ ಸಮಿತಿ (ಸಿಡಬ್ಲ್ಯೂಸಿ) ಬಗ್ಗೆ ಒಂದಿಷ್ಟು ಮೂಲಭೂತ ವಿಚಾರಗಳನ್ನು ತಿಳಿದುಕೊಳ್ಳುವುದು ಉತ್ತಮ. ರಾಜ್ಯದಲ್ಲಿ ಮಕ್ಕಳ ಹಕ್ಕುಗಳ ಉಲ್ಲಂಘನೆಯನ್ನು ತಡೆಯುವುದಕ್ಕಾಗಿ, ಬಲಿಪಶುಗಳಾಗಿರುವ ಮಕ್ಕಳಿಗೆ ಪುನರ್ವಸತಿ ಕಲ್ಪಿಸುವುದಕ್ಕಾಗಿ ಹಾಗೂ ಬಾಲ ಕಾರ್ಮಿಕರ ಬಳಕೆ, ಮಕ್ಕಳ ಅಕ್ರಮ ಸಾಗಾಣಿಕೆ ಮುಂತಾದವುಗಳ ಮೂಲಕ ಮಕ್ಕಳ ಹಕ್ಕುಗಳನ್ನು ಉಲ್ಲಂಘನೆ ಮಾಡುವ ಅಪರಾಧಿಗಳಿಗೆ ಕಾನೂನುರೀತ್ಯಾ ಶಿಕ್ಷೆಯಾಗುವಂತೆ ನೋಡಿಕೊಳ್ಳುವುದಕ್ಕಾಗಿ, ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವ್ಯಾಪ್ತಿಯೊಳಗೆ ಮಕ್ಕಳ ಕಲ್ಯಾಣ ಸಮಿತಿಯನ್ನು ನೇಮಿಸಲಾಗಿದೆ. ಬಾಲ ಕಾಯಿದೆಯಂತೆ ಮಕ್ಕಳ ಹಕ್ಕು ಮತ್ತು ರಕ್ಷಣೆಯ ವಿಚಾರದಲ್ಲಿ ಈ ಸಮಿತಿಯು ನ್ಯಾಯಾಂಗಾಧಿಕಾರವನ್ನು ಹೊಂದಿದೆ. ಅಂದರೆ, ಸರ್ಕಾರಿ ನೌಕರರಿರಲಿ, ಸಾರ್ವಜನಿಕರಿರಲಿ, ಮಂತ್ರಿಗಳಿರಲಿ, ಅಧಿಕಾರಿಗಳಿರಲಿ ಸಿಡಬ್ಲ್ಯೂಸಿಯು ಆರೋಪಿಗಳನ್ನು ಕರೆದು ವಿಚಾರಣೆ ನಡೆಸುವ ಅಧಿಕಾರವನ್ನು ಹೊಂದಿದೆ. ರಾಜ್ಯದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಮಕ್ಕಳ ಕಲ್ಯಾಣ ಸಮಿತಿಯ ಜಿಲ್ಲಾ ಘಟಕಗಳಿದ್ದು ಆಯಾ ಜಿಲ್ಲಾ ವ್ಯಾಪ್ತಿಯಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಶ್ರಮಿಸುತ್ತಿವೆ. ಮಕ್ಕಳ ಹಕ್ಕುಗಳನ್ನು ರಕ್ಷಿಸುವುದೇ ತನ್ನ ಪ್ರಧಾನ ಧ್ಯೇಯವನ್ನಾಗಿಸಿಕೊಂಡಿರುವ ಸಿಡಬ್ಲ್ಯೂಸಿ ಎಲ್ಲೇ ಮಕ್ಕಳ ಹಕ್ಕುಗಳ ಉಲ್ಲಂಘನೆಯಾದರೆ ಅಲ್ಲಿಗೆ ಧಾವಿಸಿ ಅವರಿಗೆ ರಕ್ಷಣೆ ಕೊಡುವುದು ಮಾತ್ರವಲ್ಲ, ಮಕ್ಕಳ ಪುನರ್ವಸತಿಗೆ ಶ್ರಮಿಸುತ್ತದೆ.

ಈಗ ಹಿಲ್ಡಾ ರಾಯಪ್ಪನ್ ಅವರನ್ನು ಯಾಕೆ ವಜಾಗೊಳಿಸಲಾಯಿತು ಎಂಬ ಮೂಲಭೂತ ಪ್ರಶ್ನೆಗೆ ಬರೋಣ. ಹಿಲ್ಡಾ ರಾಯಪ್ಪನ್ ಅವರು ದಕ್ಷಿಣ ಕನ್ನಡ ಜಿಲ್ಲೆಯ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷೆ. ಅವರು ತಮ್ಮ ಸಹೋದ್ಯೋಗಿಗಳಾದ ರಿನೆ ಪೀಟರ್ ಡಿ'ಸೋಜ ಮತ್ತು ಜಿಯೋ ಜೇಮ್ಸ್ ಡಿ'ಸೋಜ ಅವರೊಂದಿಗೆ ಸೇರಿಕೊಂಡು ಕಳೆದ ಕೆಲವು ವರ್ಷಗಳಿಂದ ಬಹಳ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರೆಲ್ಲಾ ಸೇರಿಕೊಂಡು ಮಕ್ಕಳ ಕಲ್ಯಾಣಕ್ಕಾಗಿ ನಿಜಕ್ಕೂ ಹೇಳಿಕೊಳ್ಳುವಂಥ ಸಾಧನೆಯನ್ನೇ ಮಾಡಿದ್ದಾರೆ. ಈ ಸಮಿತಿ ರಚನೆಯಾದ ಕೆಲವೇ ವರ್ಷಗಳಲ್ಲಿ ಸುಮಾರು 2000ಕ್ಕೂ ಹೆಚ್ಚು ಪ್ರಕರಣಗಳನ್ನು ತನಿಖೆ ಮಾಡಿದ್ದು ಅದರ ಹೆಗ್ಗಳಿಕೆಯಾಗಿದೆ. ಜಿಲ್ಲೆಯಲ್ಲಿ ಯಾರ್‍ಯಾರು ಮಕ್ಕಳನ್ನು ಕಾನೂನು ಬಾಹಿರವಾಗಿ ಹಿಂಸಿಸಿದ್ದರೋ ಅವರೆಲ್ಲಾ ಈ ಮೂವರ ಸಮರ್ಥ ಕಾರ್ಯಾಚರಣೆಯಿಂದಾಗಿ ಈಗ ಜೈಲು ಕಂಬಿ ಎಣಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಮಕ್ಕಳ ಕಲ್ಯಾಣ ಸಮಿತಿಯ ಅಧಿಕಾರಾವಧಿ 2010ರ ಫೆಬ್ರವರಿಯಲ್ಲಿ ಕೊನೆಗೊಳ್ಳಲಿದ್ದು ಅಷ್ಟರೊಳಗಾಗಿ ಈ ಎಲ್ಲಾ ಪ್ರಕರಣಗಳನ್ನು ಇತ್ಯರ್ಥ ಮಾಡಿ ಅಪರಾಧಿಗಳಿಗೆ ಶಿಕ್ಷೆ ಕೊಡಿಸುವುದಕ್ಕಾಗಿ ಅವರು ಹಗಲಿರುಳೂ ಶ್ರಮಿಸುತ್ತಿದ್ದಾರೆ. ಅವರನ್ನು ಹೀಗೆ ಕಾರ್ಯನಿರ್ವಹಿಸಲು ಬಿಟ್ಟರೆ ಕಂಬಿ ಎಣಿಸುವುದು ಗ್ಯಾರಂಟಿ ಎಂದು ಮನವರಿಕೆಯಾಗಿರುವ ಪಟ್ಟಭದ್ರರು ಸೇರಿಕೊಂಡು ಅವರನ್ನು ಡಿಸ್‌ಮಿಸ್ ಮಾಡಿಸಿದ್ದಾರೆಂಬುದು ಮೇಲ್ನೋಟಕ್ಕೇ ಕಾಣುತ್ತದೆ.

ಕೆಲ ಉದಾಹರಣೆಗಳನ್ನು ನೋಡಿ. 2007ರಲ್ಲಿ ಬೆಳ್ತಂಗಡಿಯಲ್ಲಿ ರಜಿಯ ಎಂಬ ಅಪ್ರಾಪ್ತ ವಯಸ್ಸಿನ ಮುಸ್ಲಿಂ ಬಾಲೆಯೊಬ್ಬಳ ಮೇಲೆ ಇಬ್ಬರು ಹಿಂದೂ ಯುವಕರು ಅತ್ಯಾಚಾರ ಯತ್ನ ನಡೆಸಿದ್ದರು. ಹಿಲ್ಡಾ ರಾಯಪ್ಪನ್ ನೇತೃತ್ವದ ಮಕ್ಕಳ ಸಮಿತಿಗೆ ವಿಚಾರ ಗೊತ್ತಾಗುತ್ತಿದ್ದಂತೆಯೇ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿತ್ತು. ನ್ಯಾಯಾಲಯದಲ್ಲಿ ಈ ಸಮಿತಿ ಸಲ್ಲಿಸಿದ ದೋಷಾರೋಪ ಪಟ್ಟಿ ಎಷ್ಟೊಂದು ಕರಾರುವಕ್ಕಾಗಿತ್ತೆಂದರೆ ಅತ್ಯಾಚಾರ ಯತ್ನ ನಡೆಸಿದ್ದ ಯುವಕರು ತಮ್ಮ ಅಪರಾಧವನ್ನು ನ್ಯಾಯಾಲಯದಲ್ಲಿ ಒಪ್ಪಿಕೊಳ್ಳದೇ ಬೇರೆ ವಿಧಿಯಿರಲಿಲ್ಲ. ಪ್ರಸ್ತುತವಾಗಿ ಈ ಪ್ರಕರಣವೀಗ ಹೈಕೋರ್ಟ್‌ನಲ್ಲಿದೆ.


ಹಿಲ್ಡಾ ರಾಯಪ್ಪನ್

ಅದೇ ರೀತಿಯಲ್ಲಿ ರಾಜ್ಯದ ಕೆಲವು ಹಿಂದೂಪರ ಸಂಘಟನೆಗಳು ಮೇಘಾಲಯದಿಂದ ಆದಿವಾಸಿ ಗಿರಿಜನ ಮಕ್ಕಳನ್ನು ಕಾನೂನುಬಾಹಿರವಾಗಿ ಕಳ್ಳಸಾಗಾಣಿಕೆ ಮಾಡಿಕೊಂಡು ಬಂದು ರಾಜ್ಯದಲ್ಲಿ ಹಿಂದುತ್ವ ಬೋಧನೆ ಮಾಡುತ್ತಿದ್ದುದರ ವಿರುದ್ಧವೂ ಹಿಲ್ಡಾ ರಾಯಪ್ಪನ್ ನೇತೃತ್ವದ ಮಕ್ಕಳ ಕಲ್ಯಾಣ ಸಮಿತಿ 2007ರ ಆಗಸ್ಟ್‌ನಲ್ಲಿ ತನಿಖೆ ನಡೆಸಿ ಆರೋಪಿಗಳಿಗೆ ಬಿಸಿ ಮುಟ್ಟಿಸಿತ್ತು. ತುಕಾರಾವ್ ಶೆಟ್ಟಿ ಎಂಬ ಸಂಘಪರಿವಾರದ ವ್ಯಕ್ತಿ ಮೇಘಾಲಯದಿಂದ ಮಕ್ಕಳನ್ನು ಕರೆದುಕೊಂಡು ಬಂದು ಕರಾವಳಿಯ ಕೆಲವು ಹಿಂದೂತ್ವ ಸಂಘಟನೆಗಳಿಗೆ ಒಪ್ಪಿಸುತ್ತಿದ್ದ. ಮೇಘಾಲಯದ ಮಕ್ಕಳು ಹಿಂದೂ, ಮುಸ್ಲಿ ಅಥವ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿರದೇ ಅವರೆಲ್ಲಾ ಆದಿವಾಸಿಗಳಾಗಿದ್ದರು. ಅವರಿಗೆ ಶಿಕ್ಷಣ ಕೊಡುವ ನೆಪದಲ್ಲಿ ಹಿಂದೂತ್ವ ತರಬೇತಿ ನೀಡಲಾಗುತ್ತಿತ್ತು. ಈ ಕುರಿತು ಆಳವಾಗಿ ತನಿಖೆ ನಡೆಸಿದ ಮಕ್ಕಳ ಸಮಿತಿಯು ನ್ಯಾಯಾಲಯದಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿತ್ತು.


ಮಕ್ಕಳಕಳ್ಳ ವಜ್ರದೇಹಿ ಮಠದ ಸ್ವಾಮಿ

ಇನ್ನೊಂದು ಪ್ರಕರಣವನ್ನು ನೋಡಿ. 2008ರಲ್ಲಿ ಗುರುಪುರದ ವಜ್ರದೇಹಿ ಮಠದ ರಾಜಶೇಖರಾನಂದ ಸ್ವಾಮಿ ಚಿಕ್ಕಮಗಳೂರಿನ ಮೂಲದ ಒಂದೂವರೆ ವರ್ಷದ ಅನಾಥ ಮಗುವೊಂದನ್ನು ಅಕ್ರಮವಾಗಿ ಮಠದಲ್ಲಿಟ್ಟುಕೊಂಡಿದ್ದರು. ಅನಾಥ ಮಗುವೊಂದನ್ನು ಸಾಕಬೇಕೆಂದರೆ ಅದಕ್ಕೆ ಪೂರ್ವಾನುಮತಿ ಪಡೆದಿರಬೇಕು. ಮಕ್ಕಳ ಕಲ್ಯಾಣ ಸಮಿತಿಯಿಂದ ಪ್ರಮಾಣಪತ್ರ ಪಡೆದ ಸಂಸ್ಥೆಗಳು ಮಾತ್ರವೇ ಅನಾಥ ಮಕ್ಕಳನ್ನು ಇಟ್ಟುಕೊಳ್ಳಬಹುದು. ಆದರೆ ಕಾನೂನಿನ ಗಂಧಗಾಳಿ ಗೊತ್ತಿಲ್ಲದ ರಾಜಶೇಖರಾನಂದ ಸ್ವಾಮಿ ಯಾವುದೇ ಪೂರ್ವಾನುಮತಿ ಪಡೆಯದೆ ಮಠದಲ್ಲಿ ಅಕ್ರಮವಾಗಿ ಈ ಮಗುವನ್ನು ಇಟ್ಟುಕೊಂಡಿದ್ದ. ಈ ಕುರಿತ ದೂರು ಬಂದ ತಕ್ಷಣವೇ ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯರು ಕಾರ್ಯಾಚರಣೆ ನಡೆಸಿದ್ದರು. ಈ ಪ್ರಕರಣವೊಂದರಲ್ಲೇ 42 ದಾಖಲೆಗಳನ್ನು ಕಲೆ ಹಾಕಿ ಸ್ವಾಮಿಯ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ನಂತರ ಇದೇ ಸ್ವಾಮಿ ಇನ್ನೊಬ್ಬ ಅನಾಥ ಬಾಲಕನನ್ನು ಮಠದಲ್ಲಿ ಅಕ್ರಮವಾಗಿರಿಸಿಕೊಂಡ ಬಗ್ಗೆಯೂ ತನಿಖೆ ನಡೆಸಿ ನ್ಯಾಯಾಲಯದಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು.

ಹಿಲ್ಡಾ ರಾಯಪ್ಪನ್ ನೇತೃತ್ವದ ಮಕ್ಕಳ ಕಲ್ಯಾಣ ಸಮಿತಿ ನಡೆಸಿದ ಇನ್ನೊಂದು ಪ್ರಮುಖ ಕಾರ್ಯಾಚರಣೆ ಎಂದರೆ ಪುತ್ತೂರಿನಲ್ಲಿ ಅಕ್ರಮವಾಗಿ ಮಗುವೊಂದನ್ನು ಮಾರಾಟ ಮಾಡಿದ ಪ್ರಕರಣ. ಪುತ್ತೂರಿನ ಚೇತನಾ ಹಾಸ್ಪಿಟಲ್‌ನವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಸೂಪರ್‌ವೈಸರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಸರೋಜಿನಿ ಎಂಬ ಮಹಿಳೆಗೆ ಮಗುವೊಂದು ಹುಟ್ಟಿರುವ ಸುಳ್ಳು ದಾಖಲೆ ಸೃಷ್ಟಿಸಿ ಯಾವುದೋ ಮಗುವನ್ನು ಕೊಟ್ಟು ಬಿಟ್ಟಿದ್ದರು. ವಿಷಯ ಗೊತ್ತಾಗುತ್ತಿದ್ದಂತೆಯೇ ಮಕ್ಕಳ ಕಲ್ಯಾಣ ಸಮಿತಿ ತನಿಖೆ ನಡೆಸಿದರೆ ಅಚ್ಚರಿ ಕಾದಿತ್ತು. ಸರೋಜಿನಿಯು ಮಗುವಿಗೆ ಜನ್ಮ ನೀಡಿದ್ದಾರೆಂದೂ, ಸರೋಜಿನಿಯ ಗಂಡನೇ ಆ ಮಗುವಿನ ತಂದೆಯೆಂದೂ ಆಸ್ಪತ್ರೆಯ ದಾಖಲೆಗಳು ಹೇಳುತ್ತವೆ. ಆದರೆ, ವಾಸ್ತವ ಏನೆಂದರೆ ಸರ್ಕಾರಿ ನೌಕರಳಾಗಿರುವ ಸರೋಜಿನಿ ಹೆರಿಗೆಯಾಗುವ ದಿನ ತನ್ನ ಕಚೇರಿಯಲ್ಲಿ ಎಂದಿನಂತೆ ಕಾರ್ಯನಿರ್ವಹಿಸಿದ್ದಳು. ಯಾವುದೇ ರಜೆಯನ್ನೂ ಹಾಕಿರಲಿಲ್ಲ! ಇದರಿಂದಾಗಿ ಯಾರದ್ದೋ ಮಗುವನ್ನು ಈಕೆಗೆ ಕೊಟ್ಟು ಸುಳ್ಳು ದಾಖಲಾತಿ ಸೃಷ್ಟಿಸಿದ್ದು ಖಾತ್ರಿಯಾಗುತ್ತಿದ್ದಂತೆಯೇ ಪ್ರಕರಣದಲ್ಲಿ ಭಾಗಿಯಾಗಿದ್ದ ಎಲ್ಲರ ವಿರುದ್ಧ ದೂರು ದಾಖಲಿಸಿಕೊಂಡು, ತನಿಖೆಯ ವಿವರಗಳನ್ನು ದೋಷಾರೋಪ ಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಲಾಗಿತ್ತು.

ಕಡತಗಳನ್ನೇ ಕದ್ದೊಯ್ದರು!

ಹೀಗೆ ಅನೇಕ ಪ್ರಕರಣಗಳನ್ನು ಭೇದಿಸಿರುವ ಮಕ್ಕಳ ಕಲ್ಯಾಣ ಸಮಿತಿಯು ಮಕ್ಕಳ ಹಕ್ಕುಗಳ ಉಲ್ಲಂಘನೆ ಮಾಡಿರುವ ಅಪರಾಧಿಗಳನ್ನು ಕಂಬಿ ಎಣಿಸುವಂತೆ ಮಾಡುವುದಕ್ಕಾಗಿ ತಯಾರಿ ನಡೆಸಿತ್ತು. 2010ರ ಫೆಬ್ರವರಿಯಲ್ಲಿ ಸಮಿತಿಯ ಕಾರ್ಯಾವಧಿ ಮುಗಿಯಲಿರುವುದರಿಂದ ಅಷ್ಟರೊಳಗಾಗಿ ಇದೀ ಪ್ರಕರಣಗಳನ್ನು ಇತ್ಯರ್ಥ ಮಾಡಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವುದಕ್ಕೆ ಪ್ರಯತ್ನಿಸುತ್ತಿತ್ತು. ಆದರೆ ಭಜರಂಗದಳ, ವಿಶ್ವಹಿಂದೂ ಪರಿಷತ್, ಬಿಜೆಪಿಗಳಂಥ ಸಂಘಪರಿವಾರದ ಶಕ್ತಿಗಳು ಹಾಗಾಗದಂತೆ ತಡೆಯುವುದಕ್ಕಾಗಿ ಪ್ರಯತ್ನ ನಡೆಸಿದ್ದವು. ಈ ಶಕ್ತಿಗಳ ಒತ್ತಡಕ್ಕೆ ಮಣಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಯಾರಿಗೂ ಯಾವುದೇ ಮಾಹಿತಿ ನೀಡದೆ ಇದೇ ಡಿಸೆಂಬರ್ 4ರಂದು ಏಕಾಏಕಿ ಮಕ್ಕಳ ಕಲ್ಯಾಣ ಸಮಿತಿಯ ಕಚೇರಿಗೆ ನುಗ್ಗಿ ಸಮಿತಿಯು ನಡೆಸಿರುವ ತನಿಖಾ ಕಡತಗಳನ್ನು ಕದ್ದೊಯ್ದಿದ್ದಾರೆ!

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಶಕುಂತಲಾ, ಜಂಟಿ ನಿರ್ದೇಶಕಿ ನಜ್ರತ್ ಫಾತಿಮಾ ಹಾಗೂ ಕ್ಷೇತ್ರ ಕಾರ್ಯಕರ್ತೆ ಲಕ್ಷ್ಮಿಕಾಂತಮ್ಮ ಎಂಬ ಅಧಿಕಾರಿಗಳೇ ಮಕ್ಕಳ ಕಲ್ಯಾಣ ಸಮಿತಿಯ ನ್ಯಾಯಪೀಠಕ್ಕೆ ನುಗ್ಗಿ ಕಡತಗಳನ್ನು ಕಳವು ಮಾಡಿದ ಮಹಾನುಭಾವರು. ಒಂದು ವಿಚಾರವನ್ನು ಇಲ್ಲಿ ಗಮನಿಸಬೇಕು. ಈ ಮಕ್ಕಳ ನ್ಯಾಯಪೀಠ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಸರಿಸಮಾನವಾದ ಅಧಿಕಾರವನ್ನು ಹೊಂದಿದೆ. ಇಂಥ ನ್ಯಾಯಾಂಗಾಧಿಕಾರವನ್ನು ಹೊಂದಿರುವ ಕಚೇರಿಗೇ ನುಗ್ಗಿ ಕಡತಗಳನ್ನು ಕದ್ದೊಯ್ಯುತ್ತಾರೆಂದರೆ ಅದರ ಹಿಂದೆ ಯಡಿಯೂರಪ್ಪನ ನೇರ ಮಾರ್ಗದರ್ಶನ, ಬೆಂಬಲ ಇರದೇ ಇರುವುದಿಲ್ಲ. ನೆನಪಿರಲಿ, ಅವರು ಕದ್ದೊಯ್ದಿರುವ ಕಡತಗಳಲ್ಲಿ ಪ್ರಸ್ತುತವಾಗಿ ಹೈಕೋರ್ಟ್‌ನಲ್ಲಿ ವಿಚಾರಣೆಯಾಗುತ್ತಿರುವ ಎರಡು ಪ್ರಕರಣಗಳಿಗೆ ಸಂಬಂಧಪಟ್ಟ ಕಡತಗಳೂ ಸೇರಿವೆ.

ಈಗಾಗಲೇ ವಿವರಿಸಿರುವಂತೆ ಮಕ್ಕಳ ಕಲ್ಯಾಣ ನ್ಯಾಯಪೀಠಕ್ಕೆ ಜೆಎಂಎಫ್‌ಸಿ ನ್ಯಾಯಾಲಯಕ್ಕಿರುವ ಅಧಿಕಾರವೇ ಇರುವುದರಿಂದ ಅದರ ವಶದಲ್ಲಿರುವ ಕಡತಗಳನ್ನು ಏಕಾಏಕಿ ತೆಗೆದುಕೊಂಡು ಹೋಗುವುದಿರಲಿ, ಪರಿಶೀಲಿಸುವುದಕ್ಕೂ ಯಾವುದೇ ಅಧಿಕಾರಿಗೆ ಅಧಿಕಾರವಿಲ್ಲ. ಹಾಗಾಗಿ ಈ ಹದ್ದು ಮೀರಿದ ವರ್ತನೆ ಸ್ಪಷ್ಟವಾಗಿ ಕಾನೂನಿ ಉಲ್ಲಂಘನೆಯಾಗಿದೆ.

ಕಂಪ್ಲೇಂಟ್ ಕೊಟ್ಟ ಹಿಲ್ಡಾ ರಾಯಪ್ಪನ್ ಅವರನ್ನೇ ವಜಾ ಮಾಡಿದರು!

ಹೀಗೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೂವರು ಅಧಿಕಾರಿಗಳು ಏಕಾಏಕಿ ಮಕ್ಕಳ ನ್ಯಾಯಪೀಠಕ್ಕೆ ನುಗ್ಗಿ ಕಡತಗಳನ್ನು ಕಳವು ಮಾಡಿದ್ದು ಗೊತ್ತಾಗುತ್ತಿದ್ದಂತೆಯೇ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷೆ ಹಿಲ್ಡಾ ರಾಯಪ್ಪನ್ ಕಾವೂರು ಪೊಲೀಸ್ ಠಾಣೆಯಲ್ಲಿ ಆ ಮೂವರೂ ಅಧಿಕಾರಿಗಳ ವಿರುದ್ಧ ದೂರು ದಾಖಲಿಸಿದರು. ಅಪರಾಧ ವೆಸಗಿದ್ದು ಮೇಲ್ನೋಟಕ್ಕೇ ಕಾಣುತ್ತಿದ್ದುದರಿಂದ ಪೊಲೀಸರು ಬೇರೆ ವಿಧಿಯಿಲ್ಲದೇ ಪ್ರಕರಣ ದಾಖಲಿಸಿಕೊಂಡು ಎಫ್‌ಐಆರ್ ತಯಾರಿಸಿದರು.

ಇತ್ತ ಕಾವೂರು ಪೊಲೀಸ್ ಸ್ಟೇಷನ್‌ನಲ್ಲಿ ಕಡತಗಳನ್ನು ಕದ್ದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೂವರು ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಾಗುತ್ತಿದ್ದಂತೆಯೇ ಅತ್ತ ಬೆಂಗಳೂರಿನಿಂದ ಹಿಲ್ಡಾ ರಾಯಪ್ಪನ್ ಅವರನ್ನೂ ಒಳಗೊಂಡಂತೆ ಇಡೀ ಸಮಿತಿಯನ್ನೇ ವಜಾಗೊಳಿಸುವ ಆದೇಶ ಹೊರಬಿತ್ತು!

ವಾಸ್ತವದಲ್ಲಿ ಸಂಘಪರಿವಾರಕ್ಕೆ ತಲೆನೋವಾಗಿರುವ ಈ ಸಮಿತಿಯನ್ನು ವಜಾಗೊಳಿಸುವುದಕ್ಕೆ ಕಳೆದ ಕೆಲವು ವರ್ಷಗಳಿಂದಲೂ ಪ್ರಯತ್ನ ನಡೆದೇ ಇತ್ತು. ಈ ಹಿನ್ನೆಲೆಯಲ್ಲೇ ಈ ಹಿಂದೆ ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯರಿಗೆ ಶೋಕಾಸ್ ನೋಟೀಸ್ ಕೂಡ ಜಾರಿ ಮಾಡಲಾಗಿತ್ತು. ಅದಕ್ಕೆ ಸಮಿತಿಯ ಸದಸ್ಯರು 2007ರ ಅಕ್ಟೋಬರ್‌ನಲ್ಲೇ ಸವಿವರವಾದ ಉತ್ತರವನ್ನು ಕಳಿಸಿದ್ದರು. ಮಾತ್ರವಲ್ಲದೆ, 2009ರ ಅಕ್ಟೋಬರ್ 21ರಂದು ಇಲಾಖಾ ನಿರ್ದೇಶಕರ ನೋಟೀಸಿಗೆ ವಿವರವಾದ ಪತ್ರವನ್ನು ಕಳೆದ ನವೆಂಬರ್ 4ರಂದು ರವಾನಿಸಲಾಗಿದ್ದು, ಅದು 6ರಂದು ಇಲಾಖೆಯಿಂದ ಸ್ವೀಕೃತಿಗೊಂಡಿರುವ ಬಗ್ಗೆ ದಾಖಲೆಗಳು ಸಮಿತಿಯ ಬಳಿ ಇವೆ. ಹಾಗಿದ್ದರೂ, ಈಗ ಅವರನ್ನು ವಜಾ ಮಾಡಲಾದ ಆದೇಶದಲ್ಲಿ ಶೋಕಾಸ್ ನೋಟೀಸಿಗೆ ಉತ್ತರವೇ ಬಂದಿಲ್ಲ ಎಂದು ಸುಳ್ಳು ಹೇಳಲಾಗಿದೆ.

ಸಾರಾಂಶದಲ್ಲಿ ಹೇಳಬೇಕೆಂದರೆ ಮಕ್ಕಳ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುತ್ತಿರುವ ಸಂಘಪರಿವಾರದ ಚಟ್ಟಿಗಳು ಕಂಬಿ ಎಣಿಸುವಂತೆ ಮಾಡುವುದಕ್ಕಾಗಿ ಮಕ್ಕಳ ಕಲ್ಯಾಣಕ್ಕಾಗಿ ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸುತ್ತಿದ್ದ ಸಮಿತಿಯನ್ನು ಯಡ್ಡಿ ಸರ್ಕಾರ ವಜಾ ಮಾಡಿದೆ. ಅದಕ್ಕೆ ಹೇಳಿದ್ದು ಇಂಥ ಆಡಳಿತ ಕರ್ನಾಟಕವನ್ನು ಬಿಟ್ಟು ಮತ್ತೆಲ್ಲಿ ಸಿಗಲು ಸಾಧ್ಯ ಅಂತ.

● ಕುಮಾರ್ ಬುರಡಿಕಟ್ಟಿ

ಗಣಿ ಮಾಫಿಯಾ ಎಚ್ಚೆತ್ತ ಆಂಧ್ರ ನಿಷ್ಕ್ರಿಯ ಕರ್ನಾಟಕ


● ರಾ.ಸೋಮನಾಥ್

ನಾಡೊಂದರ ನಕಾಶೆಯನ್ನೇ ಬದಲಾಯಿಸಿದವನಿಗೆ ಯಾವ ಶಿಕ್ಷೆ? ಮೂವತ್ನಾಲ್ಕು ಕಿ.ಮೀ. ಉದ್ದ ಮತ್ತು ಅರ್ಧ ಮೈಲಿ ಅಗಲದ ಭೂಭಾಗವನ್ನೇ ಕಿತ್ತೊಯ್ದು ಆಂಧ್ರಕ್ಕೆ ಸೇರಿಸಿಕೊಂಡು ಅಲ್ಲಿನ್ನ ಮೂವತ್ತು ಸಾವಿರ ಕೋಟಿಗೂ ಅಧಿಕ ಮೊತ್ತದ ಅದಿರು ದೋಚಿದವನಿಗೆ ಯಾವ ಶಿಕ್ಷೆ?

ಬಹುಶಃ ಬೇರೆ ಯಾವುದೇ ದೇಶವಾಗಿದ್ದರೆ ಇಂಥ ದ್ರೋಹಕ್ಕಾಗಿ ಆಜನ್ಮ ಪರ್ಯಂತ ಜೈಲು ಶಿಕ್ಷೆಯಾಗುತ್ತಿತ್ತಲ್ಲವೇ? ನಾಡಿನ ಸಂಪತ್ತನ್ನು ಅದೆಂಥದೇ ಪ್ರಭಾವಿ ವ್ಯಕ್ತಿ ಇಷ್ಟೊಂದು ರಾಜಾರೋಷವಾಗಿ ದೋಚುತ್ತಿದ್ದರೂ ಜನ ದಂಗೆ ಏಳಬೇಕಿತ್ತು ಕನಿಷ್ಠ ವಿರೋಧ ಪಕ್ಷಗಳಾದರೂ ಬೀದಿಗಿಳಿಯುತ್ತಿದ್ದವು. ಪ್ರತಿನಿತ್ಯ ಹರತಾಳ ಬಂದ್‌ಗಳಾಗಬೇಕಿತ್ತು ತಾನೇ?

ಕನ್ನಡ ಜನತೆ ಗೋಕಾಕ್ ಚಳವಳಿಯನ್ನು ಕಂಡಿದ್ದಾರೆ. ಕಾವೇರಿ ನೀರಿಗಾಗಿ ಜನ ಪ್ರಾಣ ಕೊಟ್ಟಿದ್ದಾರೆ. ಸರ್ಕಾರವೇ ಥರಗುಡುವಂತೆ ರೈತ್ರ ದಂಗೆಗಳಾಗಿವೆ. ಹೀಗೆ ಭುಗಿಲೆದ್ದ ಚಳವಳಿಗಳಿಂದಾಗಿಯೇ ಸರ್ಕಾರಗಳು ಬದಲಾಗಿವೆ. ಈ ಎಲ್ಲಾ ಜನಹೋರಾಟಗಳ ಹಿಂದಿದ್ದ ಕಾರಣಕ್ಕೆ ಹೋಲಿಸಿದರೆ ಗಣಿ ಮಾಫಿಯಾ ಸೃಷ್ಟಿಸಿದಷ್ಟು ಅಪಾಯ ಮತ್ತು ಅನಾಹುತದ ಮುಂದೆ ಅವು ಏನೇನೂ ಅಲ್ಲ. ನಾಡಿನ ಸಂಪತ್ತನ್ನೇ ಲೂಟಿಗೈದು ಆ ದುಡ್ಡಿನಲ್ಲೇ ಅಧಿಕಾರಕ್ಕೆ ಬಂದು ಕೊನೆಗೆ ಮುಖ್ಯಮಂತ್ರಿಯನ್ನೇ ಬ್ಲಾಕ್‌ಮೇಲ್ ಮಾಡುವ ಮಟ್ಟಕ್ಕೆ ಗಣಿ ಮಾಫಿಯಾ ಹೂಂಕರಿಸುತ್ತಿದೆಯೆಂದರೆ ಯಾವುದೇ ಸ್ವಾಭಿಮಾನಿ ಸಮುದಾಯವೊಂದು ಅದಕ್ಕೆ ಎಂಥಾ ಏಟು ಕೊಡಬೇಕಿತ್ತು?

ಹೋಗಲಿ, ಪಕ್ಕದ ಆಂಧ್ರಪ್ರದೇಶವನ್ನೇ ನೋಡಿ. ಅಲ್ಲಿ ತೆಲುಗುದೇಶಂ ನಾಯಕ ಚಂದ್ರಬಾಬು ನಾಯ್ಡು ಇವತ್ತಿಗೂ ಗಣಿಲೂಟಿಯ ವಿರುದ್ಧ ಕೂಗು ನಿಲ್ಲಿಸಿಲ್ಲ. ಆಂಧ್ರದ ಸಿಪಿಎಂ, ಸಿಪಿಐ, ಲೋಕಸತ್ತಾ, ಚಿರಂಜೀವಿಯ ಪ್ರಜಾರಾಜ್ಯಂ, ಬಿಎಸ್‌ಪಿ ಇತ್ಯಾದಿ ಸರ್ವಪಕ್ಷಗಳೆಲ್ಲವೂ ತೆಲುಗುದೇಶಂ ನೇತೃತ್ವದಲ್ಲಿ ಬೀದಿಗಿಳಿದವು. ಮೊದಲು ಅನಂತಪುರ ಜಿಲ್ಲೆಯಲ್ಲಿ ಜನ ಬಂದ್ ನಡೆಸಿದರು. ಅನಂತರ ಇಡೀ ಆಂಧ್ರಪ್ರದೇಶವೇ ಬಂದ್ ಆಚರಿಸಿತು. ಆಡಳಿತಾರೂಢ ಕಾಂಗ್ರೆಸ್ ಒಂದನ್ನು ಹೊರತುಪಡಿಸಿ ಅಲ್ಲಿನ ವಿರೋಧ ಪಕ್ಷಗಳೆಲ್ಲವೂ ಬಂದ್‌ಗೆ ಕೈ ಜೋಡಿಸಿದವು. ವಿಧಿಯಿಲ್ಲದೇ ಗಣಿ ಕರ್ಮಕಾಂಡವನ್ನು ಸಿಬಿಐ ತನಿಖೆಗೊಪ್ಪಿಸಿದ ಆಂಧ್ರದ ಮುಖ್ಯಮಂತ್ರಿ ರೋಸಯ್ಯ ಪ್ರತಿಪಕ್ಷಗಳ ಹೋರಾಟಕ್ಕೆ ಮಣಿಯಲೇಬೇಕಾಯ್ತು.



ಮುಖ್ಯಮಂತ್ರಿಯೇನೋ ಗಣಿಕಳ್ಳರ ಕೈಗೊಂಬೆ. ಆದರೆ ವಿರೋಧ ಪಕ್ಷಗಳಿಗೆ ಬಂದ ರೋಗವಾದರೂ ಏನು? ಮೊಯ್ಲಿ, ಕೃಷ್ಣ, ಖರ್ಗೆ, ಪೂಜಾರಿ, ಸಿದ್ದರಾಮಯ್ಯ, ಡಿಕೆ, ದೇಶಪಾಂಡೆ.. ಇತ್ಯಾದಿ ಘಟಾನುಘಟಿ ನಾಯಕರಿದ್ದೂ ಈತನಕ ಒಂದೇ ಒಂದು ರಾಜ್ಯವ್ಯಾಪಿ ಮುಷ್ಕರ ನಡೆಸಲಾಗಿಲ್ಲ. ಈಗ ಜಿಲ್ಲಾವಾರು ಪ್ರತಿಭಟನೆಗಳಿಗೆ ಕಾಂಗ್ರೆಸ್ ಮುಂದಾಗಿದೆ ನಿಜ. ಒಂದೊಂದು ಜಿಲ್ಲಾ ಕೇಂದ್ರಗಳಲ್ಲಿ ಒಂದೊಂದು ದಿನ ಬಿಡಿಬಿಡಿಯಾಗಿ ನಡೆಯುವ ಪ್ರತಿಭಟನೆ ಯಾವ ಲೆಕ್ಕ?

ದುರಂತವೆಂದರೆ ಅಂಥದೊಂದು ಹೋರಾಟ ಕಂಡೂ ಕರ್ನಾಟಕದ ಪ್ರತಿಪಕ್ಷಗಳು ಬುದ್ಧಿ ಕಲಿತಿಲ್ಲ. ಹಾಳಾಗಲಿ ಜನರಾದರೂ ಬೀದಿಗಿಳಿಯಬೇಕಿತ್ತಲ್ಲವೇ? ಗಣಿ ಮಾಫಿಯಾ ವಿರುದ್ಧ ಸಣ್ಣಪುಟ್ಟ ಸಂಘಟನೆಗಳು ನಡೆಸುವ ಪ್ರತಿಭಟನೆ ಕೂಡ ಸುದ್ದಿಯಾಗದಂತೆ ಇಲ್ಲಿನ ಪತ್ರಿಕೆಗಳು ಮತ್ತು ಟಿವಿ ಚಾನೆಲ್‌ಗಳು ಷಡ್ಯಂತ್ರ ನಡೆಸುತ್ತವೆಯೆಂದರೆ ಇನ್ನು ಜನ ಬೀದಿಗಿಳಿಯುವುದೆಲ್ಲಿಂದ ಬಂತು? ಗಣಿ ಮಾಫಿಯಾದಿಂದಾಗಿ ಒದಗಿದ ಆಪತ್ತು ಮತ್ತು ಲುಕ್ಸಾನಿನ ಲೆಕ್ಕಹಾಕಿದರೆ ಆಂಧ್ರಕ್ಕಿಂತಲೂ ಕರ್ನಾಟಕಕ್ಕಾದ ಹಾನಿಯೇ ವಿಪರೀತ. ಕರ್ನಾಟಕದ ಅರಣ್ಯ ಭೂಮಿಯಿಂದ ಕದ್ದ ಎರಡು ಲಕ್ಷ ಟನ್ನಿಗೂ ಅಧಿಕ ಮೊತ್ತದ ಅದಿರನ್ನು ಆಂಧ್ರದ ಪರ್ಮಿಟ್ ಬಳಸಿ ವಿದೇಶಕ್ಕೆ ಸಾಗಿಸಲಾಗಿದೆಯೆಂದು ಸ್ವತಃ ಅನಂತಪುರದ ಅರಣ್ಯಾಧಿಕಾರಿ ಕಲ್ಲೋಲ್ ಬಿಸ್ವಾಸ್ ವರದಿ ಕೊಟ್ಟಿದ್ದಾರೆ. ಸುಪ್ರೀಂಕೋರ್ಟ್ ನೇಮಿಸಿದ ಸಿಇಸಿ ತಂಡವೇ ಕರ್ನಾಟಕದ ಗಡಿ ಗುರುತುಗಳನ್ನು ನಾಶಮಾಡಿ ಅದಿರು ದೋಚಿದ ಬಗ್ಗೆ ಸ್ಪಷ್ಟ ತನಿಖೆ ನಡೆಸಿ ಆದೇಶ ನೀಡಿದೆ. ಅಷ್ಟೇ ಯಾಕೆ, ಬಳ್ಳಾರಿಗೆ ಹಿಂದೊಮ್ಮೆ ಡಿಸಿಎಫ್ ಆಗಿದ್ದ ರಾಜಶೇಖರ್ ಓಬಳಾಪುರಂ ಮೈನಿಂಗ್ ಕಂಪನಿ ಅರಣ್ಯಭೂಮಿಯಿಂದ ಅದಿರು ದೋಚಿರುವುದರ ವಿರುದ್ಧ ಸರ್ಕಾರಕ್ಕೆ ಸಲ್ಲಿಸಿದ ದೂರು ಇವತ್ತಿಗೂ ಹಾಗೇ ಬಿದ್ದಿದೆ.

ಇನ್ನು ಟಪಾಲ್ ಗಣೇಶ್, ದಿವಾಕರ್ ಬಾಬು, ರೈತಸಂಘ ಇತ್ಯಾದಿಗಳಲ್ಲದೆ ಜನಪರ ಹೋರಾಟಗಾರರು, ವಿರೋಧಿ ನಾಯಕ ಉಗ್ರಪ್ಪ, ಖರ್ಗೆ, ಜೆಡಿಎಸ್ ನಾಯಕ ದತ್ತಾ, ಸಿಪಿಐ, ಸಿಪಿಎಂ ಮುಂತಾದವರೆಲ್ಲ ಗಣಿ ಲೂಟಿಯ ವಿರುದ್ಧ ಕೊಟ್ಟ ದೂರುಗಳಿಗೆ ಲೆಕ್ಕವೇ ಇಲ್ಲ. ಸ್ವತಃ ಲೋಕಾಯುಕ್ತವೇ ಗಣಿ ದರೋಡೆಯ ವಿರುದ್ಧ ತನಿಖೆ ನಡೆಸಿ ಸರ್ಕಾರಕ್ಕೆ ವರದಿಕೊಟ್ಟು ಯಾವುದೋ ಕಾಲವಾಗಿದೆ. ಹೀಗಿದ್ದೂ "ಕರ್ನಾಟಕದಲ್ಲಿ ಗಣಿ ಅಕ್ರಮ ನಡೆದೇ ಇಲ್ಲ, ಈ ಬಗ್ಗೆ ಯಾವುದೇ ದೂರು ಸರ್ಕಾರಕ್ಕೆ ಬಂದಿಲ್ಲ ಮತ್ತು ಸಿಬಿಐ ತನಿಖೆ ಕೂಡ ಅಗತ್ಯವಿಲ್ಲ" ಎನ್ನುವ



ಹೀಗೇಕಾದರು ಕಸಾಪದ ನಲ್ಲೂರು?



ಗಣಿ ಲೂಟಿಯ ವಿರುದ್ಧ ಬೇರೆಲ್ಲರಿಗಿಂತಲೂ ಮೊದಲು ಧ್ವನಿಯೆತ್ತಬೇಕಾಗಿದ್ದು ಕಸಾಪ ಅಂದರೆ ಕನ್ನಡ ಸಾಹಿತ್ಯ ಪರಿಷತ್ತು. ಪ್ರತಿ ಕನ್ನಡಿಗನಿಗೂ ಆ ಥರದ ನಿರೀಕ್ಷೆಯಿದ್ದರೆ ಅದಕ್ಕೆ ಮುಖ್ಯ ಕಾರಣ ಕಸಾಪ ಕರ್ನಾಟಕ ಏಕೀಕರಣ ಚಳವಳಿಯ ನೇತೃತ್ವ ವಹಿಸಿದ್ದು.

ಅವತ್ತು ಏಕೀಕರಣಕ್ಕಾಗಿ ಬೀದಿಗಿಳಿದು ಹೋರಾಡಿದ ಇದೇ ಕಸಾಪ ಇವತ್ತು 34 ಕಿ.ಮೀ. ಉದ್ದ ಮತ್ತು ಅರ್ಧ ಮೈಲಿ ಅಗಲದ ಭೂಭಾಗವನ್ನು ಆಂಧ್ರಕ್ಕೆ ಸೇರಿಸಿದ ಗಣಿ ಮಾಫಿಯಾಗಳ ವಿರುದ್ಧ ಸಣ್ಣದೊಂದು ಚಕಾರ ಕೂಡ ಎತ್ತಿಲ್ಲ.

ಲೂಟಿಯಾಗುತ್ತಿರುವುದು ನಾಡಿನ ಸಂಪತ್ತು, ಗಡಿ ನಕಾಶೆಯನ್ನೇ ತಿದ್ದಿ ಕಬಳಿಸಿದ್ದು ಸಣ್ಣ ಭೂಭಾಗವಾದರೂ ಅದು ಅದಿರು ಸಮೃದ್ಧ ಭೂಮಿ ತಾನೆ? ಕಸಾಪ ಕೇವಲ ಸಾಹಿತ್ಯಕ ಸಂಘಟನೆಯಲ್ಲ, ನಾಡು ನುಡಿಗೆ ಅಪಾಯವಾದಾಗೆಲ್ಲ ಬೀದಿಗಿಳಿದು ಹೋರಾಡಿದ ಅದೆಷ್ಟು ನಿದರ್ಶನಗಳಿಲ್ಲ? ಬಹುಶಃ ಅಧ್ಯಕ್ಷ ನಲ್ಲೂರು ಪ್ರಸಾದರಿಗೆ ಧೈರ್ಯ ಸಾಲುತ್ತಿಲ್ಲವೋ, ಸರ್ಕಾರದ ಮುಲಾಜೋ ಅಥವಾ ಸೋಮಾರಿತನವೋ ಬಲ್ಲವರಾರು?

ಹಾಗಂತ ಕನ್ನಡ ಪರ ಸಂಘಟನೆಗಳು ಕೈಕಟ್ಟಿ ಕೂರಬೇಕಲ್ಲ, ಮೊನ್ನೆ ಅಂದರೆ ಡಿಸೆಂಬರ್ ೧೮ರ ಬೆಳಿಗ್ಗೆ ವಿವಿಧ ಕನ್ನಡ ಪರ ಸಂಘಟನೆಗಳ ನೂರಾರು ಕಾರ್ಯಕರ್ತರು ಕಸಾಪ ಕೇಂದ್ರ ಕಚೇರಿಗೆ ಲಗ್ಗೆಯಿಟ್ಟರು. ಗಣಿಲೂಟಿಯ ವಿರುದ್ಧದ ನಿಷ್ಕ್ರಿಯತೆಗೆ ಕನ್ನಡ ಹೋರಾಟಗಾರರು ಧಿಕ್ಕಾರ ಹಾಕುತ್ತಿದ್ದರೆ ಅಧ್ಯಕ್ಷ ನಲ್ಲೂರು ಪ್ರಸಾದ್ ನಾಪತ್ತೆಯಾಗಿದ್ದರು. ಕಸಾಪ ದುರಂತಕ್ಕೆ ಇದಕ್ಕಿಂತ ಬೇಕೆ? ಈಗಲೂ ಕಾಲ ಮಿಂಚಿಲ್ಲ, ರಾಜ್ಯ ಕಾರ್ಯಕಾರಿಣಿಯ ಸಭೆ ಕರೆದು ಗಣಿಕೊಳ್ಳೆಯ ವಿರುದ್ಧ ಕನಿಷ್ಠ ನಿರ್ಣಯವನ್ನಾದರೂ ಕೈಗೊಳ್ಳದೇ ಹೋದರೆ ಇನ್ನಾವ ಪುರುಷಾರ್ಥಕ್ಕೆ ಕಸಾಪ ಇರಬೇಕು?

ಜನ ಪ್ರತಿಭಟಿಸಿ ಎಚ್ಚರಿಸಿದ ಮೇಲೂ ಕಸಾಪಕ್ಕೆ ಜ್ಞಾನೋದಯವಾಗಲಿಲ್ಲ ಎಂದರೆ ಅದರ ಅಸ್ತಿತ್ವಕ್ಕೆ ಯಾವುದೇ ಅರ್ಥವಿಲ್ಲ, ನಾಡಿನ ಸಂಪತ್ತನ್ನೇ ದೋಚಿದವರು ಸರ್ಕಾರದ ಸೂತ್ರ ಹಿಡಿದಿರುವಾಗ ಅಂಥವರ ಪಾಪದ ದುಡ್ಡಿಗಾಗಿ ಕೈಚಾಚುವುದು ಮತ್ತು ಅಂಥವರ ದುಡ್ಡಿನಲ್ಲೇ ಸಮ್ಮೇಳನ ನಡೆಸುವುದಕ್ಕಿಂತ ಪಾಪ ಮತ್ತೊಂದಿಲ್ಲ.

ಗಣಿ ಲೂಟಿಯ ದುಡ್ಡಲ್ಲಿ ಸಮ್ಮೇಳನ ನಡೆಸುವ ಬದಲು ಬೀದಿಗಿಳಿದು ಹೋರಾಡುವುದೇ ಲೇಸಲ್ಲವೇ? ಅಧ್ಯಕ್ಷ ನಲ್ಲೂರು ಪ್ರಸಾದ್ ಮೂಲತಃ ಒಬ್ಬ ಹೋರಾಟಗಾರ. ಧೈರ್ಯ ಮಾಡಬೇಕಷ್ಟೇ.

ಟಪಾಲ್ ಗಣೇಶ್ ಎಂಬ ಏಕಾಂಗಿ

ಯಾವ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಹೋರಾಟಗಾರರು, ವಿರೋಧ ಪಕ್ಷಗಳೆಲ್ಲ ರಾಜ್ಯದ ಗಡಿ ಒತ್ತುವರಿಯನ್ನು ಪತ್ತೆಹಚ್ಚಿ ಬೀದಿಗಿಳಿಯಬೇಕಿತ್ತೋ ಅವರ್‍ಯಾರೂ ಮಾಡದ ಕೆಲಸವನ್ನು ಒಬ್ಬಂಟಿಯಾಗಿ ಸಾಧಿಸಿದ್ದು ಬಳ್ಳಾರಿಯ ಟಪಾಲ್ ಗಣೇಶ್.

ತನ್ನ ತಂದೆ ನಡೆಸುತ್ತಿದ್ದ ಗಣಿಯನ್ನು ಗೂಂಡಾಗಿರಿ ಮಾಡಿ ಆಕ್ರಮಿಸಿಕೊಂಡ ಗಣಿ ರೆಡ್ಡಿಗಳ ವಿರುದ್ಧ ಗಣೇಶ್ ಹೋರಾಡಿದ್ದು ಸ್ವಾರ್ಥಕ್ಕೆ ಆದರೂ ಅದರಲ್ಲಿ ರಾಜ್ಯದ ಹಿತಾಸಕ್ತಿಯಿತ್ತು. ರಾಜ್ಯದ ಗಡಿ ಗುರುತುಗಳನ್ನು ನಾಶಪಡಿಸಿ, ನಕಾಶೆಯನ್ನೇ ತಿದ್ದಿ ಸಹಸ್ರಾರು ಕೋಟಿ ರೂಪಾಯಿಗಳ ಮೊತ್ತದ ಅದಿರು ದೋಚಿದ್ದನ್ನು ಮೊದಲು ಪತ್ತೆಹಚ್ಚಿದ್ದು ಗಣೇಶ್ ಮತ್ತವರ ಸಹೋದರ ಏಕಾಂಬರಮ್. ಹೈಕೋರ್ಟಿಗೆ ದೂರು ಕೊಟ್ಟರು. ಸುಪ್ರೀಂಕೋರ್ಟ್ ಮೊರೆ ಹೊಕ್ಕರು. ಸುಪ್ರೀಂಕೋರ್ಟ್ ನೇಮಿಸಿದ ಸಿಇಸಿ ತನಿಖಾ ತಂಡ ಇವತ್ತು ರಾಜ್ಯದ ಗಡಿ ಒತ್ತುವರಿ ವಿರುದ್ಧ ಆದೇಶ ನೀಡಿದೆಯೆಂದರೆ, ಆಂಧ್ರ ಸರ್ಕಾರ ನೇಮಿಸಿದ ತ್ರಿಸದಸ್ಯ ಸಮಿತಿಯೇ ಕರ್ನಾಟಕದ ಗಡಿ ಒತ್ತುವರಿಯನ್ನು ಒಪ್ಪಿಕೊಂಡಿದೆಯೆಂದರೆ ಅದರ ಹಿಂದಿದ್ದದ್ದು ಟಪಾಲ್ ಗಣೇಶ್ ಶ್ರಮ ಮಾತ್ರ.

ಗಣೇಶ್ ನೀಡಿದ ದಾಖಲೆಗಳ ಆಧಾರದ ಮೇಲೇ ಆಂಧ್ರ ಸರ್ಕಾರ ಸಿಬಿಐ ತನಿಖೆಗೊಪ್ಪಿಸಿತು. ಇವತ್ತಲ್ಲ ನಾಳೆ ಗಣಿ ರೆಡ್ಡಿಗಳೇನಾದರೂ ಜೈಲು ಪಾಲಾದರೆಂದರೆ, ಗಣಿ ಮಾಫಿಯಾ ಒತ್ತುವರಿ ಮಾಡಿದ ಕರ್ನಾಟಕದ ನೆಲ ಮತ್ತೆ ದಕ್ಕಿತೆಂದರೆ, ಅಥವಾ ಅಲ್ಲಿಂದ ಕದ್ದೊಯ್ದ ಅದಿರಿನ ರೊಕ್ಕ ಜಪ್ತಿಯಾಯಿತೆಂದರೆ ಅದಕ್ಕೆಲ್ಲ ಕನ್ನಡಿಗರು ಕೃತಜ್ಞತೆ ಸಲ್ಲಿಸಬೇಕಾದದ್ದು ಟಪಾಲ್ ಗಣೇಶ್ ಒಬ್ಬರಿಗೇ.

ಕಳೆದ ಐದು ವರ್ಷಗಳಿಂದ ಸುದೀರ್ಘವಾಗಿ ದಾಖಲೆಗಳ ಸಮೇತ ಗಣಿ ಕೊಳ್ಳೆಯನ್ನು ಬಯಲಿಗೆಳೆದ ಟಪಾಲ್ ಗಣೇಶ್ ಸದ್ಯ ಎಂಥ ಅಪಾಯಕ್ಕೆ ಸಿಲುಕಿದ್ದಾರೆಂದರೆ ಯಾವ ಗಳಿಗೆಯಲ್ಲಾದರೂ ಶ್ರೀರಾಮುಲು ಗೂಂಡಾ ಪಡೆ ಅವರನ್ನು ಮುಗಿಸಬಹುದು. ಹಾಡುಹಗಲೇ ಬಂದೂಕು ಹಿಡಿದು ಗಣಿಗಳ ಸುತ್ತ ಗಸ್ತು ಹಾಕುವ ಆಂಧ್ರದ ಗಣಿ ಮಾಫಿಯಾದ ತಾಕತ್ತಿಗೆ ಒಬ್ಬ ಟಪಾಲ್‌ಗೆ ಗಣೇಶ್‌ರನ್ನು ಮುಗಿಸುವುದು ಎಷ್ಟು ಹೊತ್ತು?

ಈಗಾಗಲೇ ಗಣಿ ಗೂಂಡಾಗಳ ಕೊಲೆಯತ್ನದಿಂದ ಎರಡು ಬಾರಿ ಬಚಾವಾದ ಗಣೇಶ್‌ರನ್ನು ಕನ್ನಡ ಜನತೆ ಉಳಿಸಿಕೊಳ್ಳಬೇಕಲ್ಲವೆ?

ಮಂತ್ರಿ ಯಡಿಯೂರಪ್ಪನವರಿಗೆ ಕೆಲವಿನಗಳ ...ಲ್ಲಿ "ರಾಜ್ಯದ ಸಂಪತ್ತು ಲೂಟಿಯಾಗುತ್ತಿದ್ದರೂ ... ತಡೆಗಟ್ಟಲಾಗುತ್ತಿಲ್ಲ" ಎಂಬ ದುಃಖ ನನ್ನನ್ನು ...ಡಿದೆ ಎಂದು ತಾನೇ ಹೇಳಿದ ಮಾತಿನ ನೆನಪಿಲ್ಲ. ಮುಖ್ಯಮಂತ್ರಿ ಕೇದಿ ಗಣಿಗಳ್ಳರು, ನರುಚ್ಚ ಸರ್ಕಾರ, ...ಜ್ಯದ ಅಧಿಕಾರಿಗಳು ಮತ್ತು ತಮ್ಮನ್ನು ತಾವೇ ...ಕೊಳ್ಳಲು ನಿಂತ ಶಾಸಕರಲ್ಲಿ ಸೇರಿ ಹೇಗೆ ...ರೋದಿಯೊಂದರ ಪಾಲುದಾರರಾಗುತ್ತಾರೆಂಬುದಷ್ಟೆ ...ತ ಬೇಕೇ?

...ನಿತ್ಯ ಕಮ್ಮಿಯೆಂದರೂ ಐದು ಸಾವಿರ ಲಾರಿಗಳಲ್ಲಿ ...ಗೂ ಬಳ್ಳಾರಿ ಅರಣ್ಯದಿಂದ ಕದ್ದ ಅದಿರನ್ನು ...ಾಗುತ್ತಿದೆ. ಸರ್ಕಾರದ ಯಾವುದೇ ಚೆಕ್‌ಪೋಸ್ಟ್ ... ಅಧಿಕಾರಿ, ಯಾವುದೇ ಕಾನೂನಿನ ಹಂಗಿಲ್ಲದೆ ...ರೋಪವಾಗಿ ಅದಿರು ದೋಚುತ್ತಿರುವ ಗಣಿರೆಡ್ಡಿ... ಯಡ್ಡಿ ಸರ್ಕಾರದ ಸೂತ್ರಧಾರರು. ಇದರರ್ಥ ...ಸ್ತಿತ್ವದಲ್ಲಿರುವುದು ಗಣಿ ಮಾಫಿಯಾದ ಕೈಗೊಂಬೆ ... ಯು.ಆರ್.ಅನಂತಮೂರ್ತಿಯಂಥವರೇ ಗಣಿ...



ಗಣಿಗಳ ಸಮೀಕ್ಷೆ ನಡೆಸುತ್ತಿರುವ ಕೇಂದ್ರ ತಂಡ...

...ಮಾ ರಾಜ್ಯದ ಮೊದಲ ಶತ್ರುವೆಂದು ಹೇಳಿದ ...ಾ ಗಣಿ ರೆಡ್ಡಿಗಳ ಲೂಟಿಯ ವಿರುದ್ಧ ಯಾವ ... ದಂಗೆಯಾಗಬೇಕಿತ್ತು?

...ನ್ನೆ ನಡೆದ ಕಾಂಗ್ರೆಸ್ ಪ್ರತಿಭಟನೆಯೇ ಕೊನೆ. ಇಲ್ಲಿ ಗಣಿ ರೆಡ್ಡಿಗಳ ವಿರುದ್ಧ ಕಿಡಿಕಾರುವ ...ಂಡೆ, ಕಾಟಾಚಾರಕ್ಕೆಂಬಂತೆ ಗಣಿ ಹಗರಣವನ್ನು ತನಿಖೆಗೊಪ್ಪಿಸಿ ಎನ್ನುವ ಸಿದ್ದರಾಮಯ್ಯ, ...ದೋ ವೇದಿಕೆಯಲ್ಲಿ ಗಣಿ ಲೂಟಿ ವಿರುದ್ಧ ...ಯ್ದ ಜನಾರ್ದನ ಪೂಜಾರಿ ಮತ್ತು ಆವತ್ತಿನಿಂದ ...ತನಕ ಗಣಿ ಹಗರಣದ ಸಿಬಿಐ ತನಿಖೆಗೆ ಒತ್ತಾಯಿಸಿ ...ದೇ ಪ್ರತಿಭಟಿಸುತ್ತಿರುವ ಕಾಂಗ್ರೆಸ್‌ನ ಬೆಂಗಳೂರು ...ಘಟಕದ ಕಾರ್ಯಕರ್ತರು. ಇದು ಬಿಟ್ಟರೆ ಗಣಿ ...ು ವಿರುದ್ಧ ನಿರಂತರವಾಗಿ ಕೂಗೆಬ್ಬಿಸುತ್ತಲೇ ...ದ್ದ ವಿಧಾನ ಪರಿಷತ್ ವಿರೋಧಿ ನಾಯಕ ಉಗ್ರಪ್ಪ, ...ಟಿಯ ವಿರುದ್ಧ ಪುಸ್ತಕ ಬರೆದರು. ಬಳ್ಳಾರಿಗೆ ... ಕಳ್ಳ ಗಣಿ ರೆಡ್ಡಿಗಳನ್ನು ಪರಿಶೀಲಿಸಿ ಬಂದರು. ... ಮೇಲೆ ದೂರು ಬರೆದರು. ಒಬ್ಬ ಉಗ್ರಪ್ಪ ...ಗಣಿ ದರೋಡೆಯನ್ನು ನಾಡಿಗೊದಗಿದ ಆಪತ್ತೆಂದು ...ಬ್ಬ ಕಾಂಗ್ರೆಸ್ ನಾಯಕರೂ ಭಾವಿಸಲೇ ಇಲ್ಲ.

...ಧ್ರದಲ್ಲಿ ತೆಲುಗುದೇಶಂ ಆ ಮಟ್ಟದ ...ಟ ನಡೆಸಿದ್ದನ್ನು ಕಣ್ಣಾರೆ ಕಂಡೂ ಕರ್ನಾಟಕದ ...ಧ ಪಕ್ಷಗಳು ಬುದ್ಧಿ ಕಲಿತಿಲ್ಲ. ಗಣಿ ...ತಲೂ ನೈಸ್ ವಿರೋಧಿ ಚಳವಳಿಯಲ್ಲಿ ...ಗೌಡರು ಬಿಜಿಯಾಗಿದ್ದಾರೆ. ಪುತ್ರ ...ಸ್ವಾಮಿ ಕೂಡಾ ಪೂರ್ಣ ಮನಸ್ಸಿನಿಂದ ...ಗಳ ವಿರುದ್ಧ ಹೋರಾಟಕ್ಕಿಳಿದಿಲ್ಲ. ಸಿಪಿಐ ...ಪಿಎಂ ಬಿಡಿಬಿಡಿಯಾಗಿ ಪ್ರತಿಭಟಿಸಿದವೇ ... ರಾಜ್ಯವ್ಯಾಪಿ ಚಳವಳಿಯತ್ತ ತಲೆಕೆಡಿಸಿ ...

...ಪ್ಪಿನ ಮೊತ್ತ ಮತ್ತು ರಾಜಕೀಯ, ಆರ್ಥಿಕ ...ದ ಲೆಕ್ಕ ಹಾಕಿದರೆ ಈ ಹೊತ್ತಿಗಾಗಲೇ ...ಸ್ ವರದಿ ಚಳವಳಿಯನ್ನು ಮೀರಿಸುವಂಥ ...ಟ ಭುಗಿಲೇಳಬೇಕಿತ್ತು, ಕಾವೇರಿ ನೀರಿಗಾಗಿ ...ಳವಳಿಯನ್ನು ಕಂಡವರಿಗೆ ಸಹಸ್ರಾರು ಕೋಟಿ ... ನಾಡಿನ ಸಂಪತ್ತು ಕೊಳ್ಳೆಯಾಗುತ್ತಿದ್ದರೂ ಜನ ...ವುದು ಒಗಟಾಗಿ ಕಾಡಲೇಬೇಕಿತ್ತು, ಕರ್ನಾಟಕಕ್ಕೆ ...ಿದರೆ ಆಂಧ್ರಕ್ಕಾಗಿರುವ ಹಾನಿ ತೀರಾ ಕಮ್ಮಿ. ವಿರೋಧ ಪಕ್ಷಗಳ ಹೋರಾಟಕ್ಕೆ ಮಣಿದ ...ಂತ್ರಿ ರೋಸಯ್ಯ, ಸಿಬಿಐ ತನಿಖೆಗೊಪ್ಪಿಸಿದ ... ಗಣಿ ಅಕ್ರಮಗಳ ತನಿಖೆಗೆಂದೇ ಉನ್ನತ ತ್ರಿಸದಸ್ಯ ...ಿಯೊಂದನ್ನು ರಚಿಸಿದರಲ್ಲ, ಈಗ ಆ ಸಮಿತಿಯ ...ಯೂ ಹೊರಬಿದ್ದಿದೆ. ಓಬಳಾಪುರಂ ಮೈನಿಂಗ್ ... ಕರ್ನಾಟಕದ ಗಡಿರೇಖೆಯ ಶಾಶ್ವತ ಸರ್ವೆ ...ಗಳನ್ನು ನಾಶಪಡಿಸಿದೆಯೆಂದೂ, ಈ ಬಗ್ಗೆ ಆಂಧ್ರದ ...ಗಳು ಕೈಗೊಂಡ ಸಮೀಕ್ಷೆ ಕೂಡ ಗಣಿಲೂಟಿಗೆ ...ಪ ಪಡ್ಡುತ್ತಿಸೊಡೂ. ಅಂತರರಾಜ್ಯ ಗಡಿರೇಖೆ ... ಸಂಗತಿಯನ್ನೂ ಪರಿಶೀಲಿತ ಆಂಧ್ರದ ಅಧಿಕಾರಿಗಳು ... ಹಂಚಾರಿಸಿ ಗಣಿ ರೆಡ್ಡಿಗಳ ಲೂಟಿಗೆ ಸಹಕರಿಸಿ...

...ದ್ದಾರೆಂದೂ, ಓಎಂಸಿ ಆಂಧ್ರದ ನಕಲಿ ಪರ್ಮಿಟ್ಟುಗಳನ್ನು ಪಡೆದು ಕರ್ನಾಟಕದಿಂದ ಕದ್ದ ಮಾಲನ್ನು ಸಾಗಿಸಿದೆಯೆಂದೂ ಪಡೆದ ಪರ್ಮಿಟ್ಟುಗಳಿಗೆ ಹೋಲಿಸಿದರೆ ಓಎಂಸಿ ಆಂಧ್ರದಲ್ಲಿ ಅಗೆದದ್ದು ಶೇ.40ಕ್ಕಿಂತ ಕಮ್ಮಿ ಮಟ್ಟದ ಅದಿರಾದರೂ ಉಳಿಕೆ ಶೇ.60ರಷ್ಟನ್ನು ಕರ್ನಾಟಕದ ಅರಣ್ಯಗಳಿಂದ ದೋಚಿದೆಯೆಂದೂ ಅದಕ್ಕೊಂದು ಕಾಡನ್ನೇ ಕಡಿದು ಅಕ್ರಮ ರಸ್ತೆ ನಿರ್ಮಿಸಿದ್ದು ಇಂಥ ಕದ್ದ ಅದಿರಿನ ಸಾಗಾಟಕ್ಕಾಗಿ ದಲಿತರ ಭೂಮಿಯನ್ನೇ ಆಕ್ರಮಿಸಿ ಅನಧಿಕೃತ ರೈಲ್ವೇ ಮಾರ್ಗಗಳನ್ನು ನಿರ್ಮಿಸಿದೆಯೆಂದೂ ನಿನ್ನೆಯಷ್ಟೇ ವರದಿ ಕೊಟ್ಟಿದೆ.

ಈತನಕ ಕದ್ದು ಸಾಗಿಸಿದ ಅದಿರಿನ ಮೊತ್ತದ ಲೆಕ್ಕ ಒತ್ತಟ್ಟಿಗಿರಲಿ ಸದ್ಯ ಮಲಪನ ಗುಡಿಯಲ್ಲಿ ಗಣಿ ರೆಡ್ಡಿಗಳು ಸಂಗ್ರಹಿಸಿಟ್ಟಿರುವ ಕದ್ದ ಮಾಲಿನ ಮೊತ್ತವೇ ಐದು ಲಕ್ಷ ಟನ್ನುಗಳಷ್ಟು. ಇದು ಕೂಡಾ ಕರ್ನಾಟಕದಿಂದ ಕದ್ದು ಸಾಗಿಸಿದ ಮಾಲೆಂದು ಆಂಧ್ರದ ತ್ರಿಸದಸ್ಯ ಸಮಿತಿ ಪತ್ತೆ ಹಚ್ಚಿದೆ.

ತನಗೆ ಯಾವುದೇ ದೂರು ಬಂದಿಲ್ಲ, ಸಿಬಿಐ ತನಿಖೆಯ ಅಗತ್ಯವಿಲ್ಲ ಎನ್ನುವ ಮುಖ್ಯಮಂತ್ರಿಗೆ ಇದಕ್ಕಿಂತ ಇನ್ನೇನು ಪುರಾವೆ ಬೇಕು?

ಮುಖ್ಯಮಂತ್ರಿಯೇನೋ ಗಣಿಕಳ್ಳರ ಕೈಗೊಂಬೆ. ಆದರೆ ವಿರೋಧ ಪಕ್ಷಗಳಿಗೆ ಬಂದ ರೋಗವಾದರೂ ಏನು? ಮೊಯ್ಲಿ, ಕೃಷ್ಣ, ಖರ್ಗೆ, ಪೂಜಾರಿ, ಸಿದ್ದರಾಮಯ್ಯ, ಡಿಕೆ, ದೇಶಪಾಂಡೆ.. ಇತ್ಯಾದಿ ಘಟಾನುಘಟಿ ನಾಯಕರಿದ್ದೂ ಈತನಕ ಒಂದೇ ಒಂದು ರಾಜ್ಯವ್ಯಾಪಿ ಮುಷ್ಕರ ನಡೆಸಲಾಗಿಲ್ಲ. ಈಗ ಜಿಲ್ಲಾವಾರು ಪ್ರತಿಭಟನೆಗಳಿಗೆ ಕಾಂಗ್ರೆಸ್ ಮುಂದಾಗಿದೆ ನಿಜ. ಒಂದೊಂದು ಜಿಲ್ಲಾ ಕೇಂದ್ರಗಳಲ್ಲಿ ಒಂದೊಂದು ದಿನ ಬಿಡಿಬಿಡಿಯಾಗಿ ನಡೆಯುವ ಪ್ರತಿಭಟನೆ ಯಾವ ಲೆಕ್ಕ?

ಜೆಡಿಎಸ್‌ಗೆ ಇದಕ್ಕಿಂತ ದೊಡ್ಡ ಅವಕಾಶ ಬೇಕಿತ್ತೇ? ಮನಸ್ಸು ಮಾಡಿದ್ದರೆ ದೇವೇಗೌಡರು ಬಳ್ಳಾರಿಗೆ ಪಾದಯಾತ್ರೆ ಕೈಗೊಳ್ಳಬಹುದಿತ್ತು. ಸರ್ವಪಕ್ಷಗಳನ್ನೂ ಒಗ್ಗೂಡಿಸಿ ವೇದಿಕೆ ನಿರ್ಮಿಸಬಹುದಿತ್ತು. ಸಿಪಿಐ ಮತ್ತು ಸಿಪಿಎಂನಂಥ ಸಣ್ಣಪುಟ್ಟ ಪಕ್ಷಗಳೂ ಗಣಿ ಲೂಟಿ ವಿರುದ್ಧ ಬೀದಿಗಿಳಿದಿರುವಾಗ ಬಿಜೆಪಿ ಹೊರತಾಗಿ ಎಲ್ಲಾ ಪಕ್ಷಗಳೂ ಒಗ್ಗೂಡಿ ಕರ್ನಾಟಕ ಬಂದ್ ಕರೆಕೊಡುವುದು ಎಷ್ಟು ಹೊತ್ತು?

ಆದರೆ ಬೆಕ್ಕಿಗೆ ಗಂಟೆ ಕಟ್ಟುವವರು ಬೇಕಲ್ಲ? ಕಾಟಾಚಾರದ ಪ್ರತಿಭಟನೆ ಮತ್ತು ಹೇಳಿಕೆಗಳನ್ನು ಬಿಟ್ಟರೆ ದೊಡ್ಡಮಟ್ಟದ ಬೀದಿ ಹೋರಾಟ ಕಟ್ಟಲು ಯಾರಿಗೂ ಮನಸ್ಸಿಲ್ಲ-ಮೈಬಗ್ಗುತ್ತಿಲ್ಲ.

ಕಾಂಗ್ರೆಸ್ ಮತ್ತು ಜೆಡಿಎಸ್‌ಗಳ ಇಂಥ ಅರೆಮನಸ್ಸಿನ ವಿರೋಧಕ್ಕಿರುವ ಕಾರಣವೇನು ಗೊತ್ತೆ? ಗಣಿಲೂಟಿಯಲ್ಲಿ ಈ ಎರಡೂ ಪಕ್ಷಗಳದ್ದೂ ಪಾಲಿದೆ. ಧರ್ಮಸಿಂಗ್ ಮುಖ್ಯಮಂತ್ರಿಯಾಗಿದ್ದಾಗ ಲಂಚ ತಿಂದು 44 ಅಕ್ರಮ ಗಣಿಗಳಿಗೆ ಪರವಾನಗಿ ನೀಡದೇ ಹೋಗಿದ್ದರೆ, ಅನಂತರ ಬಂದ ಕುಮಾರಸ್ವಾಮಿ ಇಂಥ 47 ಕಳ್ಳ ಗಣಿಗಳಿಗೆ ದಾರಿ ಮಾಡಿಕೊಡದೇ ಹೋಗಿದ್ದರೆ, ಈ ಹೊತ್ತಿಗೆ ಗಣಿಲೂಟಿ ವಿರುದ್ಧದ ಹೋರಾಟದ ಸ್ವರೂಪವೇ ಬೇರೆಯಾಗಿರುತ್ತಿತ್ತು.



ಗಣಿ ರೆಡ್ಡಿಗಳ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ......

ಗಣಿ ಪಾಪದಲ್ಲಿ ಕಾಂಗ್ರೆಸ್-ಜೆಡಿಎಸ್‌ಗಳೆರಡೂ ಸಮಾನ ಭಾಗಿದಾರರು. ನೈಸ್ ಕಂಪೆನಿಯ ಖೇಣಿ ವಿರುದ್ಧ ರ್‍ಯಾಲಿಯನ್ನೇ ಆಯೋಜಿಸಿದ ದೇವೇಗೌಡರಿಗೆ ಅದರ ಲಕ್ಷಪಟ್ಟು ಅನಾಹುತಕಾರಿಯಾದ ಗಣಿಕೊಳ್ಳೆಯ ವಿರುದ್ಧ ಚಳವಳಿ ನಡೆಸುವುದು ಯಾವ ಮಹಾ?

ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಮೂರು ಗಣಿ ಪಾಪದಲ್ಲಿ ಸಮಾನ ಭಾಗಿದಾರರೇ. ಕೊನೆಗೂ ಕನ್ನಡಿಗರ ನೆರವಿಗೆ ಬಂದದ್ದು ಆಂಧ್ರದ ಚಂದ್ರಬಾಬು ನಡೆಸಿದ ಹೋರಾಟ ಮತ್ತು ಅದರ ಫಲವಾಗಿ ಶುರುವಾದ ಸಿಬಿಐ ತನಿಖೆಯೇ ಹೊರತು ಕರ್ನಾಟಕದ ವಿರೋಧ ಪಕ್ಷಗಳಲ್ಲ. ಟಪಾಲ್ ಗಣೇಶರಂಥ ಗಣಿ ಉದ್ಯಮಿಯೊಬ್ಬ ವ್ಯಕ್ತಿಗತವಾಗಿ ನಡೆಸಿದಷ್ಟು ಹೋರಾಟವನ್ನೂ ಇಲ್ಲಿನ ರಾಜಕೀಯ ಪಕ್ಷಗಳು ನಡೆಸಲಿಲ್ಲವೆಂದರೆ ಅದು ಕನ್ನಡಿಗರ ದುರಂತವಲ್ಲದೇ ಮತ್ತೇನು?

ಗೌಡ, ಚಿಮೂ, ವಾಟಾಳು
ಬೀದಿಗೆ ಬಾರದ ಕಟ್ಟಾಳು?

ರಾಜಕೀಯ ಪಕ್ಷಗಳ ಕಪಟನಾಟಕ ಗೊತ್ತಾದ ನಂತರವಾದರೂ ಇಲ್ಲಿನ ಜನಪರ ಸಂಘಟನೆಗಳಿಗೆ ಬುದ್ಧಿ ಬರಬೇಕಿತ್ತಲ್ಲವೇ?

ಒಂದು ಹಂತದಲ್ಲಿ ಗಣಿಲೂಟಿಯ ವಿರುದ್ಧ ಸಾಹಿತಿ-ಬುದ್ಧಿಜೀವಿಗಳು ಬೀದಿಗಿಳಿದು ಪ್ರತಿಭಟಿಸಿದ್ದು ನಿಜವಾದರೂ ಅಂಥ ಹೋರಾಟವನ್ನು ಜನರತ್ತ ಕೊಂಡೊಯ್ಯುವ ಇಚ್ಛಾಶಕ್ತಿ ಮತ್ತು ಚೈತನ್ಯ ಮಾತ್ರ ಯಾರಲ್ಲೂ ಕಾಣಿಸಲಿಲ್ಲ. ಜ್ಞಾನಪೀಠ ಸಾಹಿತಿ ಯು.ಆರ್.ಅನಂತಮೂರ್ತಿಯವರಿಗಿದ್ದ ಕಾಳಜಿಯೊಂದೇ ಅಲ್ಲಲ್ಲಿ ವ್ಯಕ್ತಗೊಂಡಿದ್ದು ಬಿಟ್ಟರೆ ಅದಕ್ಕೆ ಜನಪರ ಸಂಘಟನೆಗಳ್ಯಾವವು ಸ್ಪಂದಿಸಲೇ ಇಲ್ಲ. ರೈತ ನಾಯಕರಾದ ಕೋಡಿಹಳ್ಳಿ ಚಂದ್ರಶೇಖರ್ ಮತ್ತು ವೀರಸಂಗಯ್ಯ ಒಂದಷ್ಟು ಪ್ರತಿಭಟನೆಗಳನ್ನು ಹಮ್ಮಿಕೊಂಡರಾದರೂ ಅದಕ್ಕೆ ಪುಟ್ಟಣ್ಣಯ್ಯ ಕೈ ಜೋಡಿಸಲಿಲ್ಲ.

ಸಮತಾ ಸೈನಿಕಾ ದಳದ ನಾಯಕ ವೆಂಕಟಸ್ವಾಮಿ ಮತ್ತು ದಲಿತ ಸಂಘರ್ಷ ಸಮಿತಿಯ ಮಾವಳ್ಳಿ ಶಂಕರ್ ಇಬ್ಬರನ್ನು ಬಿಟ್ಟರೆ ಸೋಕಾಲ್ಡ್ ಸರ್ವೋದಯ ಪಕ್ಷದ ರಾಜ್ಯಾಧ್ಯಕ್ಷ ದೇವನೂರು ಮಹಾದೇವರಾಗಲಿ, ಶ್ರೀಧರ್ ಕಲಿವೀರ, ಜಯಣ್ಣ, ಲಕ್ಷ್ಮಿನಾರಾಯಣ ನಾಗವಾರ ಇತ್ಯಾದಿ ದಲಿತ ನಾಯಕರಾಗಲಿ ಗಣಿಲೂಟಿಯ ಆಪತ್ತನ್ನೇ ಅರಿಯಲಿಲ್ಲ.

ಅದನ್ನು ದಲಿತ ನಾಯಕರ ಮಿತಿಯೆಂದೇ ಲೆಕ್ಕಹಾಕಿದರೂ ಬೇಕಾಬಿಟ್ಟಿ ಕನ್ನಡಪರ ಸಂಘಟನೆಗಳಿದ್ದವಲ್ಲವೇ? ಲೂಟಿಯಾಗಿದ್ದು ನಾಡಿನ ಸಂಪತ್ತು, ಕನ್ನಡಿಗರಷ್ಟೇ ಅಲ್ಲ ಇಲ್ಲಿರುವ ಮುಸ್ಲಿಂ, ತಮಿಳರು, ಮರಾಠಿಗರು ಇತ್ಯಾದಿ ಕರ್ನಾಟಕದ ಪ್ರತಿ ಪ್ರಜೆಯ ಮಕ್ಕಳು ಮರಿಮಕ್ಕಳ ಭವಿಷ್ಯತ್ತಿಗಾಗಿ ಜೋಪಾನವಾಗಿಸಬೇಕಾದ ಅದಿರು ಸಂಪತ್ತನ್ನು ಯಾರೋ ಕಳ್ಳಕಾಕರು ದೋಚಿ ಕೊನೆಗೆ ಅವರೇ ಸರ್ಕಾರದ ಸೂತ್ರಧಾರರಾದ ದುರಂತ ಕಣ್ಣಮುಂದಿರುವಾಗ ರಕ್ಷಣಾ ವೇದಿಕೆಯ ನಾರಾಯಣಗೌಡನಂಥವರು ಎಂಥಾ ಹೋರಾಟ ಕಟ್ಟಬೇಕಿತ್ತಲ್ಲವೇ?

ಕುಚೋದ್ಯವೆಂದರೆ ರಕ್ಷಣಾ ವೇದಿಕೆಯ ಸ್ವಾಭಿಮಾನಿ ಕನ್ನಡಿಗರ ಸಮಾವೇಶಕ್ಕೆ ಗಣಿಕಳ್ಳ ಜನಾರ್ದನ ರೆಡ್ಡಿಯೇ ಅತಿಗಣ್ಯ ಅತಿಥಿ ಮತ್ತು ಅನ್ನದಾತ. ನಾಡಿನ ಸಂಪತ್ತಿನ ಲೂಟಕೋರನೇ ನಾರಾಯಣಗೌಡನ ಅನ್ನದಾತನಾದರೆ ಪಾಪ, ನಾರಾಯಣಗೌಡ ತಾನೇ ಹೇಗೆ ಗಣಿಲೂಟಿ ವಿರುದ್ಧ ಬೀದಿಗಿಳಿಯಲು ಸಾಧ್ಯ?

ಇನ್ನು ಜಾಣಗೆರೆ ಮತ್ತು ಅವರ ಜಯಕರ್ನಾಟಕ ಎನ್ನುವ ಸ್ವಯಂಘೋಷಿತ ಕನ್ನಡಪರ ಸಂಘಟನೆಗೆ ತನ್ನ ಗೊತ್ತುಗುರಿಯ ಬಗ್ಗೆಯೇ ಗೊಂದಲಗಳಿವೆ. ಜೀವನಪರ್ಯಂತ ರೊಚ್ಚು, ಕೆಚ್ಚು, ಕೊಚ್ಚು ಎಂದು ಭಾಷಣ ಬಿಗಿಯುವುದನ್ನೇ ಕಾಯಕ ಮಾಡಿಕೊಂಡ ಜಾಣಗೆರೆ ಈಗ ನಿದ್ದೆಯಿಂದೆದ್ದಂತೆ ಸಾಮರಸ್ಯವೋ ಸಂಘರ್ಷವೋ ಎಂದು ಕಾರ್ಯಕರ್ತರನ್ನು ಕೇಳುತ್ತಿದ್ದಾರೆ. ಹೀಗಾಗಿ ಸಂಘರ್ಷವೆಂಬುದು ಜಯಕರ್ನಾಟಕದ ಮಟ್ಟಿಗೆ ಮರೀಚಿಕೆಯಾಗಿದೆ. ಜಾಣಗೆರೆ ಯಾರೊಡನೆ ಸಾಮರಸ್ಯ ಸಾಧಿಸುತ್ತಾರೋ ಎಂಬುದು ಈತನಕ ನಿಗೂಢ!



ನಾರಾಯಣಗೌಡ



ಚಿಮೂ



ವಾಟಾಳ್

ಮಾತೆತ್ತಿದರೆ ನಾಯಿ, ಕತ್ತೆ, ಎಮ್ಮೆ, ಕುರಿ ಇತ್ಯಾದಿ ಪ್ರಾಣಿಗಳನ್ನು ಹಿಡಿದುತಂದು ಪೌರಾಣಿಕ ಪಾತ್ರಧಾರಿಗಳೋಪಾದಿಯಲ್ಲಿ ಪ್ರತಿಭಟಿಸುವುದು ವಾಟಾಳ್ ಶೈಲಿ. ಯಾವ ಜನ್ಮಾಂತರದ ಋಣಾನುಬಂಧವೋ ಗೊತ್ತಿಲ್ಲ, ಕತ್ತೆ, ಕುರಿ, ಎಮ್ಮೆಗಳ ಹೊರತಾಗಿ ವಾಟಾಳ್ ಸುತ್ತಮುತ್ತ ಮನುಷ್ಯರೇ ಅಪರೂಪವಾಗಿಬಿಟ್ಟದ್ದಾರೆ. ವಿಧಾನಸೌಧದಲ್ಲಿ ಕಂಪ್ಯೂಟರ್ ಸುಟ್ಟದ್ದಕ್ಕೊಂದು, ಮರಕಡಿದಿದ್ದಕ್ಕೆ ಮತ್ತೊಂದು, ಸೊಳ್ಳೆಗಳ ವಿರುದ್ಧ, ನಾಯಿಗಳ ವಿರುದ್ಧ ದಿನಕ್ಕೊಂದು ಚಿತ್ರವಿಚಿತ್ರ ಪ್ರತಿಭಟನೆ ನಡೆಸುವ ವಾಟಾಳ್ ಸಾಹೇಬರಿಗೆ ಗಣಿಲೂಟಿಯ ಅಪಾಯದ ಪಾಠ ಹೇಳುವವರ್‍ಯಾರು?

ಕನ್ನಡ ಸೇನೆಯ ನಾಯಕ ಕುಮಾರ್, ದಲಿತನಾಯಕ ಎನ್.ಮೂರ್ತಿ, ಮತ್ತೊಬ್ಬ ಕನ್ನಡ ಚಳವಳಿಗಾರ ಪ್ರಭಾಕರರೆಡ್ಡಿಯಂಥವರು ಕೂಡಾ ವಾಟಾಳ್ ಸೋಂಕಿಗೆ ಬಿದ್ದು ನಿರರ್ಥಕ ಚಳವಳಿಗಳಲ್ಲಿ ಸವೆದುಹೋಗುತ್ತಿರುವುದು ಮತ್ತೊಂದು ದುರಂತವಷ್ಟೆ.

ಇಂಥ ಜನಪರ ಚಳವಳಿಗಾರರೇ ಗಣಿಲೂಟಿಯ ಅಪಾಯ ಅರಿಯದೇ ಹೋದರೆ, ಬೀದಿಗಿಳಿದು ಪ್ರತಿಭಟಿಸದೇ ಕೂತರೆ ಇನ್ನು ಜಿ.ಎಸ್.ಶಿವರುದ್ರಪ್ಪನವರಂಥ ರಾಷ್ಟ್ರಕವಿಯಾಗಲಿ, ಬೆಂಕಿ ಬರಗೂರರಂಥ ಉದ್ದಂಡ ಪಂಡಿತರಾಗಲಿ ಹೇಗೆ ತಾನೇ ಬೀದಿಗಿಳಿಯಲು ಸಾಧ್ಯ? ಎಸ್‌ಎಫ್‌ಐ, ಎನ್‌ಎಸ್‌ಯುಐ, ಎಐಎಸ್‌ಎಫ್‌ನಂಥ ವಿದ್ಯಾರ್ಥಿ ಸಂಘಟನೆಗಳಿಗಿದು ದೊಡ್ಡ ಸವಾಲಾಗಬೇಕಿತ್ತು. ಸಂಶೋಧಕ ಚಿದಾನಂದ ಮೂರ್ತಿಯಂಥವರು ಸಣ್ಣದೊಂದು ಕೂಗಾದರೂ ಎಬ್ಬಿಸಬೇಕಿತ್ತು. ಮರುಳಸಿದ್ದಯ್ಯ, ಸಿದ್ದಲಿಂಗಯ್ಯ, ಸಾ.ಶಿ.ಮರುಳಯ್ಯ, ಹಂಪಾ ನಾಗರಾಜಯ್ಯ ಇತ್ಯಾದಿ ಯಾರಿಗೂ ನಾಡಿನ ಭೂ ಸಂಪತ್ತಿನ ಕೊಳ್ಳೆಯೆಂಬುದು ಆಪತ್ತಾಗಿ ಕಾಣಿಸುತ್ತಿಲ್ಲ. ಅಷ್ಟೇ ಯಾಕೆ? ಸ್ವಾಭಿಮಾನಿ ಕನ್ನಡಿಗರ ಪಕ್ಷ ಎಂದು ಪ್ರಾದೇಶಿಕ ಪಕ್ಷವನ್ನು ಹುಟ್ಟು ಹಾಕಿರುವ ಚಂಪಾ ತರಹದವರು ಕೂಡ ಈತನಕ ಗಣಿಕೊಳ್ಳೆಯ ವಿರುದ್ಧ ಸೊಲ್ಲೆತ್ತಿಲ್ಲ. ಗಣಿ ಮಾಫಿಯಾದ ಅಪಾಯದ ವಿರುದ್ಧ ಪಾಟೀಲ ಪುಟ್ಟಪ್ಪ ಕೂಡ ಈತನಕ ಚಕಾರವೆತ್ತಿಲ್ಲ.



ಚಂಪಾ







ಹಿರಿಯರ ಪಾಡೇ ಹೀಗಿರುವಾಗ ನಾಡಿನ ಸಂಪತ್ತಿನ ರಕ್ಷಣೆಗಾಗಿ ಬೀದಿಗಿಳಿಯಬೇಕಿದ್ದ ವಿದ್ಯಾರ್ಥಿ ಸಮೂಹದ ಕಣ್ಣು ತೆರೆಸುವವರ್‍ಯಾರು?

ಮತ್ತೊಂದು ಗೋಕಾಕ್ ಚಳವಳಿಗಾಗಿ ವರನಟ ರಾಜ್‌ಕುಮಾರ್ ಮತ್ತೆ ಹುಟ್ಟಿ ಬರಬೇಕೆ? ಕನ್ನಡ ಜನತೆಗೆ ತನ್ನ ಸಾಮಾಜಿಕ ಸಂಪತ್ತನ್ನು ರಕ್ಷಿಸಿಕೊಳ್ಳುವ, ಅದಕ್ಕಾಗಿ ಹೋರಾಡುವ ಯೋಗ್ಯತೆಯೇ ಇಲ್ಲವೇ?

ಕೊಪ್ಪಳ: ಚೆಡ್ಡಿಗಳ ಆರ್ಭಟ ಬಕ್ರೀದ್‌ನಲ್ಲಿ ರಂಪಾಟ

ನವೆಂಬರ್ 28ರ ಬಕ್ರೀದ್‌ನಂದು ಗಂಗಾವತಿಯಲ್ಲಿ ಸಾಯಂಕಾಲ ಮೂರುಗಂಟೆಗಳ ಕಾಲ ರಂಪಾಟ ಎಬ್ಬಿಸಿದ ಚೆಡ್ಡಿಗಳು ಪವಿತ್ರ ಹಬ್ಬವನ್ನು ಹಾಳು ಮಾಡಲು ಯತ್ನಿಸಿ ಬೆತ್ತಲೆ ಮಂಗಗಳಾದರು. ಆದರೂ ಅವರ ಮಂಗಾಟ ಇನ್ನೂ ನಿಂತಿಲ್ಲ. ಕೊಪ್ಪಳದ ಚೆಡ್ಡಿ ಸಂಸದ ಶಿವರಾಮೇಗೌಡ, ಗಂಗಾವತಿಯ ಚೆಡ್ಡಿ ಶಾಸಕ ಪರಣ್ಣ ಎಂಬ ದುಷ್ಟರ ಚಿತಾವಣೆಯಿಂದ ದಾಂಧಲೆ ಎಬ್ಬಿಸಿದ್ದು ಹಿಂದೂ ಜಾಗರಣ ವೇದಿಕೆಯ ಗುರುರಾಜ ಭಂಡಾರಕರ್, ವಿಭಾಗೀಯ ಸಂಚಾಲಕ ಬಳ್ಳಾರಿಯ ಅನಿಲ್ ನಾಯ್ಡುಗಳ ನೇತೃತ್ವದ ಚೆಡ್ಡಿಪಡೆ.



ಬಕ್ರೀದ್ ಹಬ್ಬದ ಎರಡು ದಿನ ಮುಂಚಿತವಾಗಿ ಗಂಗಾವತಿಯ ತಹಶೀಲ್ದಾರ್ ಕಲ್ಲೂರಮಠ ಜನ ಸಾಮಾನ್ಯರ ಸಭೆ ನಡೆಸಿ, ಪ್ರತಿವರ್ಷದಂತೆ ದುರಗಮ್ಮನ ಹಳ್ಳದ ಹತ್ತಿರದ ಜಾಗದಲ್ಲಿ ಎರಡು ದಿನದ ಬಕ್ರೀದ್ ಖುರಬಾನಿಗೆ ಅವಕಾಶ ಮಾಡಿಕೊಟ್ಟರು. ಶಾಂತಿ ಕಾಪಾಡಲು ಪೊಲೀಸರಿಗೆ ಆದೇಶಿಸಲಾಯಿತು. ಬಕ್ರೀದ್ ಹಬ್ಬದ ಆಚರಣೆಗೆ ಅಡ್ಡಿ ಮಾಡುವವರ ವಿರುದ್ಧ ತೀವ್ರ ಕ್ರಮ ಕೈಗೊಳ್ಳಲು ನಿರ್ಧರಿಸಲಾಯಿತು. ಆದರೆ ಕಳೆದ ಎರಡು ವರ್ಷಗಳಿಂದ ಅಲ್ಪಸಂಖ್ಯಾತರ ಮೇಲೆ ಒಂದಿಲ್ಲೊಂದು ಗಲಾಟೆ ನಡೆಸುತ್ತಿರುವ ಕೆಲಸಗೇಡಿ ಚೆಡ್ಡಿಗಳು ಈ ಸಲವೂ ತಮ್ಮ ಕಂತ್ರಿ ಬುದ್ಧಿ ತೋರಿಸಿ, ದುರಗಮ್ಮನ ಹಳ್ಳದ ಬಳಿ ಬಕ್ರೀದ್ ಆಚರಣೆಗೆ ಅನುಮತಿ ನೀಡಬಾರದೆಂದು ಹಾರಾಡಿ ಅನಗತ್ಯವಾಗಿ ಗಂಗಾವತಿಯ ಶಾಂತಿಗೆ ಭಂಗ ತಂದುಬಿಟ್ಟರು.

ಬಕ್ರೀದ್ ಹಬ್ಬದ ದಿನ ಬೇಕೆಂತಲೇ ಸಾಯಂಕಾಲ ನಾಲ್ಕು ಗಂಟೆಗೆ ಬಸ್‌ಸ್ಟ್ಯಾಂಡ್ ಸರ್ಕಲ್ಲಿನಲ್ಲಿ ಗುರುರಾಜ ಭಂಡಾರಕರ್, ಅನಿಲ್ ನಾಯ್ಡುಗಳೆಂಬ ಮರಿಚೆಡ್ಡಿ ನಾಯಕರು ಹಲವು ಉಂಡಾಡಿಗುಂಡರನ್ನು ಕಟ್ಟಿಕೊಂಡು ಪ್ರತಿಭಟನೆ ಶುರು ಮಾಡಿದರು. ಒಟ್ಟಿನಲ್ಲಿ ಗಂಗಾವತಿಯ ಶಾಂತಿಭಂಗ ಮಾಡಿ ಬಕ್ರೀದ್ ಹಾಳು ಮಾಡುವುದು ಈ ನೀಚರ ಉದ್ದೇಶವಾಗಿತ್ತು. ನಾಲ್ಕಕ್ಕೆ ಶುರುವಾದ ಪ್ರತಿಭಟನೆ ಏಳೂವರೆಯಾದರೂ ನಿಲ್ಲುವ ಲಕ್ಷಣಗಳು ಕಾಣದಾದಾಗ ಗಂಗಾವತಿ ಪಿಎಸ್‌ಐ ಜೆ.ಎಸ್. ಉಡಗಿ ಪ್ರತಿಭಟನಾಕಾರರಿಗೆ ಬುದ್ಧಿ ಹೇಳಿ ಮನೆಗೆ ಕಳಿಸಲು ಯತ್ನಿಸಿದರು. ತಮ್ಮದೇ ಸರ್ಕಾರದ ತಮ್ಮೋರೆ ಎಂಪಿ, ಎಮ್‌ಎಲ್‌ಎಗಳು ಎಂದೆಲ್ಲ ಹಾರಾಡಿದ ಚೆಡ್ಡಿಗಳು ಪಿಎಸ್‌ಐ ಉಡಗಿಯವರಿಗೆ ಅವಾಚ್ಯವಾಗಿ ನಿಂದಿಸಿದರು. ಸಾರ್ವಜನಿಕರಿಗೆ ತೊಂದರೆಯಾಗಬಾರದೆಂದು ಉಡಗಿಯವರು ಈ ಪುಂಡರನ್ನು ಬಂಧಿಸಲೇಬೇಕಾಯ್ತು, ಗುರುರಾಜ ಭಂಡಾರಕರ ಎದೆನೋವು ಎಂದವನೇ ಆಸ್ಪತ್ರೆ ಪಾಲಾದ. ಅನಿಲ್ ನಾಯ್ಡು ಮತ್ತಿತರ ಮಂಗಗಳನ್ನು ಸ್ಟೇಷನ್ನಿಗೆ ತರಲಾಯಿತು. ಆಗ ದೆಹಲಿಗೆ ಹೋಗುವುದನ್ನು ಬಿಟ್ಟು ಓಡಿಬಂದ ಸಂಸದ ಶಿವರಾಮೇಗೌಡ ತನ್ನ ಮನೆಹಾಳ ವಾನರಪಡೆಯ ಪರ ನಿಂತ. ಕೊನೆಗೆ ರಾತ್ರಿ 8.30 ಕ್ಕೆ ಎಸ್.ಪಿ., ಡಿವೈಎಸ್‌ಪಿ ನೇತೃತ್ವದಲ್ಲಿ ಶಾಂತಿ ಸಭೆ ಮಾಡಲಾಯಿತು. ಕಾನೂನು ಪ್ರಕಾರ ಕರ್ತವ್ಯ ನಿರ್ವಹಿಸಿದ ತಹಶೀಲ್ದಾರ್ ಕಲ್ಲೂರಮಠ, ಪಿಎಸ್‌ಐ ಉಡಗಿ ಅವರನ್ನು ಸಸ್ಪೆಂಡ್ ಮಾಡಿ ಎಂದು ಸಂಸದ ಶಿವರಾಮೇಗೌಡ ಹಾರಾಡತೊಡಗಿದ. ಕೊನೆಗೂ ಡಿಸಿ, ಎಸ್ಪಿಗಳು ಶಿವರಾಮೇಗೌಡನನ್ನು ತಣ್ಣಗಾಗಿಸಿದರು.


ಆದರೆ ಮರುದಿನ ಸ್ಥಳೀಯ ಶಾಸಕ ಪರಣ್ಣ ಎಂಬ ಹುಚ್ಚನ ನೇತೃತ್ವದಲ್ಲಿ ಹಿಂಜಾವೇ ಗಂಗಾವತಿ ಬಂದ್‌ಗೆ ಕರೆಕೊಟ್ಟು ಸಿಬಿಎಸ್ ಸರ್ಕಲ್ ಮಾರ್ಗದಲ್ಲಿ ಮುಸ್ಲಿಮರ ಅಂಗಡಿಗಳ ಮೇಲೆ ಕಲ್ಲು ಎಸೆದು, ಕೆಲವರ ಮೇಲೆ ಹಲ್ಲೆಯನ್ನು ಮಾಡಿತು. ಒಂದು ಕಡೆ ಸುಮಾರು 500 ಮಹಿಳಾ ಕಾರ್ಮಿಕರು ನೆರೆ ಪರಿಹಾರಕ್ಕೆ ಪ್ರತಿಭಟನೆ ಮಾಡುತ್ತಿದ್ದಾಗ, ಇನ್ನೊಂದು ಕಡೆ ಶಾಸಕ ಪರಣ್ಣ ಗಲಭೆಕೋರರಿಗೆ ಬೆಂಬಲವಾಗಿ ನಿಂತಿದ್ದ. ಕೊಪ್ಪಳ ಜಿಲ್ಲೆಯಲ್ಲಿ ಚೆಡ್ಡಿಗಳು ಒಂದಿಲ್ಲೊಂದು ನೆಪ ತೆಗೆದು ಕೋಮುಗಲಭೆ ಎಬ್ಬಿಸುತ್ತಲೇ ಬಂದಿವೆ. ಅಯ್ಯಪ್ಪ ಸ್ವಾಮಿ, ಗಣೇಶಮೂರ್ತಿಗಳ ವಿಷಯ ಎತ್ತಿ ಕೋಮುಗಲಭೆ ಎಬ್ಬಿಸಿ ಶಾಂತಿ ಕದಡಿದ್ದರು. ಆ ಮೂಲಕ ಹಿಂದೂ, ಮುಸ್ಲಿಮರನ್ನು ಎತ್ತಿಕಟ್ಟಿ ಗಂಗಾವತಿಯಲ್ಲಿ ಗೆದ್ದುಬಿಟ್ಟರು.

ಕೊಪ್ಪಳ ಸಂಸದ ಶಿವರಾಮೇಗೌಡ, ಗಂಗಾವತಿ ಶಾಸಕ ಪರಣ್ಣರ ಈ ಪುಂಡಾಟಕ್ಕೆ ಜನರೇ ಪಾಠ ಕಲಿಸಬೇಕಾಗುತ್ತದೆಯೋ?

● ಹುರುಳಿಕೊಪ್ಪಿ ವಿನಯ್



ಕೊಳ್ಳೇಗಾಲ: ಭಂಡ ಬಡ್ಡಿಕೋರರಿಗೆ ವೈನ್ಸ್ ವಂಚಕ ರಾಮು ಟೋಪಿ!



ಕೊಳ್ಳೇಗಾಲದಲ್ಲೀಗ ವಂಚನೆಯ ಪ್ರಕರಣವೊಂದು ಜನರ ಬಾಯಿಗೆ ಕವಳವಾಗಿದೆ. ಈ ಪ್ರಕರಣದ 'ವೈಶಿಷ್ಟ್ಯ'ವೆಂದರೆ ವಂಚನೆಗೊಳಗಾದವರ ಬಗ್ಗೆಯೂ ಯಾರಿಗೂ ಅನುಕಂಪವಿಲ್ಲ!

ಕೊಳ್ಳೇಗಾಲದ ಬಡ್ಡಿ ದಂಧೆಕೋರರಿಗೆ ಸಮಾ ಟೋಪಿ ಇಟ್ಟವನು ದೀಪಾ ವೈನ್ಸ್‌ನ ವಂಚಕ ಮಾಲೀಕ ಕೆ.ಬಿ. ರಾಮು ಅಲಿಯಾಸ್ ರಾಮಣ್ಣ. ಕೊಳ್ಳೇಗಾಲದ ಶ್ರಮಿಕರ ರಕ್ತಹೀರುವ ಜಿಗಣೆಗಳಂತಿರುವ 'ಬಡ್ಡಿ' ಮಕ್ಕಳಿಂದ ಕೋಟ್ಯಂತರ ರೂಪಾಯಿ ಎತ್ತಿ, ರಾತ್ರೋರಾತ್ರಿ ವೈನ್‌ಶಾಪ್ ಮುಚ್ಚಿ ಪರಾರಿಯಾದವನು ಎಣ್ಣೆ ದೊರೆ ರಾಮಣ್ಣ.



ಚಾಮರಾಜನಗರ ಜಿಲ್ಲೆಯಲ್ಲಿ ಭಾರೀ ಹಣದ ವಹಿವಾಟು ಜರುಗುವುದು 'ಕೊಳ್ಳೇಗಾಲದಲ್ಲೇ. ಆ ಕಾರಣಕ್ಕೇ ಕೊಳ್ಳೇಗಾಲ ಪಟ್ಟಣವೊಂದರಲ್ಲೇ ಬರೋಬ್ಬರಿ ಹದಿಮೂರು ಬಾರುಗಳಿವೆ! ಎಲ್ಲ ಬಾರ್‌ಗಳೂ ಭರ್ಜರಿ ವಹಿವಾಟು ನಡೆಸುತ್ತವೆಯಾದರೂ, ಅವು ಬಡ್ಡಿ ದಂಧೆಕೋರರ ಆಶ್ರಯದಲ್ಲೇ ದುಡ್ಡಿನ ಅದ್ದಾಬದ್ದಾ ನಡೆಸುತ್ತ ಜನರಿಗೆ ಕಳಪೆ ಲೋಕಲ್ ಡ್ರಿಂಕ್ಸ್ ಕುಡಿಸುತ್ತಾ ಕೊಬ್ಬಿ ಹೋಗಿವೆ. ಈ ಕೊಬ್ಬಿದ ಬಾರ್ ಮಾಲೀಕರಿಗೆ ಅರ್ಜೆಂಟಿಗೆ ದುಡ್ಡು ಒದಗಿಸುವವರು ಬಡ್ಡಿಕುಳಗಳು.

ದೀಪಾ ವೈನ್‌ಶಾಪ್‌ನ ಒರಿಜಿನಲ್ ಮಾಲೀಕ ನಟೇಶ್ ಎಂಬಾತ. ರಾಮಣ್ಣ ಈ ವೈನ್‌ಶಾಪನ್ನು ಲೀಸ್‌ಗೆ ಪಡೆದು ಸಖತ್ ಕಾಸು ನೆಂಜಿಕೊಳ್ಳುತ್ತಾ ಬಂದಿದ್ದ. ಇದ್ದುದರಲ್ಲಿ ಒಂದಿಷ್ಟು ಒರಿಜಿನಲ್ ಡ್ರಿಂಕ್ಸ್ ಪೂರೈಸುತ್ತ ಸಾಕಷ್ಟು ಪರ್ಮನೆಂಟ್ ಗಿರಾಕಿಗಳನ್ನು ಪಡೆದಿದ್ದ ರಾಮಣ್ಣ ಕ್ರಮೇಣ ಬಡ್ಡಿದಂಧೆಯ ಕುಡುಕರನ್ನು ಆಕರ್ಷಿಸತೊಡಗಿದ. ಬಡ್ಡಿಕೋರರು ಕುಡಿದು ಹಣ ಕೊಡಲು ಬಂದರೆ 'ಇಲ್ಲ ಬಿಡಣ್ಣಾ, ಪರವಾಗಿಲ್ಲ' ಎಂದು ಉದ್ರಿ ಕೊಡ್ತಾ ಬಂದ. ಒಂದು ಲಕ್ಷಕ್ಕೆ ದಿನಕ್ಕೆ ಒಂದು ಸಾವಿರ ಬಡ್ಡಿ ಕೊಡ್ತಾ ಕೊಡ್ತಾ ಆಟ ಶುರುಮಾಡಿದ. ಬಡ್ಡಿ ಮಾಫಿಯಾದ ಜಿವಲ್ ರವಿ, ಮುಳ್ಳೂರು ಮೌರ್ಯ, ಶಾಂತಿ ಟಾಕೀಸಿನ ಪಾಪಣ್ಣ, ಶ್ರೀಧರ್, ಕಿರಣ್ ಮತ್ತು ಮೂಂಬಳ್ಳಿಯ ಕೆಲ ರೇಷ್ಮೆ ವ್ಯಾಪಾರಿಗಳು ರಾಮಣ್ಣನ ಬಲೆಗೆ ಬಿದ್ದು, ರಾಮಣ್ಣನಿಗೆ ಕೇಳಿದಷ್ಟು ಸಾಲ ನೀಡತೊಡಗಿದರು. ಹಾಗ್ನೀಗೆ ದುಡ್ಡು ಮಾಡಿರುವ ಕೊಳ್ಳೇಗಾಲದ ನಾಲ್ವರು ಪತ್ರಕರ್ತರೂ ರಾಮಣ್ಣ ನೀಡುವ ಬಡ್ಡಿರೇಟು ನೋಡಿ ಅವನಿಗೆ ನಿಂತ ಕಾಲ ಮೇಲೆ ಸಾಲ ನೀಡಿಬಿಟ್ಟರು. ಹೀಗೆ ಕೋಟಿಗಟ್ಟಲೇ ಹಣ ಜಮಾವಣೆ ಆದದ್ದೇ ತಡ ರಾಮಣ್ಣ ರಾತ್ರೋರಾತ್ರಿ ಪರಾರಿಯಾಗಿಬಿಟ್ಟ. ಹೇಗೂ ಆ ವೈನ್‌ಶಾಪ್ ಅವನದೇನೂ ಅಲ್ಲ, ಈಗ ಬಡ್ಡಿ ಮಾಫಿಯಾದವರ ಜೊತೆ ನಾಲ್ಕು ಪತ್ರಕರ್ತರೂ ಲಬೋ ಲಬೋ ಅಂತಾ ಇದ್ದಾರೆ.

ಮೂಲತಃ ಮದ್ದೂರಿನವನಾದ ರಾಮಣ್ಣ ಮೂ… ವರ್ಷಗಳ ಹಿಂದೆ ಮೈಸೂರಿನಲ್ಲೂ ಸಹ ಇದೇ ರಿ… ಲೀಸ್ ಮೇಲೆ ಬಾರ್ ನಡೆಸುತ್ತ ಅಲ್ಲಿಯೂ ಕೋಟ್ಯಂ… ರೂಪಾಯಿ ಎತ್ತುವಳಿ ಮಾಡಿ ಪರಾರಿಯಾಗಿದ್ದ. ಬ… ಹಣ ಕೊಡಿಸುತ್ತಿದ್ದ ಮಧ್ಯವರ್ತಿಗಳಿಗೆ ಒಳ್ಳೆ ಹಣ ನೀಡ… ಬಂದಿದ್ದ ರಾಮಣ್ಣನಿಗೆ ಸಹಜವಾಗಿಯೇ ಬಡ್ಡಿಗೆ … ಸಿಗುತ್ತಿತ್ತು, ಹೀಗೆ ರಾಮಣ್ಣನಿಗೆ ಮಧ್ಯವರ್ತಿಗಳಾಗಿ ಸಾಕ… ಕಮಿಷನ್ ಪಡೆದವರ ಪೈಕಿ ಮೂವರು ಪತ್ರಕರ್ತ… ಇದ್ದಾರೆ. ತಮ್ಮ ಸಂಬಂಧಿಕರಿಂದ, … ಕುಳಗಳಿಂದ ಹಣ ತಂದು ರಾಮಣ್ಣನ … ಲಿಗೆ ಹಾಕಿದ ಈ ಮೂವರು ಪತ್ರಕರ್ತ… ಸದ್ಯ ಜನರ ಕಣ್ಣುತಪ್ಪಿಸಿ ತಿರುಗಾಡುತ್ತಿ… ಸದ್ಯದಲ್ಲೇ ಇವರೂ ಓಡಿಹೋಗ… ಚಾನ್ಸುಗಳಿವೆ.

ಪರಾರಿಯಾಗುವ ಮುನ್ನ ರಾ… ಮಾಡಿರುವ ಕಿತಾಪತಿ ಒಂದಿದೆ. … ಬಡ್ಡಿ ಮಾಫಿಯಾದ ಕಿರಣ್, ಜಿಮ್ … ಮುಳ್ಳೂರು ಮೌರ್ಯ, ಲೋಕೇ… ಶ್ರೀಧರ್‌ಗಳಿಂದ ಪ್ರಾಣಭಯವಿದೆ ಎಂ… ಕೊಳ್ಳೇಗಾಲ ಡಿವೈಎಸ್‌ಪಿ ನಾರಾಯಣಸ್ವಾಮಿಯವ… ಕಂಪ್ಲೇಂಟನ್ನು ಜಡಿದುಬಿಟ್ಟಿದ್ದಾನೆ. ಈ ಕಂಪ್ಲೇಂ… ನೋಡಿದ ಬಡ್ಡಿ ಮಾಫಿಯಾ ಡಿವೈಎಸ್‌ಪಿ ಬಳಿ ಓ… ಆಗ ಸಬ್ ಇನ್ಸ್‌ಪೆಕ್ಟರ್ ಮಹೇಶ್ ಕಡೆಯಿಂದ ರಾಮ… ಮೊಬೈಲಿಗೆ ಫೋನ್ ಮಾಡಿಸಿದರೆ ರಾಮಣ್ಣ … ಹೇಳಿದ ಗೊತ್ತೇ? "ಸಾಹೇಬ್ರೆ, ನನಗೀಗ ಸ್ವಲ್ಪ ಪ್ರಾಬ್ಲ… ಇದೆ. ಒಂದು ತಿಂಗಳ ಮಟ್ಟಿಗೆ ನೀವೇ ಮೂರು … ಸಾಲ ಕೊಡಿ. ಹೊಸ ವ್ಯಾಪಾರ ಮಾಡಿ ಎಲ್ಲ … ಮುಟ್ಟಿಸ್ತೀನಿ" ಎಂದಿದ್ದಾನೆ. ಆಗ ಎಸ್‌ಐ ಮಹೇ… "ಮದುವೆಯಾಗು ಬ್ರಾಹ್ಮಣ ಅಂದ್ರೆ ನಿನ್ನೇ ಆಗಿ… ಬಾ ಅಂದಂಗಾಯಿತಲ್ಲ" ಎಂದು ಫೋನ್ ಕುಕ್ಕಿದ…

ದೋಚಿದ ಹಣದಲ್ಲಿ ರಾಮಣ್ಣ ಮೈಸೂರಲ್ಲೊ… ಮನೆ, ಮದ್ದೂರಲ್ಲಿ ಒಂದಿಷ್ಟು ಜಮೀನು, ಒ… ಸ್ಕಾರ್ಪಿಯೊ ಕಾರು ಖರೀದಿಸಿ, ಬೆಂಗಳೂರಲ್ಲಿ ಆರಾ… ತಿರುಗುತ್ತಿದ್ದಾನೆ. ಪೊಲೀಸರೀಗ ರಾಮಣ್ಣನಿಂದ … ಕಕ್ಕಿಸಬೇಕು ಮತ್ತು ಕೊಳ್ಳೇಗಾಲದ ಬಡ್ಡಿ ಮಾಫಿಯಾ… ನಿರ್ನಾಮ ಮಾಡಬೇಕು.

ಕೊಳ್ಳೇಗಾಲ ಪೊಲೀಸರಿಂದ ಈ ಎರಡ… ನಿರೀಕ್ಷಿಸುವುದು ಮೂರ್ಖತನವಷ್ಟೇ!

● ಚಿಕ್ಕಮಾ…

ಹಿಂಗಂತಲ್ಬೇ, ಖರೇಯನು?

"ಬೇ ಚಿಗವ್ವ, ಆ ಪರಿ ಯಾಕ್ ದುಡಿತೀ ಬಿಡ್ಬೆ ಇನ್ನೊಂದೆರ್ಡು ವರ್ಷಕ್ಕ ದೊಡ್ ಪ್ರಳಯ ಆಗ್ಬಿಟ್ಟು ಎಲ್ಲಾ ಸರ್ವನಾಶ ಆಗುತ್ತಂತ..... ಸಾಕು ಬಿಡ್ಬೇ, ದುಡ್ಡು ದುಡ್ಡು ಅಂತ ಯಾಕ್ ಸಾಯ್ತಿದಿ?"

"ಅಯ್ಯ ಊರ್ಗೋಳಿ, ಕೆಲ್ಸಾ ಮಾಡಂದ್ರ ಇಲ್ಲದ್ದು ಪುರಾಣಾ ಹೇಳ್ತಿಯಲ್ಲ, ಯಾವನ್ಯಾಲೇ ಅವ ಬಾಡ್ಯಾ ಪ್ರಳಯ ಆಗ್ತೈತಿ ಅಂದಿದ್ದು?"


"ಅದಾಬೆ, ಟಿವಿ ಒಂಭತ್ತರಾಗ ಬರ್ತಾನಲ್ಬೇ ಅವಾ... ಹೀಗೂ ಉಂಟೆ ಅಂತಾ ಅನಕೊಂತ ಕೈ ಹಿಂದಕ್ಕ ಎಳೆದೆಳ್ದು ಹುಚ್ಚರಂಗ ಮಾತಾಡ್ತನಲ್ಲಾ, ಅವ್ನ ಪ್ರಳಯ ಗ್ಯಾರಂಟಿ ಆಗುತ್ತ ಅಂದಾನ್ಬೇ...."

"ಥೂ ಊರ್ ಹುಚ್ಚಿ, ಅದು ಒಂದ್ ಬುದ್ಧಿಗೇಡಿ, ನೀನೊಂದ್ ಬುದ್ಧಿಗೇಡಿ. ಪ್ರಳಯ ಆಗಂಗಿದ್ರ ಈ ಟಿವಿ ಒಂಭತ್ತರೋರ್ಯಾಕೆ ಮನಿ ಕಟ್ಟಿಸಾಕ ಬಂದಾರ? ಅದಿರ್ಲಿ ಕೇಳಿಲ್ಲಿ, ಈ ಹೀಗೂ ಉಂಟೆ ಮೊನ್ನೆ ಮೂರು ತಿಂಗ್ಳ ಹಿಂದ, ನರಗುಂದದ ಒಂದು ನಾಗಪ್ಪನ ಮೂರ್ತಿ ತೋರ್ಸಿ, ಇದು ಸಾವಿರಾರು ವರ್ಷದಿಂದ ಐತಿ, ಇದ್ನ ನಂಬಿದ್ರ ಒಳ್ಳೆದಾಗುತ್ತ ಅಂತಾ ಬಡಕೊಂಡಿದ್ದ, ಈಗ ನೋಡಿದ್ರ ಆ ನಾಗಪ್ಪನ ಮೂರ್ತಿ ಬೆಳ್ಳೆಹಳ್ಳದಾಗ ಹೇಳಹೆಸರಿಲ್ಲದಂಗ ಕೊಚ್ಚಗೊಂಡು ಹೋಗ್ಯತಿ....."

ಹಿಂಗನ್ಬೆ, ನಂಗ ಗೊತ್ತ ಇರ್ಲಿಲ್ಲವಾ...

ಸುಮ್ನೆ ಬಾಯ್ಮುಚ್ಕೊಂಡು ಕೆಲ್ಸಾ ಮಾಡು ಮತ್ತsss

ಬೇ ಚಿಗವ್ವ, ಈಗ ಸಣ್ಣದೊಂದು ಬ್ರೇಕ್.... ನಾ ಕಾಲ ದುಡಿದು ಬರ್ತೀನಿ ತಡಿ....



ವಾಯ್ಸ್-ಕುಗಳು

'ಗಣಿಧಣಿಗಳನ್ನ ಕೈಬಿಡುವುದಿಲ್ಲ'
ಅಂದವ್ರೆ ಸಿ.ಎಂ. ಸಾಹೇಬ್ರು,
ಆಯ್ತಾಯ್ತು ಒಳ್ಳೇದೇ,
at least ಅವ್ರ ಕಾಲು ಹಿಡಿಯೋದಾದ್ರು ಬಿಡ…
ಮಾರಾಯ!
****
ಇಂಗಾಲದ ಸೋರಿಕೆ
ತಡೆಯಲ್ಹೋರಟ ಸಭೆಗೂ
ಮೊದ್ಲೆ ಕರಡು ಲೀಕಾಗಿ
ಹರಡಿತಂತೆ ದುರ್ವಾಸನೆ
ಅಲ್ಲಿಗೇ ಕೋಪನ್‌ಹೇಗನ್ ಗಾನ್!

-ಮು…

ವ್ಯಕ ದಂಪತಿಗಳಿಂದ ಯಲಾದ ರಾಘ'ವೇಷ'

ಮಚಂದ್ರಾಪುರ ಮಠದ ರಾಘವೇಶ ಇದುವರೆಗೂ ಕೊಂಡಿದ್ದ ಗೋವಿನ ಮುಖ ಕೊನೆಗೂ ಕಳಚಿ ಮಠವು ನಡೆಸುತ್ತಿದ್ದ ಶ್ರೀಮಾತಾ ಗುರುಕುಲದಲ್ಲಿ " ಜಗದೀಶ್ ಶರ್ಮಾ ನಡೆಸುತ್ತಿದ್ದ ಕಾಮಕಾಂಡ ಮ್ಮ 'ಲಂಕೇಶ್'ಅನ್ನೂ ಒಳಗೊಂಡಂತೆ ಕೆಲವಾರು ಮೂರು ತಿಂಗಳ ಹಿಂದೆಯೇ ಬಯಲು ದ್ದೂ ಇದನ್ನು ಗೋಮುಖದ ಸ್ವಾಮಿ ಅಲ್ಲಗಳೆದು ಜಗದೀಶನ ರಕ್ಷಣೆಗೆ ಟೊಂಕಕಟ್ಟಿ ನಿಂತಿದ್ದನ್ನು ಮಠದ ಭಕ್ತರೇ ಹೇಸಿಗೆ ಪಟ್ಟುಕೊಂಡಿದ್ದರು. ಸಾಗರದ ವೀಣಾ ಹೆಗಡೆ ಹಾಗೂ ವಾಸುದೇವ ಎಂಬ ದಿಟ್ಟ ಹವ್ಯಕ ದಂಪತಿಗಳು ಮಠದಲ್ಲಿ ತ್ತಿದ್ದ ಕರ್ಮ(ಕಾಮ)ಕಾಂಡವನ್ನು ಎಳೆಎಳೆಯಾಗಿ ದ್ದಾರೆ. ಈ ಮೂಲಕ ಜಗದೀಶ್ ಶರ್ಮಾ ಎಂಬ ಹರುಕುತನ, ನೀಚತನ ಹಾಗೂ ಇವುಗಳಿಗೆಲ್ಲಾ ನೀಡುತ್ತಿರುವ ರಾಘವೇಶ್ವರ ಸ್ವಾಮಿಯ ಲೋಭ,



ಮದ, ಸ್ವಹಿತಾಸಕ್ತಿ, ಸ್ವಾರ್ಥ, ದಾರ್ಷ್ಟ್ಯ, ದಾದಾಗಿರಿ ಮತ್ತಷ್ಟು ಬಟಾಬಯಲಾಗಿವೆ.

ಯಲೆತ್ತಿಸಿದ್ದ ಹವ್ಯಕ ಬಾಲೆ

ಣಾಹೆಗಡೆ ಹಾಗೂ ವಾಸುದೇವಹೆಗಡೆ ದಂಪತಿಗಳ 2002ರಲ್ಲಿ ಸಾಗರದ ಶಾಲೆಯೊಂದರಿಂದ ಮಠದ ಗುರುಕುಲಕ್ಕೆ ಸೇರಿಸಲಾಗಿತ್ತು, ಪ್ರಾಚೀನ ತಕ್ಷಶಿಲೆಯನ್ನೇ ಇಲ್ಲಿ ತಂದಿಳಿಸಿಬಿಡುವ ಸ್ವಾಮೀ ಮಾತುಗಳಿಗೆ ಹಾಗೂ ಮಠದ ಮೇಲಿನ ಅಭಿ ವಾಗಿ ಅವರು ತಮ್ಮ ಮಗಳನ್ನು ಇಲ್ಲಿ ಬಿಟ್ಟಿದ್ದರು. ವರ್ಷಗಳಾದ ಮೇಲೆ ಆಕೆ ದೊಡ್ಡವಳಾದದ್ದೇ ಮುಕ ಜಗದೀಶ್ ಶರ್ಮಾ ಆಕೆಯನ್ನು ತನ್ನ ಳಸಿಕೊಳ್ಳಲು ಪ್ರಯತ್ನಿಸತೊಡಗಿದ. "ಜಗದೀಶ್ ಲೈಂಗಿಕ ಕಿರುಕುಳದಿಂದ ವಿಪರೀತ ಕುಗ್ಗಿ ನನ್ನ ಮಗಳು ನಂತರದಲ್ಲಿ ಪದೇ ಪದೇ ಬೇವೆಂದು ಮನೆಗೆ ಬರಲಾರಂಭಿಸಿದ್ದಳು. ಗುರು ಹೋಗಲು ಸುತಾರಾಂ ಒಪ್ಪುತ್ತಿರಲಿಲ್ಲ. ಆದರೂ ತ್ತಾಯ ಮಾಡಿ ಅವಳನ್ನು ಮಠಕ್ಕೆ ಬಿಟ್ಟು ರಡು ದಿನಗಳಲ್ಲಿ ನನ್ನ ಮಗಳು ನಾಲ್ಕೈದು ಬಳೆ ನ್ನು ಪುಡಿ ಮಾಡಿ ನುಂಗಿ ಸಾಯಲು ಪ್ರಯತ್ನಿಸಿ ತರ ಚಿಕಿತ್ಸೆ ಕೊಡಿಸಿ ನಿಧಾನಕ್ಕೆ ಬಾಯಿ ಬಿಡಿಸಿ ಗೆ ಆಘಾತವೇ ಆಗಿತ್ತು, ಜಗದೀಶ ಶರ್ಮಾ ಪ್ರತಿದಿನ ರೂಮಿಗೆ ಕರೆಯುತ್ತಿದ್ದ. ಅಲ್ಲಿ ತನ್ನ ನ್ನು ತೋರಿಸುತ್ತಿದ್ದ. ವ್ಯಾಯಾಮ ಮಾಡುವಾಗ ದೆ ನಿಂತು ಲೈಂಗಿಕವಾಗಿ ಹಿಂಸಿಸುತ್ತಿದ್ದ ಎಂಬ ನ್ನು ನನ್ನ ಮಗಳು ನನ್ನ ಬಳಿ ಹೇಳಿಕೊಂಡಿದ್ದಳು. ವೇ ಮಠಕ್ಕೆ ಫೋನ್ ಮಾಡಿ ಅಲ್ಲಿ ಕೆಲಸ ಮಾಡುತ್ತಿದ್ದ ಶಿವಾನಂದ ಸುಸರವಳ್ಳಿಯವರ ಬಳಿ ಹೇಳಿದ್ದೆ. ಅವರು ಈ ವಿಚಾರವನ್ನು ಸಭೆಯಲ್ಲಿ ಚರ್ಚಿಸುವ ಭರವಸೆ ನೀಡಿದ್ದರು. ಅದೇನಾಯ್ತೋ ಗೊತ್ತಿಲ್ಲ ಕೆಲವೇ ದಿನಗಳಲ್ಲಿ ಶಿವಾನಂದ ಸುಸರವಳ್ಳಿಯವರನ್ನು ಕೆಲಸದಿಂದಲೇ ತೆಗೆದು ಹಾಕಲಾಯಿತು. ನಂತರ ನನ್ನ ಮಗಳನ್ನು ಬಿಡಿಸಿ ಸಾಕಷ್ಟು ತೊಂದರೆಗಳನ್ನು ಅನುಭವಿಸಿ ಸಾಗರದ ಖಾಸಗಿ ಶಾಲೆಯೊಂದಕ್ಕೆ ಎಂಟನೇ ತರಗತಿಗೆ ಸೇರಿಸಿದ್ದೇವೆ" ಹೀಗೆಂದು ವೀಣಾ ಹೆಗಡೆ ನೊಂದು ನುಡಿಯುತ್ತಿದ್ದರೆ ಎಂತಹವರಿಗೂ ಮಠದ ಕರ್ಮಕಾಂಡಗಳ ಬಗ್ಗೆ ರೋಷ ಬರದಿರದು.


ಇದೇ ಬಗೆಯಲ್ಲಿ ಜಗದೀಶ್ ಶರ್ಮಾನಿಂದ ಕಿರುಕುಳಕ್ಕೊಳಗಾಗಿ ಸುಮಾರು 30 ಬಾಲೆಯರು ಮಠವನ್ನು ತೊರೆದಿದ್ದರೂ ಮರ್ಯಾದೆಗೆ ಅಂಜಿಕೊಂಡು ತಮ್ಮ ನೋವನ್ನು ಹಾಗೆಯೇ ನುಂಗಿಕೊಂಡಿದ್ದರು. ಇನ್ನು ಮೇಲಾದರೂ ಅವರೆಲ್ಲಾ ಒಟ್ಟಾಗಿ ನ್ಯಾಯ ಪಡೆಯಲು ಇದೀಗ ವೀಣಾ ಹೆಗಡೆ ದಾರಿ ತೋರಿಸಿದ್ದಾರೆ.

ಮಠದಲ್ಲಿ ನಡೆದಿದ್ದು ಗೂಂಡಾಗಿರಿ

ವೀಣಾ ದಂಪತಿಗಳು ತಮ್ಮ ಮಗಳಿಗಾದ ಅನ್ಯಾಯದ ಬಗ್ಗೆ ದೂರು ಹೇಳಲು ಮೂರ್ನಾಲ್ಕು ಬಾರಿ ಮಠಕ್ಕೆ ಹೋಗಿದ್ದರೂ ಸ್ವಾಮಿ ಸುತ್ತ ವಕ್ಕರಿಸಿರುವ ದುಷ್ಟ ಕೂಟಗಳು ಸ್ವಾಮಿಯನ್ನು ಭೇಟಿ ಮಾಡಲು ಅವಕಾಶವೇ ಕೊಡಲಿಲ್ಲ. ಮಠದಲ್ಲಿರುವ ರಾಜಶ್ರೀ ಸದಾಶಿವ ಎಂಬುವವನಂತೂ ಈ ನೊಂದ ದಂಪತಿಗಳಿಗೆ ಧಮಕಿಯನ್ನೇ ಹಾಕಿ ಈ ವಿಷಯವನ್ನು ಯಾರ ಎದುರಿಗೂ ಪ್ರಸ್ತಾಪ ಮಾಡದಿರಲು ತಾಕೀತು ಮಾಡಿದ್ದ. ಕಳೆದ ಸೆಪ್ಟೆಂಬರ್ 11 ರಂದು ನೇರವಾಗಿ ರಾಘವೇಶ್ವರನನ್ನೇ ವೀಣಾ ಹೆಗಡೆ ಭೇಟಿ ಮಾಡಿ ತಮ್ಮ ನೋವನ್ನು ತೋಡಿಕೊಂಡರೆ ಆ ಸ್ವಾಮಿ ನ್ಯಾಯ ಕೊಡಿಸುವುದಿರಲಿ, ಇವರ ಮಾತಿಗೆ ಕ್ಯಾರೇ ಎಂದಿಲ್ಲ. ಬದಲಾಗಿ ವೀಣಾ ಹೆಗಡೆಯವರ ವಿರುದ್ಧವೇ ಗೂಬೆ ಕೂರಿಸುವ ಯತ್ನ ನಡೆಸಿದ. ಕೊನೆಗೆ ನವೆಂಬರ್ 29 ರಂದು ಸಾಗರದ ಬ್ರಾಸಂನಲ್ಲಿ ನಡೆದ ಸಭೆಯಲ್ಲಿ ನೂರಾರು ಜನರೆದುರು ನ್ಯಾಯ ಕೇಳಿದಾಗ ರಾಘವೇಶ "ನಿನ್ನ ಮಗಳ ಮಾನವನ್ನು ನೀನೇ ಹರಾಜು ಹಾಕಿಕೊಂಡಿದ್ದೀಯ" ಎಂದು ಅಗೌರವದಿಂದ ಮಾತಾಡಿದ. ಆಘಾತಕ್ಕೆ ಒಳಗಾದ ವಿದ್ಯಾರ್ಥಿನಿ ಮತ್ತು ಆಕೆಯ ಪೋಷಕರಿಗೆ ಸಾಂತ್ವನ ಹೇಳಿ, ನ್ಯಾಯ ದೊರಕಿಸಿ ಕೊಡಬೇಕಾದ ಸ್ವಾಮಿ ನೂರಾರು ಜನರೆದುರೇ ಇವರನ್ನು ಅವಹೇಳನಕಾರಿ ಮಾತಿನಿಂದ ಅವಮಾನಿಸಿದ. ವಿವೇಕದಿಂದ ಈ ಪ್ರಕರಣವನ್ನು ನಿರ್ವಹಿಸಿ ಬಡ ಕುಟುಂಬಕ್ಕೆ ನ್ಯಾಯ ದೊರಕಿಸಿ ಕೊಡಬೇಕಾಗಿದ್ದ ಈ ಗೋಸ್ವಾಮಿ "ನಿನ್ನ ಮಗಳಿಗೆ ಲೈಂಗಿಕ ಕಿರುಕುಳ ನೀಡಲಾಗಿದೆ ಎನ್ನುವುದಕ್ಕೆ ಸಾಕ್ಷಿ ಏನಿದೆ?" ಎಂದು ಕೇಳುವುದರ ಮೂಲಕ ತಾನೊಬ್ಬ ಸ್ವಾಮಿಯಲ್ಲ ಬದಲಾಗಿ ಶುದ್ಧ ಅವಿವೇಕಿ ಎನ್ನುವುದನ್ನು ಮತ್ತೆ ಸಾಬೀತುಪಡಿಸಿದ.

ರಾಮಚಂದ್ರಾಪುರ ಮಠ, ರಾಘವೇಶ್ವರ ಸ್ವಾಮಿ ಮತ್ತಾತನ ಸುತ್ತ ಇರುವ ಜನ ಅದ್ಯಾವ ಮಟ್ಟಕ್ಕೆ ಇಳಿದಿದ್ದಾರೆಂಬುದು ಪ್ರಾಯಶಃ ಹವ್ಯಕ ಸಮುದಾಯಕ್ಕೆ ಸಂಪೂರ್ಣವಾಗಿ ಗೊತ್ತಿಲ್ಲ. ನವೆಂಬರ್ 29ರಂದು ನಡೆದ ಸಭೆಯಲ್ಲಿ ವೀಣಾ ಹೆಗಡೆಯ ಕುಟುಂಬದೊಂದಿಗೆ ಅವರು ವರ್ತಿಸಿದ ರೀತಿಯೇ ಇದಕ್ಕೆ ಸಾಕ್ಷಿ. ಅಂದಿನ ಸಭೆಯಲ್ಲಿದ್ದ ಕೆಲವು ಮುಖಂಡರು ತಮ್ಮ ಬ್ರಾಹ್ಮಣಿಕೆಯ ಬುದ್ಧಿವಂತಿಕೆಯನ್ನು ಪ್ರದರ್ಶಿಸಿ "ಬಾಲಕಿಯ ಮೇಲೆ ನಡೆದದ್ದು ಅತ್ಯಾಚಾರವೇನೂ ಅಲ್ಲವಲ್ಲ, ಕೇವಲ ಲೈಂಗಿಕ ಕಿರುಕುಳ ಅಷ್ಟೇ ತಾನೆ?" ಎಂದು ವೀಣಾ ದಂಪತಿಗಳನ್ನೇ ದಬಾಯಿಸಿದರು! ಅಂದರೆ, ರಾಮಚಂದ್ರಾಪುರ ಮಠದಲ್ಲಿ, ಗುರುಕುಲದಲ್ಲಿ ಅಪ್ರಾಪ್ತ ಬಾಲಕಿಯರನ್ನು ರೇಪ್ ಮಾಡಿದರಷ್ಟೇ ತಲೆಕೆಡಿಸಿಕೊಳ್ಳಬೇಕು, ಅವರನ್ನು ಲೈಂಗಿಕವಾಗಿ ಹಿಂಸಿಸಿ, ಅವರಿಗೆ ಮಾನಸಿಕ ಮತ್ತು ದೈಹಿಕ ಕಿರುಕುಳ ಕೊಟ್ಟರೆ ಅದು ಸಾಮಾನ್ಯ ವಿಷಯ! ಇದು ರಾಮಚಂದ್ರಾಪುರ ಮಠದ ನಿಲುವು!

ಮೂರು ಹೊತ್ತು ಸ್ವಾಮಿಗಳ ಹಿಂದೆಮುಂದೆ ಓಡಾಡುವ, ಮಠದ ಗುರು ಸೇವಕ ಯು.ಎಚ್. ರಾಮಪ್ಪ ಎಂಬ ಚೆಡ್ಡಿಯಂತೂ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಈ ದಂಪತಿಗಳ ಮೇಲೆ ಕೆಂಗಣ್ಣು ಬೀರಿ ಹೆದರಿಸಿದ್ದಾನೆ. ಈ ರಾಮಪ್ಪ ಎಂಬ ಹಲಾಲುಕೋರ ಮಠದಲ್ಲಿ ನಡೆಯುತ್ತಿರುವ ಹಲ್ಕಟ್ ವಿಷಯಗಳ ಬಗ್ಗೆ ಪತ್ರಿಕೆಗಳಲ್ಲಿ ಪ್ರತಿಕ್ರಿಯಿಸಿದ ಓದುಗರೊಬ್ಬರಿಗೆ "ನಿನ್ನನ್ನು ನೋಡ್ಕೋಳ್ತೀನೆ" ಎಂದು ಪಕ್ಕಾ ಬೀದಿ ರೌಡಿಯಂತೆ ಧಮಕಿ ಹಾಕಿದ್ದ.



ಕಳೆದ ಎರಡು ವರ್ಷಗಳಲ್ಲಿ ರಾಘವೇಶ್ವರ ಸ್ವಾಮಿ ಮಾಡಿದ ದಂಧೆಗಳನ್ನು, ತೋರಿದ ವರ್ತನೆಗಳನ್ನು, ಹೂಡಿದ ಷಡ್ಯಂತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಈತ ಹವ್ಯಕ ಮಠವೊಂದರ ಸ್ವಾಮಿಯೋ ಅಥವಾ ಪುಂಡುಪೋಕರಿಗಳ ನಾಯಕನೋ ಅಥವಾ ಥರ್ಡ್ ಕ್ಲಾಸ್ ರಾಜಕಾರಣಿಯೋ ಎಂಬ ಅನುಮಾನ ಬರುತ್ತದೆ. ಈ ಮಾತನ್ನು ಹವ್ಯಕ ಬ್ರಾಹ್ಮಣರನ್ನು ಹೊರತುಪಡಿಸಿ ಬೇರೆ ಯಾರಾದರೂ ಹೇಳಿದರೆ ಅವರಿಗೆ 'ಹವ್ಯಕ ವಿರೋಧಿಗಳು', 'ಹವ್ಯಕ ಮಠದ ಏಳಿಗೆಯನ್ನು ಸಹಿಸದೆ ಹೊಟ್ಟೆ ಕಿಚ್ಚು ಪಡುತ್ತಿರುವವರು', 'ರಾಘವೇಶ್ವರ ಸ್ವಾಮಿಗಳಿಗೆ ಆಗದವರು' ಎಂದೆಲ್ಲಾ ಹಣೆಪಟ್ಟಿ ಕಟ್ಟಿಬಿಡುತ್ತಿದ್ದರೋ ಏನೋ? ಆದರೆ ಯಾವ ಹವ್ಯಕ ಬ್ರಾಹ್ಮಣ ಸಮುದಾಯದ ನಾಯಕರು ರಾಘವೇಶ್ವರನನ್ನು ರಾಮಚಂದ್ರಾಪುರ ಮಠದ ಪೀಠಾಧ್ಯಕ್ಷನನ್ನಾಗಿ ಮಾಡಿ ಕೂರಿಸಿದ್ದರೋ ಅದೇ ನಾಯಕರಿಗೆ ಈಗ ತಾವು ಮಾಡಿದ ಘನಘೋರ ತಪ್ಪಿನ ಅರಿವಾಗಿದೆ. ಅದರಲ್ಲೂ ಕಳೆದೆರಡು ವರ್ಷಗಳಿಂದ ರಾಘವೇಶ್ವರ ಮಾಡುತ್ತಿರುವ ಥರ್ಡ್ ಕ್ಲಾಸ್ ರಾಜಕೀಯದಿಂದ ಅವರೆಲ್ಲ ಬೇಸತ್ತು ಹೋಗಿದ್ದಾರೆ. ಈಗ್ಗೆ ಆರು ತಿಂಗಳ ಹಿಂದೆಯೇ ಹವ್ಯಕ ಸಮುದಾಯದ ನಾಯಕರಲ್ಲಿ ರಾಘವೇಶ್ವರನ ವಿರುದ್ಧ ಅಸಮಾಧಾನ ದಟ್ಟವಾಗಿ ಮೂಡಿದ್ದರೂ ಅದನ್ನು ಅವರ್‍ಯಾರೂ ಬಹಿರಂಗಪಡಿಸಿರಲಿಲ್ಲ. ಯಾವಾಗ ತನ್ನ ವಿರುದ್ಧ ಮಾತನಾಡುವ ಹವ್ಯಕ ನಾಯಕರನ್ನು ದೈಹಿಕವಾಗಿ ಸದೆಬಡಿಯುವುದಕ್ಕಾಗಿ ಮಠದೊಳಗೇ ಗೂಂಡಾಪಡೆ ಕಟ್ಟುವುದಕ್ಕೆ ಪ್ರಾರಂಭಿಸಿದನೋ, ಯಾವಾಗ ಪರಂಪರಾನುಗತವಾಗಿ ಹವ್ಯಕ ಸಮುದಾಯ ಮತ್ತು ರಾಮಚಂದ್ರಾಪುರ ಮಾಡಿಕೊಂಡು ಬಂದಿದ್ದ ರೂಢಿ-ಸಂಪ್ರದಾಯಗಳನ್ನೆಲ್ಲಾ ಗಾಳಿಗೆ ತೂರತೊಡಗಿದನೋ, ಯಾವಾಗ ಮಲ್ಲಿಕಾ ಶರಾವತ್‌ಳಂಥ ಸೆಕ್ಸ್ ಬಾಂಬ್ ಹಿಂದೆ ತಿರುಗಲಾರಂಭಿಸಿದನೋ, ಎಲ್ಲಕ್ಕಿಂತ ಮುಖ್ಯವಾಗಿ ಯಾವಾಗ ತಮ್ಮದೇ ಹವ್ಯಕ ಬಾಲೆಯರ ಶೀಲಕ್ಕೇ ಕೈ ಹಾಕುವಂಥ ಹೀನ ಕೃತ್ಯಕ್ಕಿಳಿದ ತನ್ನ ಬಾಮೈದ ಜಗದೀಶ್ ಶರ್ಮಾನ ಬೆನ್ನಿಗೆ ನಿಂತನೋ ಆಗ ಸುಸಂಸ್ಕೃತ ಹವ್ಯಕ ನಾಯಕರಿಗೆ ರಾಘವೇಶನ ವಿರುದ್ಧ ಬಂಡಾಯವೇಳದೇ ಬೇರೆ ದಾರಿಯೂ ಉಳಿಯಲಿಲ್ಲ. ಅದರ ಪರಿಣಾಮವಾಗಿಯೇ ಈಗ್ಗೆ ಒಂದೆರಡು ತಿಂಗಳುಗಳ ಹಿಂದೆ 'ಅಖಿಲ ಭಾರತ ಹವ್ಯಕ ಹಿತರಕ್ಷಣಾ ಸಮಿತಿ' ಎಂಬ ಹೊಸ ಬ್ಯಾನರ್‌ನಡಿಯಲ್ಲಿ ಹವ್ಯಕರು ಸಂಘಟಿತಗೊಂಡು ಮೊದಲ ಬಾರಿ ಸೆಡ್ಡು ಹೊಡೆದಿದ್ದರು. ಪ್ರಾಯಶಃ ಅದು ತನ್ನದೇ ಹವ್ಯಕ ಬ್ರಾಹ್ಮಣ ಸಮುದಾಯದಿಂದ ರಾಘವೇಶ ಎದುರಿಸಿದ ಮೊದಲ ದಂಗೆ. ಈಗ ಅದರ ಮುಂದುವರೆದ ಭಾಗವಾಗಿ ವೀಣಾ ದಂಪತಿಗಳು ಬಹಿರಂಗ ಪತ್ರಿಕಾ ಗೋಷ್ಠಿಯಲ್ಲಿ ರಾಮಚಂದ್ರಾಪುರ ಗುರುಕುಲದಲ್ಲಿ ತಮ್ಮ ಮಗಳ ಮೇಲಾದ ಲೈಂಗಿಕ ಕಿರುಕುಳದ ಬಗ್ಗೆ ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ.

ರಾಘವೇಶನೇ ಮಠತೊರೆದು ಹೋಗುತ್ತಾನೋ ಅಥವಾ ಅವನನ್ನು ಹವ್ಯಕರೇ ಓಡಿಸುತ್ತಾರೋ ಎಂಬುದಷ್ಟೇ ನಿರ್ಧಾರವಾಗಬೇಕಿರುವ ವಿಚಾರ ಅನ್ನಿಸುತ್ತೆ.

● ಹರ್ಷಕುಮಾರ್

ಚೋರ ಗುರುವಿಗೆ ಕ್ಯಾರೆ ಎನ್ನುವವರಿಲ್ಲ!

ತನ್ನ ಹಾಗೂ ತನ್ನ ಪಟಮಾಗಧರ ಹಿತವನ್ನೇ ಇಡೀ ಹವ್ಯಕ ಸಮುದಾಯದ ಹಿತವೆಂದು [illegible] ಗೋಮುಖಿ ರಾಘವೇಶ್ವರನ ಕುತ್ಸಿತ ಬುದ್ಧಿಗಳು ಒಂದೊಂದಾಗಿ ಜಗಜ್ಜಾಹೀರಾಗುತ್ತಲೂ ಈ ಸ್ವಾಮಿ ಅಂದು ಸುಟ್ಟ ಬೆಕ್ಕಿನಂತಾಗಿದ್ದಾನೆ. ಹೋದಲ್ಲೆಲ್ಲಾ ತನ್ನ ಬಂಡವಾಳವನ್ನು ನಾಗರಿಕರೆದುರು ಬಯಲು ಮಾಡುತ್ತಿರುವ ಪತ್ರಿಕೆಗಳ ವಿರುದ್ಧ ಹರಿಹಾಯತೊಡಗಿದ್ದಾನೆ. ಈ ಪತ್ರಿಕೆಗಳನ್ನು ಒಂದು ಕೈ ನೋಡಿಕೊಳ್ಳುವಂತೆ ಮಠದ ಕಾರ್ಯಕರ್ತರೆದುರು ವದರತೊಡಗಿದ್ದಾನೆ.

ಇತ್ತೀಚೆಗೆ ಮಠದ ಸೀಮಾ ಪರಿಷತ್ತುಗಳನ್ನು ವಿಸರ್ಜಿಸಿದ್ದ ಸ್ವಾಮಿ, ಬೇಳೂರು, ಇಕ್ಕೇರಿ, ಪಡಮಾಲ, ಇಡುವಾಣಿ, ಸಿರವಂತೆ – ಹೀಗೆ ಅವುಗಳು ಈ ಹಿಂದೆ ಅಸ್ತಿತ್ವ ಹೊಂದಿದ್ದ ಕಡೆಗಳಲ್ಲಿ ಪುನರ್ ಸಂಘಟನೆಗಾಗಿ ಸಂಚಾರ ನಡೆಸಿದ್ದಾನೆ. ಆದರೆ ಈಗ ಅವನು ಹೋದ ಕಡೆಗಳಲ್ಲೆಲ್ಲಾ ಜನರ ಪ್ರತಿಕ್ರಿಯೆ ಮಾತ್ರ ಮೊದಲಿನಂತಿಲ್ಲ. ಬಹಳಷ್ಟು ಜನ ಈ ಚೋರ ಗುರುವನ್ನು ಕ್ಯಾರೇ ಎನ್ನದಿರುವುದು ಸ್ವಾಮಿಗೆ ಇರುಸು ಮುರುಸುಂಟು ಮಾಡುತ್ತಿದೆ.

ರಾಮಚಂದ್ರಾಪುರ ಮಠವು ಹವ್ಯಕರನ್ನು ಮೂರು ರೀತಿ ವಿಂಗಡಿಸುತ್ತಿದೆ. ಮಠದ ಸೇವೆಗೆ ಟೊಂಕ ಕಟ್ಟಿ ನಿಂತವರು ಸೇವಕರು; ವರ್ಷಂಪ್ರತಿ ದೀಪಗಾಣಿಕೆ ಕೊಟ್ಟು ಸುಮ್ಮನುಳಿಯುವವರು ಸಾಮಾನ್ಯ ವರ್ಗ; ಮಠದೊಂದಿಗೆ ಯಾವ ಸಂಬಂಧವನ್ನೂ ಬಯಸದವರು ಅನಾಮಿಕರು. ಇವರಲ್ಲಿ ಈ ಮೊದಲು ಈ ಅನಾಮಿಕರ ಸಂಖ್ಯೆ ಬಹಳ ಕಡಿಮೆ ಇತ್ತು. ಎಲ್ಲರೂ ಒಂದಲ್ಲ ಒಂದು ರೀತಿ ಮಠದೊಂದಿಗೆ ಸಂಬಂಧ ಬಯಸುತ್ತಿದ್ದರು. ಆದರೆ ಮಠದಲ್ಲಿ ಜರುಗುತ್ತಿರುವ ಇತ್ತೀಚಿನ ಬೆಳವಣಿಗೆಗಳಿಂದ ಈ ಅನಾಮಿಕರ ಸಂಖ್ಯೆ ಗಣನೀಯವಾಗಿ ಏರಿದೆ ಎಂದರೆ ಇಡೀ ಸಮುದಾಯಕ್ಕೆ ರಾಘವೇಶ್ವರ ನೀಡಿರುವ ಕೊಡುಗೆ ಎಂತಹದ್ದೆಂಬುದು ತಿಳಿಯುತ್ತದೆ. ●

...ಟ್ಟಂಗಿ ಪತ್ರಿಕೆಗಳು ಬಯಲು!


[illegible] ಸ್ವಾಮಿಗಳ ಅನಾಚಾರವನ್ನು ಹುಡುಕಿ ಬಯಲು ಮಾಡಬೇಕಾದ [illegible] ಪತ್ರಿಕೆಗಳು [illegible] ಕೆಲಸದಲ್ಲಿ [illegible] ಎನ್ನುವುದು ಮೊನ್ನೆ ನಡೆದ ಪ್ರಕರಣದಿಂದ ಸಾಬೀತಾಗಿದೆ. [illegible] ಮಗಳ [illegible] ಠದಲ್ಲಿ ಆಗಿರುವ ದೌರ್ಜನ್ಯವನ್ನು ಪತ್ರಿಕಾಗೋಷ್ಠಿ ಕರೆದು [illegible] ವೀಣಾ ಹೆಗಡೆಯವರ ಮಾತುಗಳ ಒಂದೇ ಒಂದು [illegible] ಪತ್ರಿಕೆಗಳಲ್ಲಿ ಅಚ್ಚಾಗಿಯೂ ಕಾಣಿಸಿಕೊಳ್ಳಲಿಲ್ಲ. [illegible] ಬಯಲಾಗುತ್ತದೆ [illegible] ●

'ಪ್ರಜಾವಾಣಿ'ಯ ಶಾಂತಕುಮಾರ್‌ರವರೇ....

ಹೆಗಡೆ ದಂಪತಿಗಳು ಬಹಿರಂಗ ಪತ್ರಿಕಾಗೋಷ್ಠಿಯನ್ನು ಕರೆದು ರಾಮಚಂದ್ರಾಪುರ ಮಠದಲ್ಲಿ ತಮ್ಮ ಮಗಳ ಮೇಲಾದ ಲೈಂಗಿಕ ಕಿರುಕುಳವನ್ನು ಮನಕರಗುವಂತೆ ವರ್ಣಿಸಿದ್ದರೂ ಆ ವರದಿ ಯಾವ ದಿನಪತ್ರಿಕೆಗಳಲ್ಲೂ ಬರಲಿಲ್ಲ. ಹಿಂದೂತ್ವದ ವಿಷವನ್ನೇ ಉಸಿರಾಡುವ ವಿಜಯ ಕರ್ನಾಟಕದಲ್ಲಿ, ಜಾಹಿರಾತಿಗಾಗಿ ಹಪಹಪಿಸುತ್ತಾ ಪತ್ರಿಕಾಧರ್ಮಕ್ಕೆ ಗೋರಿ ಕಟ್ಟಿರುವ ಕನ್ನಡ ಪ್ರಭದಲ್ಲಿ ಯಾಕೆ ಪ್ರಕಟಗೊಳ್ಳಲಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳುವುದು ಕಷ್ಟವಲ್ಲ. ಆದರೆ, ಸಾಮಾನ್ಯವಾಗಿ ಇಂತಹ ಭಟ್ಟಂಗಿತನಕ್ಕೆ ಮಣೆ ಹಾಕದ, ಇದ್ದುದರಲ್ಲಿ ವಾಸ್ತವಾಂಶವನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸುತ್ತಾ, ಬರವಣಿಗೆಯಲ್ಲಿ ಯಾವುದೇ ಪೂರ್ವಾಗ್ರಹ ತೋರದೆ ನೈಜ ಪತ್ರಿಕಾ ಧರ್ಮವನ್ನು ಪ್ರತಿಪಾದಿಸುತ್ತಾ ಬಂದಿರುವ 'ಪ್ರಜಾವಾಣಿ'ಯಲ್ಲೂ ಯಾಕೆ ಬರಲಿಲ್ಲ ಎಂಬುದು ಬಹಳಷ್ಟು ಬೇಸರ ತರಿಸುತ್ತದೆ.

ಅದನ್ನು ಸ್ವಲ್ಪ ಕೆದಕುತ್ತಾ ಹೋದರೆ ಆ ಪತ್ರಿಕೆಯ ಹೆಡ್ ಆಫೀಸ್‌ನಲ್ಲಿ ಪ್ರಮುಖ ಸ್ಥಾನ ಹೊಂದಿರುವ ಒಬ್ಬ ಅಸ್ವಾಮಿಯ [illegible] ಕಣ್ಣಿಗೆ ಕಾಣುತ್ತದೆ. ಪ್ರಜಾವಾಣಿಯ [illegible] ಈ ಬಾರಿ ಹೆಗಡೆ ದಂಪತಿಗಳ ಪತ್ರಿಕಾಗೋಷ್ಠಿಯ ವರದಿ ಪತ್ರಿಕೆಯಲ್ಲಿ ಪ್ರಕಟಗೊಳ್ಳದಿರುವ [illegible] ಮಾತು ಕೇಳಿಬರುತ್ತಿದೆ. [illegible]

ಮೆಹಂದಿಯ ಹೂಗಳು ಅರಳಲಿಲ್ಲ...



ಯಾವುದೋ ತಾಜಮಹಲಿನ ಹೆಸರಿನ ಹೋಟೆಲು, ಹೋಟೆಲಿನ ತುಂಬಾ ಹೊಗೆ ಏಳುತ್ತಿತ್ತು, ಹೊರಗಿನಿಂದ ಗುಂಡಿನ ಸುರಿಮಳೆ, ಪ್ರತಿಯಾಗಿ ಹೋಟೆಲಿನಿಂದಲೂ ಗುಂಡಿನ ಸುರಿಮಳೆ.

ಕತೆ

● ಬಿ. ಶ್ರೀನಿವಾಸ್

ಶೇಕ್ಸಾಬು ಎದುರಿಗಿದ್ದ ಪಾರಿವಾಳಗಳ ಗೂಡನ್ನೇ ನೋಡುತ್ತಿದ್ದನಾದರೂ ಆತ ಬರುವ ರಂಜಾನಿಗೆ ಓಣಿ ತುಂಬಾ ಸುರುಕುಂಬಾ ಹಂಚುವುದು, ಮಕ್ಕಳಿಗೆಲ್ಲ ಚಿಲ್ಲರೆ ಕಾಸು ದಾನ ಮಾಡುವುದು, ಹೊಸ ಹೊಸ ದಿರಿಸು ಧರಿಸುವುದಾದರೂ ಹೇಗೆಂಬ ಚಿಂತೆಯಲ್ಲಿಯೇ ಮುಳುಗಿದ್ದ.

ಬಣ್ಣ ಬಣ್ಣದ ಅಂಗಿ ತೊಟ್ಟು, ಯಾವೊತ್ತೋ ಮಾಸಿಹೋಗಿದ್ದ ಪ್ಯಾಂಟಿಗೆ ಐದಿಂಚಗೂ ಅಗಲದ ಬೆಲ್ಟು ಕಟ್ಟಿಕೊಂಡು, ಮೈಸೂರು ಅರಸರ ಕಾಲದ ಪೊಲೀಸರವೆಂದು ಹೇಳಲಾದ ಬೂಟುಗಳ ಧರಿಸಿ, ಸೈಕಲ್ಲಿನ ಎರಡೂ ಬದಿಗೆ ಐಸ್‌ಗೀರಿಯ ಡಬ್ಬಗಳ ಕಟ್ಟಿ, ಕೂದಲು, ಹಳೆಯ ಪ್ಲಾಸ್ಟಿಕ್‌ನ ಸಾಮಾನುಗಳು, ಕಬ್ಬಿಣದ ತುಂಡುಗಳನ್ನು ತುಂಬಲೆಂದು ಮುಂದಿನ ಗಾಲಿಗೆ ತಾಕುವಂತೆ ಖಾಲಿ ಚೀಲಗಳನ್ನು ಕಟ್ಟಿಕೊಂಡು ... ಹೀಗೆ ಶೇಕ್ಸಾಬು ಸೈಕಲ್ ಹತ್ತಿ ಹೊಂಟನೆಂದರೆ "ಶೇಕ್ಸಾಬು... ಶೇಕಣ್ಣಾ..... ಶೇಕ್ರಣ್ಣಾ....." ಅಂತ ಕೂಗುವವರೇ ಹೆಚ್ಚು, ಅವೆಲ್ಲವೂ ಇವತ್ತು ಪಾರಿವಾಳಗಳ ಗೂಡಿನ ಮುಂದೆ ವಿರಮಿಸುತ್ತಿರುವಂತೆ ತೋರುತ್ತಿತ್ತು.

* * * *

'ಅಬ್ದುಲ್ ರೆಹಮಾನ್ ಶೇಖ್' ಎಂಬುದು ಅವನ ಪೂರ್ಣ ಹಾಗೂ ನಿಜನಾಮಧೇಯವಾದರೂ ಆ ಹೆಸರಿನಿಂದ ಅವರನ್ನು ಕರೆಯುವವರು ಯಾರೂ ಇಲ್ಲದ್ದರಿಂದ ಅವನ ನಿಜವಾದ ಹೆಸರೇನೆಂಬುದು ಆತನಿಗೇ ಮರೆತುಹೋಗಿತ್ತು, ಆ ಹೆಸರು ಮರೆಯದಿರಲು ಯಾವ ಆಸ್ತಿಯೂ ಇರದ ಕಾರಣ ಅದು ಎಲ್ಲೂ ದಾಖಲೆ ಯಾಗದೆ.... ಶೇಕ್ಸಾಬು, ಶೇಕಣ್ಣಾ, ಶೇಕ್ರಣ್ಣ ಎಂಬೋದೆ ಎಲ್ಲರಿಗೂ ರೂಢಿ ಆಗಿ ಹೋಗಿತ್ತು.

ಪಿಯಾಂವ್... ಪಿಯಾಂವ್ ಎಂದು ಅರಚುವ ಹಾರನ್ನು, ಘಟಘಟೆಂದು ಸದ್ದು ಮಾಡಲೆಂದು ಹಿಂದಿನ ಗಾಲಿಗೆ ಕಟ್ಟಿದ್ದ ಪೀಪಿ, ವಯಸ್ಸಾಗಿ ಹೋಯ್ತೆಂದು ಆಗಾಗ ಕಿರಿಕಿರಿ ತೆಗೆಯುತ್ತ ಸದ್ದು ಮಾಡುತ್ತಲೇ ಮುಂದಕ್ಕೆ ಓಡುವ ಸೈಕಲ್ಲು... ಜೊತೆಗೆ "ಐಸ್‌ಗೀರಿ ಬಣ್ಣ ಬಣ್ಣದ ಐಸ್‌ಗೀರಿ... ಎಲ್ರೂ ತಣ್ಣಗಿರಪ್ಪೋ ಐಸ್‌ಗೀರಿ ತಿನ್ರಪ್ಪೋ" ಅಂತಾ ಕೂಗುವ ಅವನ ಧ್ವನಿ.

ಅದೆಲ್ಲವನ್ನು ಕೇಳುತ್ತಲೇ ಅವ್ವ ನೆರಿಕೆಯಲ್ಲಿ ಸಿಕ್ಕಿಸಿದ್ದ ಕೂದಲನ್ನು ಕೈಯಲ್ಲಿ ಹಿಡಿದು ಮಕ್ಕಳು ಅಂಗಳಕೆ ಓಡಿಬರುತ್ತಾರೆ. ಅಲ್ಲಿ ಇಲ್ಲಿ ಬಿದ್ದು ಒದ್ದಾಡುವ ಪ್ಲಾಸ್ಟಿಕ್ಕೂ-ಕಬ್ಬಿಣದ ಹಳೆಯ ಪಳೆಯ ಸಾಮಾನುಗಳೆಲ್ಲ ಇನ್ನು ಬಚ್ಚಿಟ್ಟುಕೊಳ್ಳಲು ಸಾಧ್ಯವಾಗದೆಂದು ಪೊಲೀಸರ ಕೈಗೆ ಸಿಕ್ಕಿ ಬಿದ್ದ ಕಳ್ಳರಂತೆ ತಲೆ ತಗ್ಗಿಸಿಕೊಂಡು ಬಂದು ಶೇಕ್ಸಾಬುವಿನ ಚೀಲ ಸೇರಿಕೊಳ್ಳುವುದೇ ತಡ ಮಕ್ಕಳು ಅದಾಗಲೇ ಕೈಯಲ್ಲಿ ಐಸ್‌ಗೀರಿ ಹಿಡಿದು ಹೋ... ಎಂದು ಕುಣಿಯಲಾರಂಭಿಸುತ್ತಾರೆ.

ಶೇಕ್ಸಾಬು ಬರುವುದೇ ದಿನಕ್ಕೊಮ್ಮೆ, ಮಧ್ಯಾಹ್ನದ ಸಣ್ಣ ನಿದ್ದೆ ತೆಗೆದು ಅದೇ ತಾನೆ ಆಕಳಿಸುತ್ತಾ ಕುಳಿತ ಹೊತ್ತಿನಲ್ಲಿ, ಕೂಲಿಗೆ ಹೋಗಿ ಬಂದ ಅವ್ವಂದಿರು, ಚಂಜೀ ದೀಪ ಹಚ್ಚೋ ಮುನ್ನ ತಲೆ ಬಾಚಿಕೊಳ್ಳುವುದನ್ನೋ.... ಉದುರಿದ ಕೂದಲನ್ನು ನೆರಿಕೆಯಲ್ಲಿ ಸಿಕ್ಕಿಸುವುದನ್ನೋ ಕಾಯುತ್ತ ಐಸ್‌ಗೀರಿಯ ಕನಸಿನಲ್ಲಿ ಮಕ್ಕಳು ಕೂತಿರುವಾಗ. ಅಂತಾ ಹೊತ್ತಿನಲ್ಲಿ ಥೇಟು ಸಿನಿಮಾದ ರಾಜಕುಮಾರನಂತೆ ಪೆಡಲುಗಳ ತುಳಿಯುತ್ತಾ ಬರುವ ಶೇಕ್ಸಾಬು ಒಮ್ಮೊಮ್ಮೆ ವಿಷ್ಣುವರ್ಧನನಂತೆ ಮತ್ತೊಮ್ಮೆ ಅಂಬ್ರೀಸನಂತೆ ತೋರಿಬಂದದ್ದುಂಟು.

ನಾಲ್ಕು ಗಂಡು, ಎರಡು ಹೆಣ್ಣು ಮಕ್ಕಳು ಸೇರಿದಂತೆ ಒಟ್ಟು ಎಂಟು ಜನರಿದ್ದ ಶೇಕ್ಸಾಬುವಿನ ಕುಟುಂಬ ವಾಸವಾಗಿರುವುದೇ ಊರ ಹೊರಗಿನ ಚರಂಡಿ ಕಟ್ಟೆಯ ಮೇಲೆ ಹಾಕಿದ್ದ ಸಣ್ಣ ಜೋಪಡಿಯಲ್ಲಿ, ಜೋಪಡಿಯ ಹೊರಗೆ ವಿಶಾಲವಾದ ಅಂಗಳದಲ್ಲಿ ಪ್ಲಾಸ್ಟಿಕ್ಕೂ-ಕಬ್ಬಿಣ-ಅದೆಷ್ಟೋ ಜನರಿಗೆ ಉಣಬಡಿಸಿದ ಮುರಿದ ಸೌಟು-ಡಬರಿ-ಗಂಗಾಳ ಇವುಗಳೆಲ್ಲವೂ ವಯಸ್ಸಾದವರಂತೆ ತೋರುತ್ತಾ ಬಿದ್ದಿವೆ. ಅತ್ತ ಶೇಕ್ಸಾಬು ಸೈಕಲ್ಲೇರಿ ಡ್ಯೂಟಿಗೆ ಹೊಂಟನೆಂದರೆ ಇತ್ತ ರಮೀಜಾಬಿಯ ಬದುಕಿನ ಚಕ್ರ ತಿರುಗಲಾರಂಭಿಸುತ್ತದೆ.

* * * *

ಶೇಖ್ ಎಂದರೆ ರಾಜನೆಂದೂ, ಶ್ರೀಮಂತನೆಂದೂ ಯಾರೋ ಹೇಳಿದ್ದರಿಂದ ಆತ ಮೊದಮೊದಲು ಸ್ವಲ್ಪ ಸಂಭ್ರಮಗೊಂಡಿದ್ದನಾದರೂ ಶೇಕ್ಸಾಬುವಿಗೆ ಈಗ ಅಂತಹ ಯಾವುದೇ ಭ್ರಮೆಗಳಿರಲಿಲ್ಲ, ಎಂಟು ಜನರ ಹೊಟ್ಟೆ ತುಂಬಬೇಕೆಂದರೆ ಆತನ ಸೈಕಲ್ಲಿನ ಗಾಲಿಗಳು ತಿರುಗಲೇ ಬೇಕು. ಅಂತಹದ್ದರಲ್ಲಿ ಏಕಾಏಕಿ ಒಮ್ಮೆಲೇ ಅಂಗಳಕ್ಕೆ ಬಂದು ನಿಂತಂತೆ ರಂಜಾನ ಹಬ್ಬ ಬಂದುಬಿಡುವುದೇ? ಇನ್ನು ಐದೇ ಐದು ದಿನ ಸಾಕು, ಹಬ್ಬ ಬಂದೇ ಬಿಡುತ್ತದೆ.

ಛೇ, ಇಂತಹ ಹೊತ್ತಿಗೇ ಜೇಬು ಖಾಲಿಯಾಗಬೇಕಾ? ಆ ಶೆಟ್ಟರು ಬ್ಯಾರೇ... "ರೊಕ್ಕ ಇದ್ರೆ ಐಸ್‌ಗೀರಿ ಮಾಲು ತಗೊಂಡೋಗು.. ಇನ್ಮುಂದೆ ಉದ್ರಿ-ಬಾಕಿ-ಗೀಕಿ ಏನೂ ಇಲ್ಲ" ಅಂತಂದು ಕೈಯ್ಯಾಡಿಸಿ ಕಳುಹಿಸಿದ್ದೂ ಕೂಡಾ ಶೇಕ್ಸಾಬು ಹೀಗೆ ಪಾರಿವಾಳಗಳ ಮುಂದೆ ಕುಂದ್ರಲು ಕಾರಣವಾಗಿತ್ತು.

ಪಾರಿವಾಳಗಳು ಕಾಳುಗಳನ್ನಾರಿಸಿ ತಿನ್ನುವುದನ್ನೇ ನೋಡುತ್ತಿದ್ದ ಶೇಕ್ಸಾಬುವಿಗೆ ತನ್ನ ಬದುಕೂ ಈ ಪಾರಿವಾಳಗಳಂತಿದ್ದರೆ ಎಂದೆನಿಸದೇ ಇರಲಿಲ್ಲ. ಗಂಡು ಮಕ್ಕಳಾಗಲೇ "ಹಬ್ಬ ಬಂತಲ್ಲಕ್ಕೋ, ರಂಜಾನ್ ಹಬ್ಬ ಕಮಲಕ್ಕೋ... ನಮ್ಗೆ ದೊಡ್ಡಬ್ಬ, ಕಟ್ಗೆ ಬಾಳ ಬೇಕು" ಅಂತಾ ಗುಡ್ಡಕ್ಕೆ ಹೊರಡುವ ತಯಾರಿಯಲ್ಲಿದ್ದರೆ, ಹೆಣ್ಣು ಹುಡುಗಿಯರು ಮೆಹಂದಿ ಕಲೆಸಿ ರಾತ್ರಿ ಹಚ್ಚಿ ಬೆಳಗಿನ ಜಾವ ಅರಳುವ ಹೂಗಳನ್ನು ನೋಡುವ ತವಕದಲ್ಲಿದ್ದರು. ಶೇಕ್ಸಾಬು ಮತ್ತೆ ಮತ್ತೆ ತನ್ನ ಜೇಬು ಖಾಲಿಯಾಗಿರುವುದನ್ನೇ ನೆನೆಸಿಕೊಂಡು ಮತ್ತಷ್ಟು ಖಿನ್ನನಾಗಿ ಕುಳಿತ.

ಗೌಡ್ರ ಮನೆಗೆ ಹೋಗಿ ಟೀವಿನಾದ್ರೂ ನೋಡಿ ಬಂದ್ರಾತು ಎಂದು ಎದ್ದ. ಅವನ ಜೊತೆಗೆ ನಾವೂ ಬರತೀವಿ ಎಂದು ಹಠ ಹಿಡಿದಂತೆ ರೆಕ್ಕೆ ಬಡಿಯುತ್ತಿದ್ದ ಪಾರಿವಾಳಗಳತ್ತ ಗದುರಿ ನಡೆದ. ಯಜಮಾನರು ಇವತ್ತು ವ್ಯಾಪಾರಕ್ಕೋಗದಿಲ್ಲೇನೋ ಎಂಬ ದುಗುಡದಲ್ಲಿಯೇ ಒಲೆಯ ಮೇಲಿನ ನುಚ್ಚಿನ ಬಾನವನ್ನು ರಮೀಜಾಬಿ ಅವಸರವಾಗಿ ಕಲೆಸುತ್ತಿದ್ದಳು.

ಟೀವಿಯಲ್ಲಿ ಯಾವುದೋ ವಾರ್ತೆ ಪ್ರಸಾರವಾಗುತ್ತಿತ್ತು.

ಅಲ್ಲಿ ಕುಳಿತ ಯಾರೊಬ್ಬರೂ ಶೇಕ್ಸಾಬುವನ್ನು ಏನೆಂದು-ಯಾಕೆಂದು ಮಾತಾಡಿಸಲಿಲ್ಲ, ಎಲ್ಲರ ಮುಖಗಳೂ ಎಂದಿನಂತಿರದೆ ಬಿಗಿದುಕೊಂಡಿದ್ದಂತೆ ತೋರಿತು. ಸುಮ್ಮನೆ ಟೀವಿ ನೋಡುತ್ತ ಕುಳಿತ.

ಯಾವುದೋ ತಾಜಮಹಲಿನ ಹೆಸರಿನ ಹೋಟೆ[...] ಹೋಟೆಲಿನ ತುಂಬಾ ಹೊಗೆ ಏಳುತ್ತಿತ್ತು, ಹೊರಗಿನಿ[...] ಗುಂಡಿನ ಸುರಿಮಳೆ, ಪ್ರತಿಯಾಗಿ ಹೋಟೆಲಿನಿಂದಲ[...] ಗುಂಡಿನ ಸುರಿಮಳೆ.

"ಏನಾಗಿದೆ ಅಲ್ಲಿ" ಶೇಕ್ಸಾಬು ಗಾಬರಿ ಬಿದ್ದು ಕೇ[...]

"ಯಾರೋ ಸಾಬ್ರಂತೆ, ನಿಮ್ಮಂತವ್ರು ಬಾಂಬು ಹಾಕ್ಯ[...]" ಗೌಡ್ರ ಮಗ ಭುಸುಗುಟ್ಟಿದ.

ಶೇಕ್ಸಾಬುವಿಗೆ "ನಿಮ್ಮಂತವ್ರು" ಎಂಬ ಶಬ್ದವೇ ದೊ[...] ದಾಗಿ ಬಾಂಬು ಸಿಡಿದಂತಾಯಿತು. ಟೀವಿ ನೋಡ[...] ಕೂತವನನ್ನು ಇನ್ನೇನು ಇವರೆಲ್ಲರೂ ಸೇರಿ ಕುತ್ಗೆ ಹಿಡಿ[...] ಆಚೆಗೆ ದಬ್ಬಬಹುದೆನಿಸತೊಡಗಿತು. ಕಣ್[...] ಕತ್ತಲಿಡತೊಡಗಿತು. ಕಣ್ಣ ತುಂಬಾ ನೀರು ತುಂಬಿಕೊಂ[...] ಗೌಡರ ಮಗನ ಕಡೆಗೆ ನೋಡಿದ. ಪುಟ್ಟ ಪಾದಗಳನ್ನಿಡುತ್ತ[...] ತನ್ನ ಸೈಕಲ್ಲಿಗೆ ಅದ್ದ ನಿಂತು ಐಸ್‌ಗೀರಿಗೆ ಕೈಯೊಡ್ಡುತ್ತ[...] ಮಗು ಇವನೇನಾ? ಅನ್ನಿಸಿತು. ಬಣ್ಣಬಣ್ಣದ ಐಸ್‌ಗೀ[...] ಹಿಡಿದ ಆ ಬಾಲಕನ ಕೈಗಳನ್ನೇ ನೆನಪಿಸಿಕೊಂಡ. ಮ[...] ಮತ್ತೆ ನೋಡಿದ. ಕೈಯ್ಯ ತುಂಬ ಅದೆಂತೆಂತಹದ[...] ಕಲರ್ ಕಲರಿನ ದಾರಗಳು ಸುತ್ತಿಕೊಂಡಿವೆ. ಹಣೆ[...] ತುಂಬಾ ಕೆಂಪು ತಿಲಕ. ಈ ಮಗುವಿನ ಕೈಗೆ ತಾ[...] ಅದೆಷ್ಟು ಐಸ್‌ಗೀರಿಗಳನ್ನು ಕೊಟ್ಟಿಲ್ಲ? ಯೋಚಿಸುತ್ತ[...] ನಡೆಯುತ್ತಿದ್ದ. ಕಣ್ಣೀರು ಕಪಾಲದ ಗುಂಟ ಹರಿಯುತ್ತಿದ್ದು[...] ಆ ಕತ್ತಲಿನಲ್ಲಿ ಯಾರಿಗೂ ಕಾಣಲಿಲ್ಲ.

* * * *

ಊರಿಗೆ ಊರೇ ಅಪರಿಚಿತವಾಗಿರುವ[...] ತೋರುತ್ತಿತ್ತು. ಅಲ್ಲಿಯವರೆಗೆ ನಿರ್ಭಯವಾಗಿ ಎಲ್ಲೆಂದರ[...] ತಿರುಗಾಡುತ್ತಿದ್ದ ಶೇಕ್ಸಾಬುವನ್ನು ಊರಿಗೆ ಊ[...] ಅಣಕಿಸುತ್ತಿರುವಂತೆ, ಬಯಲ ಕಡೆಗೆ ಹೋಗು[...] ದಾರಿಯಲ್ಲಿನ ಹುಂಚೀಮರವೂ ದುರುಗು[...] ನೋಡುತ್ತಿರುವಂತೆ ... ದಿಗಿಲಾಯಿತು. ಯಾರೋ[...] ತನ್ನನ್ನು ಹೊಡೆಯಲು ಬರುತ್ತಿದ್ದಾರೆಂದು ಕನವರಿಸತೊಡಗಿ[...]

ಅವತ್ತು ಮಲಗಿದ ಶೇಕ್ಸಾಬು ಮತ್ತೆ ಎದ್ದೇಳಲಿ[...]

ರಂಜಾನು ಹಬ್ಬ ಹತ್ತಿರ ಬಂದಂತೆಲ್ಲ ಚಡಪ[...] ಲಾರಂಭಿಸಿದ. ಆತನಿಗೆ ಗಾಳಿಶಕವೆಂದು ಗಾಳೆಮ್ಮನ ಗುಡಿ[...] ಅಜ್ಜಯ್ಯನ ಉಕ್ಕುಡಗಾತ್ರಿಗೆ, ಹಾನಗಲ್ಲದ ಶರಿ[...] ದರ್ಗಾಕ್ಕೂ ಕರೆದುಕೊಂಡು ಹೋಗಿಬಂದರು. ಎ[...] ಹೋಗಿಬಂದರೂ ಆತ "ಬಾಂಬು.... ಬಾಂಬು.... ಬೆಂಕಿ[...] ಬೆಂಕಿ" ಎನ್ನುವುದನ್ನು ಬಿಡಲಿಲ್ಲ.

ಯಾರೋ ಹೇಳಿದರೆಂದು ದೂರದ ಶಹಾಪು[...] ಮುತ್ಯಾನಿಗೂ ತೋರಿಸಿಕೊಂಡು ಬಂದು ತಾಯತ ಮ[...] ಹಾಕಿದ್ದಾಯಿತು. ಆದರೆ ಸೈಕಲ್ಲಿನ ಪೆಡಲುಗಳ ಮೆ[...] ಶೇಕ್ಸಾಬುವಿನ ಪಾದಗಳೂರಲೇ ಇಲ್ಲ.

ಆತನ ಮನಸ್ಸಿನಲ್ಲಿ ಬೆಂಕಿಯ ಕೆನ್ನಾಲಿಗೆ ಚ[...] ಕುಣಿಯುತ್ತಿತ್ತು.

'ನಿನ್ನಂತವ್ರು' ಎಂಬ ಮಾತು ಚುಚ್ಚಿ ಚುಚ್ಚಿ ಇರಿ[...] ತ್ತಿತ್ತು. ಎಲ್ಲಿ ನೋಡಿದರೂ 'ಧಂ... ಧಂ... ಧಮಾ[...]' ಎಂಬ ಸದ್ದು. "ನಹೀ.. ನಕ್ಕೊ... ಬ್ಯಾಡ" ಎಂದೆ[...] ಶೇಕ್ಸಾಬು ರಾತ್ರಿಯೆಲ್ಲಾ ಕೂಗುತ್ತಿದ್ದ.

ಶೇಕ್ಸಾಬು ಹೀಗೆ ರಾತ್ರಿಯೆಲ್ಲಾ ಕೂಗುವುದು ಒಂ[...] ದಿನ ನಿಂತುಹೋಯಿತು.

ಈ ಬಾರಿ ಓಣಿಯ ಹುಡುಗರಿಗೆ ಸುರುಕುಂ[...] ಹಂಚಲಾಗಲಿಲ್ಲ.

ಚಿಲ್ಲರೆ ಕಾಸಿನಾಸೆಗಾಗಿ ಓಡಿಬರುತ್ತಿದ್ದ ಹುಡುಗ[...] ದೂರವೇ ನಿಂತರು.

ಐಸ್‌ಗೀರಿ ತಿನ್ನಲೆಂದು ಅವ್ವನ ಉದುರಿದ ಕೂದಲ[...] ಕೈಯ್ಯಲ್ಲಿಡಿದು ಕಾದ ಮಕ್ಕಳಿಗೆ ನಿರಾಶೆಯಾಯಿತು.

ಮೆಹಂದಿಯ ಹೂಗಳು ಕೋಮಲ ಕೈಗ[...] ಅರಳಲಿಲ್ಲ.

ರಂಜಾನ ಹಬ್ಬಕ್ಕೆಂದು ಗಂಡು ಹುಡುಗರು ತ[...] ಉರುವಲು ಕಟ್ಟಿಗೆಗಳು ಶೇಕ್ಸಾಬುವಿನ ದಿನಕ[...] ಮಾಡುವುದಕ್ಕೆ ಉಪಯೋಗಿಸಲ್ಪಟ್ಟವು.

ಲಿಬರ್ಹಾನ್ ವರದಿಯ ಇತಿ ಮತ್ತು ಮಿತಿ!

▶▶▶2

ಸಮಿತಿಯನ್ನು ನೇಮಕ ಮಾಡಬೇಕೆಂದು ಶಿಫಾರಸ್ಸು ಮಾಡುತ್ತದೆ. ನಂತರ:

"6.6 It is therefore my recommenda tion that a statutory national commission be composed of acknowled ged experts to delve into these questions of the provena nce of historical monume nts, artifacts etc, and their determination should be deemed to be definitive and final."

ಅಂದರೆ ಪ್ರಾಚೀನ ಸ್ಥಳಗಳ ಯಥಾರ್ಥತೆಯನ್ನು ನಿರ್ಧರಿಸಲು ಪರಿಣತರನ್ನೊಳಗೊಂಡ ಒಂದು ರಾಷ್ಟ್ರೀಯ ಆಯೋಗವನ್ನು ನೇಮಕ ಮಾಡಬೇಕೆಂದೂ ಮತ್ತು ಅದು ಕೊಡುವ ತೀರ್ಮಾನವೇ ಅಂತಿಮವಾಗಬೇಕೆಂದೂ ಆಯೋಗ ಶಿಫಾರಸ್ಸು ಮಾಡಿದೆ.

ಇದು ಅತ್ಯಂತ ಅಪಾಯಕಾರಿ ಮತ್ತು ಬೇಜವಾಬ್ದಾರಿ ಶಿಫಾರಸ್ಸಾಗಿದೆ. ಏಕೆಂದರೆ ಬಾಬ್ರಿ ಮಸೀದಿ ವಿವಾದವು ಹತ್ತಿ ಉರಿಯುತ್ತಿರುವ ಸಂದರ್ಭದಲ್ಲೇ ವಿಶ್ವ ಹಿಂದೂ ಪರಿಷತ್ ದೇಶಾದ್ಯಂತ ತಾವು "ವಿಮೋಚನೆ" ಮಾಡಲಿರುವ ದೇವಸ್ಥಾನಗಳ ಪಟ್ಟಿಯನ್ನು ಬಿಡುಗಡೆ ಮಾಡಿತ್ತು, ಸ್ಪಷ್ಟವಾಗಿ ಅವೆಲ್ಲವೂ ಮಸೀದಿ ಮತ್ತು ಚರ್ಚ್‌ಗಳೇ ಆಗಿದ್ದವು. ಹೀಗೆ ದೇಶಾದ್ಯಂತ ಧರ್ಮದ ಹೆಸರಲ್ಲಿ ಬಿಜೆಪಿ ಕೋಮುಗಲಭೆಗಳನ್ನು ಹುಟ್ಟಹಾಕುವ ಪ್ರಯತ್ನದಲ್ಲಿರುವಾಗ ಸಂಸತ್ತಿನಲ್ಲಿ 1991ರಲ್ಲಿ **"Places Of Worship (Special Provisions) Act-1991"** ಎಂಬ ಕಾಯಿದೆ ಪಾಸಾಯಿತು. ಅದರ ಪ್ರಕಾರ ಬಾಬ್ರಿ ಮಸೀದಿ ಪ್ರಕರಣವನ್ನು ಹೊರತುಪಡಿಸಿ ಮಿಕ್ಕ ಯಾವ್ಯಾವ ಶ್ರದ್ಧಾ ಕೇಂದ್ರಗಳ ಧಾರ್ಮಿಕ ಸ್ವರೂಪದ ಬಗ್ಗೆ ತಗಾದೆಯಿದೆಯೋ ಅಲ್ಲೆಲ್ಲಾ ಆ ಧಾರ್ಮಿಕ ಸ್ಥಳ 1947ರ ಆಗಸ್ಟ್ 15ರಂದು ಯಾವ ಸ್ವರೂಪದಲ್ಲಿತ್ತೋ ಅದನ್ನೇ ಕಾಯ್ದುಕೊಂಡು ಬರಬೇಕೆಂದು ಸ್ಪಷ್ಟಪಡಿಸಲಾಗಿದೆ. ಅಂಥ ಶ್ರದ್ಧಾ ಕೇಂದ್ರಗಳ ಧಾರ್ಮಿಕ ಸ್ವರೂಪದ ಬಗ್ಗೆ ಈ ಕಾಯಿದೆ ಜಾರಿಗೆ ಬರುವ - ಅಂದರೆ 1991ರ ಜೂನ್‌ಗೆ - ಮುನ್ನ ಯಾವುದಾದರೂ ತಗಾದೆಗಳು ನ್ಯಾಯಾಲಯದಲ್ಲಿದ್ದರೆ ಅವು ಮಾತ್ರ ನ್ಯಾಯಾಲಯದ ಆದೇಶದನ್ವಯ ಇತ್ಯರ್ಥವಾಗುತ್ತವೆ. ಆದರೆ 1991ರ ಜೂನ್‌ನಂತರ ಇಂಥಾ ಯಾವುದೇ ತಗಾದೆಗಳು ಹುಟ್ಟಿಕೊಂಡಲ್ಲಿ ಆ ಧಾರ್ಮಿಕ ಸ್ಥಳಗಳನ್ನು 1947ರ ಆಗಸ್ಟ್ 15ರಂದು ಯಾವ ಸ್ವರೂಪದಲ್ಲಿತ್ತೋ ಅದೇರೀತಿ ಕಾಯ್ದುಕೊಂಡು ಬರಬೇಕೆಂಬುದು ಈ ಕಾಯಿದೆಯ ಸಾರಾಂಶ. ಇದು ಇದ್ದಿದ್ದರಲ್ಲಿ ಸರಿಯಾದ ಕ್ರಮವೂ ಆಗಿದೆ. ಇಂಥ ಮಾರ್ಗೋಪಾಯವಿದ್ದರೂ ಆಯೋಗ ಒಂದು ರಾಷ್ಟ್ರೀಯ ಆಯೋಗದ ಸಲಹೆ ನೀಡುತ್ತಾ ಹೊಸ ವಿವಾದಗಳಿಗೆ ಹುಟ್ಟಿಗೆ ಕಾರಣವಾಗಿದೆ. ಸರ್ಕಾರ ಇದನ್ನು ಒಪ್ಪಿಕೊಂಡಿಲ್ಲವಾದರೂ 1991ರ ಕಾಯಿದೆಯ ಬಗ್ಗೆಯೂ ಪ್ರಸ್ತಾಪ ಮಾಡದಿರುವುದು ಮತ್ತಷ್ಟು ಆತಂಕಕ್ಕೆ ಕಾರಣವಾಗಿದೆ.

ಅದೇರೀತಿ ಮಾಧ್ಯಮಗಳ ಮೇಲೆ ಹಲ್ಲೆ ಮಾ[...] ಪ್ರಕರಣದ ಬಗ್ಗೆ ತನಿಖೆ ಮಾಡಿದ ಆಯೋಗ ಮಾಧ್[...] ಗಳನ್ನು ನಿಯಂತ್ರಿಸಲು ಬಾರ್ ಕೌನ್ಸಿಲ್ ಆಫ್ ಇಂಡಿಯ[...] ತರಹ, ಮೆಡಿಕಲ್ ಕೌನ್ಸಿಲ್ ತರಹ ಒಂದು ಅಧಿಕಾರಯ[...] ಪ್ರಾಧಿಕಾರ ರಚನೆಗೆ ಸಲಹೆ ಮಾಡಿರುವುದು [...] ಉದ್ಧಟತನವೇ ಆಗಿದೆ.

ಇದು ಲಿಬರ್ಹಾನ್ ಆಯೋಗದ ಇತಿ ಮ[...] ಮಿತಿ. ಬಿಜೆಪಿಯನ್ನು ಸೋಲಿಸುವುದು ಮ[...] ಗುರಿಯಾಗಿರುವವರಿಗೆ ಲಿಬರ್ಹಾನ್ ಆಯೋಗ ಸಂತೋ[...] ತರಬಹುದು. ಆದರೆ ಕೋಮುವಾದವನ್ನು ಬುಡಸಮೇ[...] ಕಿತ್ತುಹಾಕಿ ಈ ದೇಶವನ್ನು ಸೌಹಾರ್ದಯುತ ತಾಣವನ್[...] ಉಳಿಸಿಕೊಳ್ಳಬಯಸುವ ನಿಜವಾದ ಸೆಕ್ಯುಲಾರ್ ವಾದಿಗ[...] ಲಿಬರ್ಹಾನ್ ವರದಿಯ ಪ್ರಮುಖಾಂಶಗಳು ನೆಮ್ಮದಿಯ[...] ನೀಡಿದರೂ ಅದರ ಮಿತಿಗಳು, ದೌರ್ಬಲ್ಯಗಳು ಮ[...] ಬೇಜವಾಬ್ದಾರಿ ಶಿಫಾರಸ್ಸುಗಳು ಆತಂಕವನ್ನೇ ತ[...] ತಾಕುತ್ತವೆ.

ನ್ನ ಹರಳಿಮಠಕ್ಕೂ, ಶಾಮಣ್ಣನ ಕಡಿದಾಳಿಗೂ ಮೈಲಿಗಿಂತ ಕಡಿಮೆ ಅಂತರ. ನಾನು ಮಾಧ್ಯಮಿಕ ಪೂರೈಸಿದ ಹಾರೋಗೊಳಿಗೆ ಶಾಲೆಗೂ ಶಾಮಣ್ಣನ ಗೂ ಮಧ್ಯೆ ಗದ್ದೆ ಬಯಲೊಂದೇ ಅಡ್ಡ. ನನ್ನಂತಹ ಹುಡುಗರಿಗೆ ಶಾಮಣ್ಣನ ದರ್ಶನವಾಗುತ್ತಿದ್ದುದು ಹಬ್ಬದ ರಾತ್ರಿಯ ನಾಟಕ ಪ್ರದರ್ಶನಗಳಲ್ಲಿ, ಶಾಮಣ್ಣನೇ ವ್ಯವಸ್ಥೆಗೊಳಿಸುತ್ತಿದ್ದ ರಾತ್ರಿಯ ನಾಟಕಗಳಲ್ಲಿ. ಈ ಎಲ್ಲಾ ಸಂದರ್ಭಗಳಲ್ಲಿ ಕುತ್ತಿಗೆಗೆ ನೇತು ಹಾಕಿಕೊಂಡಿದ್ದ ಕ್ಯಾಮರಾದಿಂದ ಟೋ ತೆಗೆಯುವುದರಲ್ಲಿ ತುಂಬಾ ಬ್ಯುಸಿ!

ನಾನು ಆರನೆಯ ತರಗತಿಯಲ್ಲಿದ್ದಾಗ ಆ ವರ್ಷದ ಹಬ್ಬದ ಸಂದರ್ಭದಲ್ಲಿ 'ಹೆಂಗ್ಸುಂತ್ರಿ' ಎಂಬ ಮಾಡಿಸಿದರು. ಅದರಲ್ಲಿ ನನಗೆ 'ಆನಂದ' ಎಂಬ ಪಾತ್ರ. ಶಾಮಣ್ಣ ಈ ನಾಟಕದ ಅನೇಕ ಫೋಟೋ ತೆಗೆದಿದ್ದರು.

ಮ್ಮೆ ನಮ್ಮ ಹಳ್ಳಿಯ ಶ್ರೀ ಕಲಾನಾಥೇಶ್ವರ ಯುವಕ ದಿಂದ ತಾಲ್ಲೂಕು ಯುವ ಜನ ಮೇಳದ ಸ್ಪರ್ಧೆಯಲ್ಲಿ ಹಿಸಲು 'ಲಚ್ಚಿ' ಎಂಬ ನಾಟಕ ಕಲಿತೆವು. ಅದರಲ್ಲಿ ಲಚ್ಚಿಯ ಪಾತ್ರ. ಈ ಸ್ಪರ್ಧೆ ನಡೆಯುತ್ತಿದ್ದುದು ಗೊಳಿಗೆಯ ರಂಗಮಂದಿರದಲ್ಲಿ, ನಮ್ಮ ಪ್ರದರ್ಶನ ಹೊತ್ತಿಗೆ ಬರುತ್ತದೆ ಎಂಬುದು ಗೊತ್ತಿರಲಿಲ್ಲ. ರಾತ್ರಿ ಎಂಟು ಗಂಟೆಗೆ ಮೇಕಪ್ ಮಾಡಿಕೊಂಡು ಾಗಿದ್ದೆವು. ರಾತ್ರಿ 11 ಗಂಟೆಯಾದರೂ ನಮ್ಮ ನಾಟಕ ನಕ್ಕೆ ಕರೆ ಬರಲಿಲ್ಲ, ನಾನು ಗ್ರೀನ್ ರೂಮಿನಲ್ಲಿದ್ದು ಆಗಿ ಹೊರಗೆ ಬಂದು ಬಾಗಿಲಿಗೆ ಒರಗಿ ನಿಂತೆ. ಮಂಪರು ಬಂದು ತೂಕಡಿಸುತ್ತಿದ್ದೆ. ಆ ವೇಳೆಗೆ ಬಂದ ಶಾಮಣ್ಣ ನನ್ನನ್ನು ಮಹಿಳೆಯೆಂದೇ ಭಾವಿಸಿ ಗಮ್ಮ ಮನೆಗೆ ಹೋಗಿ ಮಲಗಿಕೋ" ಎಂದರು!

ರ್ಥಹಳ್ಳಿಯಿಂದ ಶಾಮಣ್ಣ ತಮ್ಮ ಊರು ಳಿಗೆ ಹೋಗಬೇಕಾದರೆ ಹರಳಿಮಠ ದಾಟಿಯೇ ಗಬೇಕು. ಹರಳಿಮಠ ಮುಖ್ಯ ರಸ್ತೆಯ ಬದಿಯಲ್ಲಿ ಶನ ಅಂಗಡಿ ಹತ್ತಿರ ಒಂದು ದೊಡ್ಡ ಧೂಪದ ದೆ. ಶಾಮಣ್ಣ ತಮ್ಮ ಊರಿಗೆ ಹೋಗುತ್ತಾ, ಆಗಾಗ ತಮ್ಮ ಕಾರನ್ನು ಅಲ್ಲಿ ನಿಲ್ಲಿಸಿ ಆ ಮರ ಸ್ವಲ್ಪ ಕಾಲ ತನ್ಮಯರಾಗಿ ನೋಡುತ್ತಾ, ಕೆಲವೊಮ್ಮೆ ಟೋ ತೆಗೆದುಕೊಂಡು ಹೋಗುವುದು ವಾಡಿಕೆ.


ನಾನು ಪದವಿ ಮುಗಿಯುತ್ತಿದ್ದಂತೆ ಉದ್ಯೋಗವರಸಿ ಸೂರಿಗೆ ತೆರಳಿದೆ. ನಾನು ಬೆಂಗಳೂರಿನಲ್ಲಿರುವ ರ್ಷದಲ್ಲಿಯೇ ಶಾಮಣ್ಣನವರ ತಂದೆ ಕಡಿದಾಳು ಮ್ಯ ಗೌಡರು ತೀರಿಕೊಂಡರು. ಅವರ ಹೆಸರಿನಲ್ಲಿ ನ್ನೊಂದನ್ನು ತರಲು ಅವರ ಕುಟುಂಬವರ್ಗ ಹಾಗೂ ಬಳಗ ನಿರ್ಧರಿಸಿತು.

ಮಣ್ಣ ಹಾಗೂ ಅವರ ತಂದೆ ರಾಮಯ್ಯ ಗೌಡರನ್ನು ನಿಲ್ಲಿಸಿದರೆ ಅಪರಿಚಿತರು ತಂದೆ ಮಗನನ್ನು ಬದಲಾಗಿ ತಿಳಿಯುವ ಸಾಧ್ಯತೆಯಿತ್ತು. ಜುಬ್ಬಾ- ಧರಿಸಿದ, ಅರಿಸ್ಟಾಟಲ್ ರೀತಿಯ ದಟ್ಟವಾದ ಹಿನ್ನೆಲೆಯಲ್ಲಿ ಸಂತನಂತೆ ಶಾಮಣ್ಣ ಕಾಣುತ್ತಿದ್ದರೆ ಶೇವ್ ಮಾಡಿದ ಪ್ಯಾಂಟು ಶರಟು ಧಾರಿ ಮ್ಯ ಗೌಡರು ಶಾಮಣ್ಣನಿಗಿಂತ ಎಳೆಯರಾಗಿ ದ್ದರು.

ಶಾಮಣ್ಣನ ತಂದೆ ಹಲವು ಅಭಿರುಚಿಯ ವ್ಯಕ್ತಿಯಾಗಿದ್ದರು. ಭೂಮಾಲೀಕರಾಗಿದ್ದ ಗೌಡರು ಹಳ್ಳಿಯಲ್ಲಿ ಗೌಡರ ಸಹಜ ಯಜಮಾನಿಕೆಯನ್ನು ನಿಭಾಯಿಸುತ್ತಲೇ ಹಲವು ಆಸಕ್ತಿಗಳನ್ನು ಬೆಳೆಸಿಕೊಂಡಿದ್ದರು. ಬೇಟೆ, ಒಕ್ಕಲಿಗ ಸಮಾಜದ ಚಟುವಟಿಕೆ, ನಾಟಕ ಮತ್ತು ಜಾನಪದ ಗೌಡರ ಆಸಕ್ತಿಗಳಾಗಿದ್ದವು. ಭೂಮಾಲೀಕರ ಪ್ರಧಾನ ಚಹರೆಗಳನ್ನು ರಾಮಯ್ಯ ಗೌಡರು ಮೈಗೂಡಿಸಿಕೊಂಡಿದ್ದರೂ, 'ಸಾರಾಯಿ'ಯ ವಿಚಾರದಲ್ಲಿ ಮಾತ್ರ ಅವರ ನಿಲುವು ಭೂಮಾಲೀಕರ ವ್ಯಕ್ತಿತ್ವಕ್ಕೆ ವಿರುದ್ಧವಾಗಿತ್ತು, ರಾಮಯ್ಯ ಗೌಡರು 'ಸಾರಾಯಿ'ಯ ವಿರುದ್ಧ ಸದಾ ದನಿ ಎತ್ತುತ್ತಿದ್ದರು. ರಾಮಯ್ಯ ಗೌಡರು ಹಾಗೂ ಹಾರೋಗೊಳಿಗೆ ಬಸಪ್ಪ ಗೌಡರ ಕಾರಣದಿಂದಾಗಿ 'ಸಾರಾಯಿ' ಅಂಗಡಿ ಇಲ್ಲದಿರುವ ಮಲೆನಾಡಿನ ಅಪರೂಪದ ಹಳ್ಳಿಗಳಲ್ಲಿ ಕಡಿದಾಳು ಹಾಗೂ ಹಾರೋಗೊಳಿಗೆಯೂ ಸೇರಿದ್ದವು. ಆದರೆ ಈ ಊರುಗಳ ಪಕ್ಕದ ಹಳ್ಳಿಯಾದ ನಮ್ಮ ಹರಳಿಮಠದಲ್ಲಿ ಭರ್ಜರಿ ಮೂರು ಸಾರಾಯಿ ಅಂಗಡಿಗಳಿದ್ದವು. ಕಡಿದಾಳು ಮತ್ತು ಹಾರೋಗೊಳಿಗೆಗಳಿಗೆ ಮಂಜೂರಾದ ಸಾರಾಯಿ ಅಂಗಡಿಗಳನ್ನು ಹರಳಿಮಠಕ್ಕೆ ದಯಪಾಲಿಸಿದರು ಎಂದು ನಮ್ಮೂರಿನ ಕೆಲವರು ನನ್ನ ಬಳಿ ಹೇಳಿದ್ದುಂಟು!

ಈ ಹಿನ್ನೆಲೆಯಲ್ಲಿ ಪಾನನಿರೋಧಕ್ಕೆ ರಾಮಯ್ಯ ಗೌಡರ ಕೊಡುಗೆ ಕುರಿತು ಲೇಖನವೊಂದನ್ನು ಕಳಿಸಬೇಕೆಂದು ಕೃತಿಯ ಸಂಪಾದಕರು ನನಗೆ ಪತ್ರ ಬರೆದರು. ಸಂಪಾದಕೀಯ ಮಂಡಳಿಯಲ್ಲಿ ರಾಮಯ್ಯ ಗೌಡರ ಹಿರಿಮಗ ಕಡಿದಾಳು ಶಾಮಣ್ಣನವರೂ ಇದ್ದರು. ನಾನು ಅತ್ಯಂತ ನಿಷ್ಠುರವಾಗಿ ರಾಮಯ್ಯ ಗೌಡರ ಹೆಚ್ಚುಗಾರಿಕೆ - ಮಿತಿಗಳನ್ನು ಉಲ್ಲೇಖಿಸಿ ಲೇಖನವೊಂದನ್ನು ಕಳಿಸಿದೆ. (ಲಂಕೇಶ್ ಗರಡಿಯಲ್ಲಿ ಬೆಳೆದ ನಾನು ನಾಜೂಕಾಗಿ ಬರೆಯಲು ಸಾಧ್ಯವೇ?) ಆ ಲೇಖನ ಪ್ರಕಟವಾಗುವ ಬಗ್ಗೆ ನನಗೆ ಗಾಢ ಅನುಮಾನವಿತ್ತು, ಆದರೆ ಅದು ಪ್ರಕಟವಾಯಿತು. ಪುಸ್ತಕ ಹೊರಬಂದ ಮೇಲೆ ರಾಮಯ್ಯ ಗೌಡರ ಕುಟುಂಬದ ಕೆಲವು ಮಹಿಳೆಯರು 'ಯಾವನು ಆ ರೀತಿ ಬರೆದವನು' ಎಂದು ಕೇಳಿದರೆಂದು ಅಲ್ಲಿಗೆ ಹೋಗಿ ಬಂದವರು ನನಗೆ ತಿಳಿಸಿದರು.

ಈ ದಶಕದ ಆರಂಭದಲ್ಲಿ ನಾನು ಬೆಂಗಳೂರು ಬಿಟ್ಟು ಶಿವಮೊಗ್ಗಕ್ಕೆ ವಾಪಸಾದೆ. ಅದು ಕುದುರೆಮುಖ ಗಣಿಗಾರಿಕೆ ವಿರೋಧಿ ಚಳವಳಿ ತೀವ್ರಗೊಳ್ಳುತ್ತಿದ್ದ ಕಾಲ. ಶಿವಮೊಗ್ಗಕ್ಕೆ ಬಂದ ನಾನು ಯಾವ ಉದ್ಯೋಗವನ್ನೂ ಹಚ್ಚಿಕೊಳ್ಳದೇ ಆರಾಮಾಗಿ ತಿರುಗುತ್ತ ನನ್ನ ಮಾನಸಿಕ ಸ್ವಾಸ್ಥ್ಯದ ಬಗ್ಗೆ ಮನೆಯವರಿಗೆ, ಹಿತೈಷಿಗಳಿಗೆ ಅನುಮಾನ ಮೂಡಿಸುತ್ತಿದ್ದೆ. ತುಂಗಭದ್ರ ಉಳಿಸಿ ಚಳವಳಿಯಲ್ಲಿ ನನ್ನನ್ನು ತೊಡಗಿಸಿಕೊಂಡೆ. ಈ ಚಳವಳಿಯ ಭಾಗವಾದ ತುಂಗಾ-ಭದ್ರಾ ನದಿ ತೀರದ ಎಂಟು ಜಿಲ್ಲೆಯ ಜನಗಳಲ್ಲಿ ಜಾಗೃತಿ ಮೂಡಿಸುವ ಜಾಥಾದೊಂದಿಗೆ ಹೊರಟೆ. ನಾವು ಹೊಳೆಹೊನ್ನೂರಿಗೆ ಹೋದಾಗ ಶಾಮಣ್ಣ ಹಾರ್ಮೋನಿಯಂನೊಂದಿಗೆ ಅಲ್ಲಿ ನಮಗೆದುರಾದರು. ಹಾರ್ಮೋನಿಯಂನ್ನು ಕುತ್ತಿಗೆಗೆ ನೇತು ಹಾಕಿಕೊಳ್ಳಲು ಹಗ್ಗ ತಾರದಿರುವ ಕಾರಣ ಶಾಮಣ್ಣ ಕೊಂಚ ಚಡಪಡಿಕೆಯಲ್ಲಿದ್ದರು. ಅತ್ತಿತ್ತ ನೋಡಿ ಯಾರದೋ ಮನೆಯ ದನದ ಕೊಟ್ಟಿಗೆಗೆ ನುಗ್ಗಿ ದನಕ್ಕೆ ಕಟ್ಟುವ ಸೊತ್ತಿನ ಹಗ್ಗವನ್ನು ತಂದು ಹಾರ್ಮೋನಿಯಂನ್ನು ಕುತ್ತಿಗೆಗೆ ನೇತು ಹಾಕಿಕೊಂಡು ಹಾಡತೊಡಗಿದರು. ಅಂದು



ಹಸಿರು ಶಾಲಿನ ಸಂತನ ಒಳ್ಳೆಯತನದ ಬಿಕ್ಕಟ್ಟುಗಳು

ಶಾಮಣ್ಣ ತುಂಬಾ ಭಾವೋದ್ವೇಗಕ್ಕೆ ಒಳಗಾಗಿದ್ದರು. "ಗಣಿಗಾರಿಕೆ ನಿಲ್ಲಿಸದಿದ್ದರೆ ಅಧಿಕಾರಿಗಳನ್ನು, ರಾಜಕಾರಣಿಗಳನ್ನು ಬಾರುಕೋಲಿನಿಂದ ಬಾರಿಸುವ ಚಳವಳಿ ಮಾಡಬೇಕಾದೀತು" ಎಂದು ಘೋಷಿಸಿದರು.

ಇಲ್ಲಿಂದ ಶಾಮಣ್ಣನವರೊಂದಿಗಿನ ನನ್ನ ಒಡನಾಟ ನಿರಂತರವಾಯಿತು. ಶಾಮಣ್ಣನವರಿಗೆ ಸುಮ್ಮನೆ ನಡೆದುಕೊಂಡು ಹೋಗುವುದು ಇಷ್ಟ. ನನಗೂ ಅಷ್ಟೆ. ನಾನೂ ಶಾಮಣ್ಣ ಅದೂಇದೂ ಮಾತನಾಡುತ್ತಾ ಶಿವಮೊಗ್ಗೆಯ ಬೀದಿಗಳಲ್ಲಿ ಹಲವು ಸಲ ನಡೆದಿದ್ದೇವೆ. ಒಮ್ಮೆ ಹೀಗೆ ಹೋಗುವಾಗ ಅವರ ಬಂಧುಗಳ ಮನೆಗೆ ಹೋಗುವ ಪ್ರಸಂಗ ಎದುರಾಯಿತು. ಅದು ಊಟದ ಸಮಯ. ಅವರು ಊಟಕ್ಕೆ ಆಹ್ವಾನಿಸಿದರೂ, ಆಹ್ವಾನದಲ್ಲಿನ 'ಕಾಟಾಚಾರತೆ' ಗಮನಿಸಿ "ನಮ್ಮದಾಗಲೇ ಊಟವಾಗಿದೆ" ಎಂದು ಶಾಮಣ್ಣ ಹೊರಬಂದರು. "ಆತ್ಮೀಯತೆಯಿಲ್ಲದ ಕಡೆ ಊಟ ಮಾಡಬಾರದು" ಎಂದು ... ಅಂದುಕೊಂಡ ಶಾಮಣ್ಣ ನನ್ನನ್ನು ಅವರ ಗೆಳೆಯರ ಮನೆಗೆ ಕರೆದುಕೊಂಡು ಹೋದರು. ಆ ಮನೆಯವರು ನಮಗೆ ಭರ್ಜರಿ ಬೋಳಿದ ರೊಟ್ಟಿ ಊಟ ಮಾಡಿ ಬಡಿಸಿದರು.

ಇನ್ನೊಮ್ಮೆ ರೈತ ಸಂಘದ ಎರಡು ಬಣಗಳನ್ನು ಒಟ್ಟುಗೂಡಿಸಲು ಶಾಮಣ್ಣ ಪ್ರಯತ್ನಿಸುತ್ತಿದ್ದ ಸಂದರ್ಭದಲ್ಲಿ ಈ ಪ್ರಯತ್ನದ ಭಾಗವಾಗಿ ಡಾ. ಚಿಕ್ಕಸ್ವಾಮಿಯವರನ್ನು ಭೇಟಿಯಾಗಲು 'ನೀವೂ ಬನ್ನಿ' ಎಂದು ಅವರ ಮನೆಗೆ ನನ್ನನ್ನು ಕರೆದುಕೊಂಡು ಹೋದರು. ಆ ಸಂದರ್ಭದಲ್ಲಿ ಅವರಿಗೆ "ರಾಜ್ಯಮಟ್ಟದಲ್ಲಿ ರೈತ ಸಂಘದ ಎರಡು ಬಣಗಳನ್ನು ಒಟ್ಟುಗೂಡಿಸಲು ಓಡಾಡುತ್ತಿದ್ದೀರಿ. ಕಷ್ಟ ಅನ್ನಿಸ್ತಿದೆ. ಅದು ಅತ್ಲಾಗಿರ್ಲಿ, ಶಿವಮೊಗ್ಗದ ಇಬ್ಬರು ರೈತ ನಾಯಕರನ್ನು ಒಟ್ಟು ಮಾಡಲು ಇನ್ನೂ ನಿಮಗಾಕೆ ಆಗಲಿಲ್ಲ" ಎಂದು ಕೇಳಿದೆ. "ಅದು ನನಗೆ ಖಂಡಿತಾ ಸಾಧ್ಯವಿಲ್ಲ, ಅದು ಒಂದು ಹೆಣ್ಣಿನ ಸಮಸ್ಯೆ ಮಾರಾಯ" ಎಂದು ಜೋರಾಗಿ ನಗತೊಡಗಿದರು.

ಶಾಮಣ್ಣನನ್ನು ನಾನು ಐದನೇ ತರಗತಿಯಲ್ಲಿದ್ದಾಗಿನಿಂದಲೂ ನೋಡುತ್ತಿದ್ದೇನೆ. ಅದೇ ಗಡ್ಡ ಅದೇ ಜುಬ್ಬಾ ಅದೇ ಪೈಜಾಮ. ಅದೇ ಹಸಿರು ಶಾಲು, ಅದೇ ತುಂಟ ನಗೆ, ಒಂದಿನಿತೂ ವ್ಯತ್ಯಾಸವಿಲ್ಲ.

ಶ್ರೀಮಂತ ಕುಟುಂಬದಿಂದ ಬಂದ ಶಾಮಣ್ಣ ಅಹಂಕಾರದ ಬದಲು ವಿನಯ, ಸ್ವಪ್ರತಿಷ್ಠೆಯ ಜಾಗದಲ್ಲಿ ಆತ್ಮವಿಮರ್ಶೆ, ಹುಸಿಗಾಂಭೀರ್ಯಕ್ಕೆ ಬದಲು ತಮಾಷೆ ರೂಢಿಸಿಕೊಂಡಿದ್ದು ಅದೇ ಪರಿಸರದಿಂದ ಬಂದ ನನಗೆ ಅಚ್ಚರಿಯ ಸಂಗತಿ. ಶಾಮಣ್ಣನ ಈ ವಿಸ್ಮಯ ವ್ಯಕ್ತಿತ್ವದ ಪರಿವರ್ತನೆಯಲ್ಲಿ ಅವರ ಶ್ರೀಮತಿ ಶ್ರೀದೇವಿಯಕ್ಕನವರ ಪಾಲೂ ದೊಡ್ಡದು ಎಂದು ನನಗನ್ನಿಸುತ್ತದೆ.

ತಮ್ಮ ನೆಂಟರೇ ಆದ ಕಡಿದಾಳು ಮಂಜಪ್ಪನವರ ಕುಟುಂಬ ವರ್ಗದಲ್ಲಿ ನಿಶ್ಚಿತಾರ್ಥವೊಂದು ಅದ್ದೂರಿಯಾಗಿ ಜರುಗಿದಾಗ ಅದರ ವಿರುದ್ಧ ಕಪ್ಪು ಬಾವುಟ ಪ್ರದರ್ಶಿಸಿದ ಶಾಮಣ್ಣ ವೈಭವದಿಂದ ಜರುಗಿದ ತಮ್ಮ ಸಹೋದರರ ಮಕ್ಕಳ ಮದುವೆಯಲ್ಲಿ ಓಡಾಡುತ್ತಾ ಫೋಟೋ ತೆಗೆಯುತ್ತಿದ್ದುದನ್ನು ನನ್ನ ಬಳಿ ಆಕ್ಷೇಪಿಸಿದವರಿದ್ದಾರೆ. ಬಾಂಧವ್ಯವನ್ನು ನಿರಾಕರಿಸಲಾಗದ ಮೃದು ಹೃದಯಿ ಶಾಮಣ್ಣನ ಇಕ್ಕಟ್ಟಿದು. ಬಹುಶಃ ಇದೇ ಕಾರಣದಿಂದ ತಮಗೆ ಗಾಢವಾಗಿ ಅನ್ನಿಸಿದ್ದನ್ನು ಹೇಳಿಕೊಳ್ಳಲಾಗದೇ ನುಂಗಿಕೊಂಡ ಶಾಮಣ್ಣ ಎಲ್ಲರ ಪ್ರೀತಿ ಸಂಪಾದಿಸಿದರೂ ರೈತ ಸಂಘವನ್ನು ನಿರ್ದೇಶಿಸಬಲ್ಲ ಗಟ್ಟಿ ನಾಯಕರಾಗಲಿಲ್ಲ. ಬಹುಶಃ ನಾಯಕತ್ವ ಎನ್ನುವುದು ಸ್ವಲ್ಪ ಮಟ್ಟಿಗೆ ನಿರ್ದಯತೆಯನ್ನು ಬೇಡುತ್ತದೆ ಎನ್ನಿಸುತ್ತದೆ. ನಿರ್ದಯತೆ ಎನ್ನುವುದು ಶಾಮಣ್ಣನ ಭಾವಕೋಶದಲ್ಲಿಯೇ ಇಲ್ಲ.

ರೈತ ನಾಯಕರ ಸರ್ವಾಧಿಕಾರಿ ಮನೋಭಾವ ರೈತ ಸಂಘದ ಅವನತಿಗೆ ಕಾರಣವಾದಂತೆ ಶಾಮಣ್ಣನ ಅವಿಮರ್ಶಾತ್ಮಕ ಒಳ್ಳೆಯತನವೂ ರೈತಸಂಘ ದಾರಿ ತಪ್ಪಲು ಕಾರಣವಾಗಿರಬೇಕು. ದೊಡ್ಡ ದೊಡ್ಡ ಘೋಷಣೆಯ ಸರ್ವಾಧಿಕಾರಿ ನಾಯಕರು ಪರಮಭ್ರಷ್ಟರೂ, ಆಷಾಢಭೂತಿಗಳೂ ಆದದ್ದು ನಮ್ಮ ಕಣ್ಣೆದುರಿಗಿರುವಾಗ ಶಾಮಣ್ಣ ಹೀಗೆ ಏನೂ ಆಗದೆ ಇರುವಂತೆ ಅವರನ್ನು ಕಾಪಾಡಿದ್ದು ಕೂಡ ಅವರ ಇದೇ ಗುಣವಿರಬೇಕು.

● ಸರ್ಜಾಶಂಕರ ಹರಳಿಮಠ

ಸ್ಮೃತಿ-ವಿಸ್ಮೃತಿಗಳ ನಿರೂಪಣೆ

ಮ ಮೂಲದಿಂದ ಭಾರತದ ಅಕಾಡೆಮಿಕ್ ವಲಯವನ್ನು ಪ್ರವೇಶಿ ವಾದಿ ಚಿಂತನೆಗಳು, ಸಮಕಾಲೀನ ಪ್ರಪಂಚದಲ್ಲಿ ಸ್ವರೂಪವನ್ನು ಪಡೆಯತೊಡಗಿವೆ. ಭಾರತೀಯ ಸುವುದು ಈ ನೆಲದ ಸಾಮಾಜಿಕ-ಸಾಂಸ್ಕೃತಿಕ ಸ್ತ್ರೀ ಅಭಿವ್ಯಕ್ತಿ ಹಾಗೂ ಅನುಭವಕ್ಕಿರುವ ಗಳನ್ನು ಹುಡುಕುವುದು/ಗುರುತಿಸುವುದೇ ಆಗಿದೆ. ಇದು, ಈ ಕಾಲ-ದೇಶದ ಸಂದರ್ಭಕ್ಕನು ಸ್ತ್ರೀಯ ಘನತೆ, ಅನನ್ಯತೆ ಹಾಗೂ ಸ್ವಾಯತ್ತತೆ ತ್ತಿಹಿಡಿಯುವ ಒಂದು ಪ್ರಯತ್ನ ಎಂದರೂ ತು. ಮುಖ್ಯವಾಗಿ, ಈ ರೀತಿ 'ಸ್ತ್ರೀವಾದಿ' ಇಲ್ಲದೆ ಬದುಕಿದ, ಬರೆದ, ನಲುಗಿದ ಜೀವಗಳು ಇಲ್ಲ ಆಗಿಹೋಗಿದ್ದಾರೆ. ಪ್ರಧಾನ ... ಒಂದೋ ... ಉಪೇಕ್ಷಿಸುತ್ತದೆ. ಇಲ್ಲವೇ, ಗಾಢ ವಿಸ್ಮೃತಿ ಇವರನ್ನು ಸಂಪೂರ್ಣ ಮರೆತೇ ಬಿಡುತ್ತದೆ. ... ಮಹಿಳೆಯರ ಅನುಭವದ ದಾಖಲೆಗೆ ... ಆಯಾಮ ಆಯಾಚಿತ ... ವೈದೇಹಿಯವರು ... ಸರಸ್ವತಿಬಾಯಿ ರಾಜವಾಡೆ ಅವರ ಬದುಕು- ... ಗಾಢ ವಿಸ್ಮೃತಿಯನ್ನು ... ಒಂದು ಆಗಿದೆ.



ಕೊಡಗಿನ ಗೌರಮ್ಮರಂತೆ, ಸರಸ್ವತಿ ಬಾಯಿ ರಾಜವಾಡೆಯವರು ಉತ್ಕೃಷ್ಟ ಸಾಹಿತ್ಯ ರಚಿಸಿಯೂ ಹಲವು ಬಗೆಯ ಉಪೇಕ್ಷೆಗಳಿಗೆ ಒಳಗಾದವರು. ಹೊಸ ಸದಾರಮೆ ಎಂದು ಕೆ.ವಿ.ಸುಬ್ಬಣ್ಣನವರಿಂದ ಕರೆಸಿಕೊಂಡ ಇವರು ಗಿರಿಬಾಲೆ ಎಂಬ ಹೆಸರಿನಿಂದ ಸಾಹಿತ್ಯ ರಚಿಸಿದರು. ಈ ಪುಸ್ತಕದಲ್ಲಿ ಸೂಚಿತವಾದಂತೆ ಇವರ ಜೀವನದ ಅನುಭವ ಲೋಕ ಬಹು ವಿಶಾಲ ಸ್ವರೂಪದ್ದು. ತನಗಿಂತ ಬಹಳ ದೊಡ್ಡವನಾದ ಪ್ರತಿಷ್ಠಿತ ಸರ್ಕಾರಿ ಅಧಿಕಾರಿಯನ್ನು ಮದುವೆಯಾಗಿ ಅನುಭವಿಸಿದ ನೋವು ಸಂಕಟಗಳ ಜೀವನವೇ ಒಂದು ಬೃಹತ್ ಕಾದಂಬರಿಗೆ ವಸ್ತುವಾಗಬಲ್ಲದು. ತೀವ್ರ ಬಡತನ ಹಾಗೂ ತಾಯಿಯ ಪ್ರೀತಿಯಿಂದ ವಂಚಿತಳಾದ ಹೆಣ್ಣು ನಗುನಗುತ್ತಲೇ ತನ್ನ ವ್ಯಕ್ತಿತ್ವದ ಅನನ್ಯತೆ ಹಾಗೂ ಅಭಿವ್ಯಕ್ತಿಯ ಘನತೆಯನ್ನು ಕಂಡುಕೊಂಡ ತೀರಾ ಅಪರೂಪದ ನಿರೂಪಣೆ ಈ ಪುಸ್ತಕದಲ್ಲಿದೆ. ಇಲ್ಲಿ ಇವರ ವೈಯಕ್ತಿಕ ಹಾಗೂ ಸಾಮಾಜಿಕ ಅನುಭವಗಳು ಬೇರ್ಪಡಿಸಲಾರದಂತೆ ಮಿಳಿತಗೊಂಡಿರುವುದು, ಈ ನಿರೂಪಣೆಯ ಪ್ರಾಮುಖ್ಯತೆಯನ್ನು ಇನ್ನೂ ಹೆಚ್ಚಿಸಿದೆ.

ಸರಸ್ವತಿ ರಾಜವಾಡೆಯವರು ಉಡುಪಿಯಲ್ಲಿ ಬದುಕಿದ್ದು ಬರೆದದ್ದು, ಖ್ಯಾತ ಸಾಹಿತಿಯೊಬ್ಬರಿಂದ ಹೆಣ್ಣು ಎನ್ನುವ ಕಾರಣಕ್ಕೆ ಅವಮಾನಕ್ಕೊಳಗಾಗಿದ್ದು, ವರ್ಷಗಳ ಕಾಲ 'ಸುಪ್ರಭಾತ' ಸಾಹಿತ್ಯಿಕ ಪತ್ರಿಕೆಯನ್ನು ನಡೆಸಿದ್ದು, ಸಿಂಗಪೂರ್‌ದಂತಹ ಸ್ಥಳಕ್ಕೆ ದೇಶಾಂತರ ಹೋಗಿ ಅನಾಥ ಪ್ರಜ್ಞೆ ಅನುಭವಿಸಿದ್ದು, ಖ್ಯಾತಿಯ ಉತ್ತುಂಗದಲ್ಲಿದ್ದಾಗಲೇ ಸಾಮಾಜಿಕ ಬದುಕಿಗೆ ವಿಮುಖಳಾಗಿ ಧಾರ್ಮಿಕ ಒಲವು ಹೊಂದಿದ್ದು, ವೈಯಕ್ತಿಕ ಆಸೆ ಆಕಾಂಕ್ಷೆ ಹಾಗೂ ನಿರಾಸೆಗಳ ನಡುವೆಯೂ 'ಸಂತೃಪ್ತ' ಜೀವನ, ಗೋವಿಂದ ಪೈಗಳೊಂದಿಗಿನ ಒಡನಾಟ, ಇತರರ ನೋವಿಗೆ ಪ್ರೀತಿಯ ಹೊಳೆಯನ್ನೇ ಹರಿಸಿದ್ದು ಮುಂತಾದ ಅನುಭವ ಸಂಚಯವನ್ನು ವೈದೇಹಿಯವರು ಆರ್ದ್ರವಾದ ಭಾಷೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಹೀಗಿದ್ದೂ ಇದು ರಾಜವಾಡೆಯವರ ಜೀವನದ ತುಣುಕುಗಳ ದರ್ಶನವೇ ಹೊರತು 'ಸಮಗ್ರ' ಅನುಭವವಲ್ಲ. ತಾವು ಸಾಮಾಜಿಕ ಬದುಕಿಗೆ ವಿಮುಖಳಾದ ಕಾರಣಗಳನ್ನು ಇವರು ತಮ್ಮ ಒಡಲಲ್ಲೇ ಇಟ್ಟುಕೊಂಡಿದ್ದರಿಂದ ಕೊಟ್ಟಿರುವ ವಿವರಗಳು ಅಪೂರ್ಣವೇ ಸರಿ. ಹಾಗಿದ್ದರಿಂದಲೇ 'ಮುಂತಾದ ಕೆಲ ಪುಟಗಳು' ಎಂಬ ಶೀರ್ಷಿಕೆ ಕೊಡಲಾಗಿದೆ.

'ಇಡೀ ಇಂಡಿಯಾ ಹುಡುಕಿದರೂ ನಮ್ಮ ರಾಜವಾಡೆಯವರಂತೆ ವಿಶಿಷ್ಟ ಅನುಭವಗಳನ್ನು ಸೂರೆಗೊಂಡ ಲೇಖಕಿ ಸಿಗಲಿಕ್ಕಿಲ್ಲ, ಆಕೆ ಬದುಕಿನಲ್ಲಿ ಕಂಡುಂಡದ್ದನ್ನು ಸುಮ್ಮನೇ ಯಥಾವತ್ ದಾಖಲೆ ಮಾಡಿದರೂ ಸಾಕಿತ್ತು ಭಾರತೀಯ ಸಾಹಿತ್ಯಕ್ಕೆ ಒಂದು ಕೊಡುಗೆಯಾಗುತ್ತಿತ್ತು' ಎನ್ನುವ ವೈದೇಹಿಯವರ ಮಾತುಗಳು ಕೇವಲ ರಾಜವಾಡೆಯವರಿಗೆ ಮಾತ್ರ ಅನ್ವಯಿಸುವುದಿಲ್ಲ. ಇದು ಈ ರೀತಿಯ ಸಾವಿರಾರು 'ಅನಾಮಧೇಯ' ವ್ಯಕ್ತಿಗಳಿಗೂ ಸಂಬಂಧಿಸಿದ್ದೆ ಹೌದು. ಈಗಾಗಲೇ ವೈದೇಹಿಯವರು ಬಿ.ವಿ.ಕಾರಂತ ಹಾಗೂ ಕೋ.ಲ.ಕಾರಂತರ ಆತ್ಮಚರಿತ್ರೆಗಳನ್ನು ಅದ್ಭುತವಾಗಿ ನಿರೂಪಿಸಿದ್ದು, ಈ ನಿರೂಪಣೆಗೂ ಐತಿಹಾಸಿಕ-ಸಾಂಸ್ಕೃತಿಕ ಮಹತ್ವವಿದೆ. ಆದರೆ ಕಳೆದ ವರ್ಷ ಪ್ರಕಟವಾದ ಈ ಪುಸ್ತಕಕ್ಕೆ ವಿಮರ್ಶೆ ಬಂದಿದ್ದು- ಒಂದೆರಡು ಅಪವಾದಗಳನ್ನು ಹೊರತುಪಡಿಸಿ- ತುಂಬಾ ಕಡಿಮೆಯೇ. ಇದು ವಿಮರ್ಶೆಯ ವಿಸ್ಮೃತಿಯೇ ಎಂಬ ಪ್ರಶ್ನೆಯನ್ನೂ ನಾವು ಈ ಸಂದರ್ಭದಲ್ಲಿ ಕೇಳಿಕೊಳ್ಳಬಹುದು.

ಕೃತಿಯ ಮೊದಲನೆಯ ಭಾಗದಲ್ಲಿ ಸರಸ್ವತಿಯವರ ಜೀವನ ನಿರೂಪಣೆ ಇದ್ದರೆ, ಎರಡನೆಯ ಭಾಗದಲ್ಲಿ ಅವರ ಸೃಜನಶೀಲ ಕೃತಿಗಳು ದಾಖಲಾಗಿವೆ. ಕೆ.ವಿ. ಸುಬ್ಬಣ್ಣ ಬರೆದ ವ್ಯಕ್ತಿಚಿತ್ರ ಹಾಗೂ ಟಿ.ಪಿ.ಅಶೋಕರ ಬೆನ್ನುಡಿ ಕೃತಿಯ ಮೌಲ್ಯವನ್ನು ಹೆಚ್ಚಿಸಿದೆ.

● ಟಿ.ಅವಿನಾಶ್

ವಿಕ್ರಮ ವಿಸಾಜಿ




ಬೀದರ್ ಜಿಲ್ಲೆಯು ಆರ್ಥಿಕ ಅಭಿವೃದ್ಧಿಯ ವಿಷಯದಲ್ಲಿ ಹಿಂದುಳಿದಿರುವುದು ಎಲ್ಲರಿಗೂ ಗೊತ್ತಿರುವ ಸತ್ಯ. ಆದರೆ ಈ ಹಿಂದುಳಿಯುವಿಕೆ, ಆಧುನಿಕ ಕನ್ನಡ ಸಾಹಿತ್ಯದ ಮಟ್ಟಿಗೂ ಇದ್ದಂತಿದೆ. 'ಆಧುನಿಕ ಕನ್ನಡ ಸಾಹಿತ್ಯದ ಮಟ್ಟಿಗೆ' ಎಂಬ ಮಾತನ್ನು ಯಾಕೆ ಹೇಳಬೇಕಿದೆ ಎಂದರೆ, ಈ ಭಾಗದಲ್ಲಿ ಅಖಿಲ ಭಾರತ ಖ್ಯಾತಿಯ ಉರ್ದು ಲೇಖಕರಿದ್ದಾರೆ ಹಾಗೂ ದೊಡ್ಡ ಸಂಖ್ಯೆಯ ಜನಪದ ಕವಿಗಳಿದ್ದಾರೆ. ತತ್ವಪದಕಾರರಿದ್ದಾರೆ. ಜತೆಗೆ 12ನೇ ಶತಮಾನದಲ್ಲಿ ನೂರಾರು ಶರಣರು ಸಾಹಿತ್ಯ ರಚನೆ ಮಾಡಿದ ಸೀಮೆಯಿದು. ಹೀಗಿದ್ದೂ ಆಧುನಿಕ ಕನ್ನಡ ಸಾಹಿತ್ಯದ ವಿಷಯದಲ್ಲಿ ಬಡಕಲುತನವಿರಲು ಏನು ಕಾರಣ? ಬಹುಶಃ ಈ ಸೀಮೆ ವಸಾಹತುಶಾಹಿ ಆಧುನಿಕತೆಗೆ ಬಹಳ ತಡವಾಗಿ ತೆರೆದುಕೊಂಡಿದ್ದು ಇರಬಹುದು; ಆಧುನಿಕ ಸಾಹಿತ್ಯದ ಚಟುವಟಿಕೆಗೆ ತಳಹದಿಯಂತಿರುವ ಮಧ್ಯಮವರ್ಗವೊಂದು ದೊಡ್ಡ ಪ್ರಮಾಣದಲ್ಲಿ ರೂಪುಗೊಂಡಿಲ್ಲದೆ ಇರುವುದು ಇರಬಹುದು. ಒಂದೆಡೆ ಮಹಾರಾಷ್ಟ್ರವೂ ಮತ್ತೊಂದೆಡೆ ಆಂಧ್ರಪ್ರದೇಶವೂ ತಮ್ಮ ಬಗಲಲ್ಲಿ ಹಿಡಿದುಕೊಂಡಂತಿರುವ ಭಾಷಿಕ ಮತ್ತು ಭೌಗೋಳಿಕ ಸನ್ನಿವೇಶವಿರಬಹುದು. ನಿಜಾಮರ ಆಳ್ವಿಕೆ ಕಾಲದಲ್ಲಿ ಹೇರಿಕೆಯಾಗಿದ್ದ ಉರ್ದು ಕೂಡ ಕಾರಣವಿರಬಹುದು. ಆದರೆ ಬಹುತೇಕ ಇವೇ ಚಾರಿತ್ರಿಕ ಹಿನ್ನೆಲೆಯುಳ್ಳ ಗುಲಬರ್ಗಾ ರಾಯಚೂರು ಭಾಗಗಳಲ್ಲಿ ಅನೇಕ ಲೇಖಕರು ಮೂಡಿಬಂದರು ಎಂಬುದನ್ನು ನೆನೆದರೆ, ಮತ್ತಿನ್ನೇನೊ ಕಾರಣವಿರಬಹುದು. ಲೇಖಕರಾದ ವಿಕ್ರಮ ವಿಸಾಜಿ (1976) ಇಂತಹ ವಿಶಿಷ್ಟ ಪ್ರದೇಶದಿಂದ ಬಂದವರು.

ವಿಶೇಷವೆಂದರೆ, ಸದ್ಯ 33 ವರ್ಷ ಪ್ರಾಯವುಳ್ಳ ವಿಕ್ರಂ, ಕಳೆದ ಎರಡು ದಶಕಗಳಿಂದ ಬರವಣಿಗೆ ಮಾಡುತ್ತಿರುವ ಲೇಖಕರು! ಬಾಲಕವಿಯಾಗಿ ತಮ್ಮ 12ನೇ ವಯಸ್ಸಿನಲ್ಲೇ 'ಗಾಳಿಪಟ' ಎಂಬ ಕವನಸಂಕಲನವನ್ನು ಪ್ರಕಟಿಸಿದ್ದೇ ಅವರ ಈ 'ಸುದೀರ್ಘ' ಸಾಹಿತ್ಯ ಸೇವೆಗೆ ಕಾರಣ. ಅವರ ಸಾಹಿತ್ಯದ ಓದು-ಬರೆಹಗಳಿಗೆ ಗುರು ಅವರ ತಂದೆ ಜಿ.ಬಿ. ವಿಸಾಜಿಯವರು. ಇದನ್ನು ವಿಕ್ರಂ ತಮ್ಮ ಕೃತಿಯೊಂದರ ಅರ್ಪಣೆಯಲ್ಲಿ "ತನ್ನ ಜಿಲ್ಲೆಯನ್ನೇ ತನ್ನ ಜಗತ್ತೆಂದು ಭಾವಿಸಿ ಅಲ್ಲಿನ ಊರು-ಕೇರಿ ಸಂತೆಯಲ್ಲಿ ಸಾಹಿತ್ಯದ ಪ್ರೀತಿ ಉಕ್ಕಿಸಿದ ಅಪ್ಪನಿಗೆ" ಎಂದು ಕೃತಜ್ಞತೆಯಿಂದ ಸ್ಮರಿಸಿಕೊಂಡೂ ಇದ್ದಾರೆ. ಕನ್ನಡ ಅಧ್ಯಾಪಕರೂ ಸ್ವತಃ ಲೇಖಕರೂ ಆದ ಜಿ.ಬಿ. ವಿಸಾಜಿಯವರು ತಮ್ಮ ಭಾಷಣ ಮತ್ತು ಬರೆಹಗಳಿಂದ ಭಾಲ್ಕಿಯಂತಹ ಪ್ರದೇಶದಲ್ಲಿ ಸಾಹಿತ್ಯಕ ಪರಿಸರ ನಿರ್ಮಿಸಿದವರು.

ವಿಕ್ರಂ ಮುಖ್ಯವಾಗಿ ಕಾವ್ಯ ವಿಮರ್ಶೆ ಮತ್ತು ಅನುವಾದ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಆಧುನಿಕ ಗ್ರೀಕ್ ಕಾವ್ಯವನ್ನು ಅವರು ವಿಜಯಾ ಗುತ್ತಲ ಅವರ ಜತೆಗೂಡಿ ಅನುವಾದ ಮಾಡಿದರು. ಕನ್ನಡಕ್ಕೆ ಹಾಗೆ ಹೆಚ್ಚು ಒಡನಾಟವಿಲ್ಲದ ಭಾಷೆಯೊಂದರ ಕಾವ್ಯವನ್ನು ತಂದಿದಕ್ಕಾಗಿ ಈ ಇಬ್ಬರನ್ನೂ ಅಭಿನಂದಿಸಬೇಕು. ಆದರೆ ಇಲ್ಲಿನ ಅನುವಾದಗಳಲ್ಲಿ ಅರ್ಥನಿಷ್ಠೆ ಹೆಚ್ಚಾಗಿಯೊ ಏನೊ, ಕನ್ನಡ ಕವನದಲ್ಲಿರುವ ಸಹಜ ಲಯಗಳು ಕಡಿಮೆಯಾಗಿವೆ. ಕೆಲವು ಕಡೆ ಗ್ರೀಕಿನ ಸಾಂಸ್ಕೃತಿಕ ಪರಕೀಯತನವೂ ಉಳಿದುಬಿಟ್ಟಿದೆ. ವಿಕ್ರಂ ಅವರ ನಿಜವಾದ ಕಸುವು ಪ್ರಕಟವಾಗಿರುವುದು ಅವರ ಕಾವ್ಯ ಮತ್ತು ವಿಮರ್ಶೆಯಲ್ಲಿ. ಅವರ ಎರಡನೇ ಕವನ ಸಂಕಲನವಾದ 'ತಮಾಶಾ'ದಲ್ಲಿ (2000) ತಾರುಣ್ಯ ಸಹಜವಾದ ಪ್ರೇಮ ಕಾಮಗಳಿಗೆ ಅಭಿವ್ಯಕ್ತಿ ಸಿಕ್ಕಿದೆ; ಇಲ್ಲಿರುವ ತೀವ್ರತೆ, ಪ್ರಾಮಾಣಿಕತೆ ಮತ್ತು ಶ್ಲೀಲಾಶ್ಲೀಲದ ಹಂಗಿಲ್ಲದ ವ್ಯಾಮೋಹ ಪ್ರಿಯವಾಗುತ್ತದೆ. ಉದಾಹರಣೆಗೆ, 'ತಮಾಶಾ'ದಲ್ಲಿ ಕುಣಿಯುವ ಹುಡುಗಿಯನ್ನು ಕುರಿತು ಇರುವ ಇಲ್ಲಿನ ಕವನ. ಕಂಬಾರರ ಕಾವ್ಯವು ಹೆಣ್ಣನ್ನು ಗಂಡಸರು ಅನುಭವಿಸುವ ಒಂದು ವಸ್ತುವಂತೆ ಚಿತ್ರಿಸುವುದನ್ನು ಮುಂದೆ ವಿಕ್ರಂ ತಮ್ಮ ವಿಮರ್ಶೆಯಲ್ಲಿ ಕಟುವಾಗಿ ವಿಶ್ಲೇಷಿಸಿರುವುದುಂಟು. ಆದರೆ, ಸ್ವತಃ ಅವರ ಕಾವ್ಯದ ಮೊದಲ ಘಟ್ಟ ಶುರುವಾಗಿದ್ದು ಮಾತ್ರ ಇದೇ ಕಂಬಾರರ ಪ್ರೇರಣೆಯಿಂದ; ಅದರಲ್ಲೂ ಕಂಬಾರರ 'ಋಷ್ಯಶೃಂಗ'ದಂತಹ 'ನೀಲಿ' ಕವನಗಳಿಂದ.

'ತಮಾಶಾ' ಸಂಕಲನದಲ್ಲಿ ಅನೇಕ ಒಳ್ಳೆಯ ಕವನಗಳಿವೆ. ಜೀವನಪ್ರೀತಿ ಮತ್ತು ಲವಲವಿಕೆ ಇಲ್ಲಿನ ಕವನಗಳ ಮುಖ್ಯ ಗುಣ. ಸೊಕ್ಕಿನಿಂದ ಮುಸುಗುಡುವ ಇಲ್ಲಿನ ಕವನಗಳಲ್ಲಿ ತಾರುಣ್ಯ ಸಹಜವಾದ ಸ್ವಚ್ಛಂದ ನೋಟಗಳಿವೆ. ಚರಿತ್ರೆಯ ಹಲವಾರು ಪ್ರೇಮಿಗಳ ಬಾಳನ್ನು ಕಟ್ಟಿದ ಕಥನಗಳಿವೆ. ಆದರೆ ಇಲ್ಲಿನ ಕಾವ್ಯದಲ್ಲಿ ದೊಡ್ಡ ಧ್ಯಾನವಾಗಲಿ ಜೀವನ ಕಾಣ್ಕೆಯ ಗರಜಾಗಲಿ ಕಡಿಮೆ. ಇದಕ್ಕೆ ಹೋಲಿಸಿದರೆ ಈಚೆಗೆ ಹೊರಬಂದಿರುವ 'ಗೂಡು ಕಟ್ಟುವ ಚಿತ್ರ' (2006) ಸಂಕಲನವು ವಿಕ್ರಂ ಕಾವ್ಯ ಪಡೆದಿರುವ ಎತ್ತರವನ್ನು ಸೂಚಿಸುತ್ತದೆ. ಮೊದಲ ಘಟ್ಟದಲ್ಲಿ ಕಾಣುವ ಕಂಬಾರರಂತಹ ದೊಡ್ಡಕವಿಗಳ ಢಾಳಾದ ಪ್ರಭಾವದಿಂದ ಬಿಡಿಸಿಕೊಂಡು, ತಮ್ಮದೇ ಆದ ನುಡಿಗಟ್ಟನ್ನು ಕವಿ ಇಲ್ಲಿ ಕಂಡುಕೊಂಡಿದ್ದಾರೆ. ಇಲ್ಲಿ ಫ್ರೆಶ್‌ಆದ ಶಬ್ದಚಿತ್ರಗಳು ಇಲ್ಲಿವೆ. ಆರ್ತತೆ ಮತ್ತು ಧ್ಯಾನವುಳ್ಳ ಇಲ್ಲಿನ ಕಾವ್ಯದಲ್ಲಿ ತನ್ನತನದ ಹುಡುಕಾಟವಿದೆ. ಲೋಕದ ನೋವಿಗೆ ಗೈದ ಮಿಡಿತವಿದೆ. ಮತೀಯ ಹಿಂಸೆಯನ್ನು ಕುರಿತ ಪ್ರತಿರೋಧವು ಚೂಪಾದ ವ್ಯಂಗ್ಯ ಮತ್ತು ವಿಷಾದಗಳಲ್ಲಿ ವ್ಯಕ್ತವಾಗಿದೆ.



ಈ ಸಂಕಲನದಲ್ಲಿ ಕವನದ ಸ್ವರೂಪವನ್ನು ಕುರಿತ ಕವನಗಳು ವಿಶೇಷವಾಗಿವೆ. ಕವಿಗೆ ಸೃಷ್ಟಿಶೀಲತೆಯಲ್ಲಿ ಶಬ್ದ ಅಥವಾ ಭಾಷೆಯ ಮಾಯೆಯು ವಿಸ್ಮಯದಂತೆ ಕಾಡಿದೆ. ಆದರೆ ಇಲ್ಲಿ ಯಾಕೊ, ಆಡುನುಡಿಯನ್ನು ಬಳಸಿ ಬರೆದಿರುವ ಕವನಗಳು, 'ಶಿಷ್ಟ' ಭಾಷೆಯನ್ನು ಬಳಸಿ ಕಟ್ಟಿರುವ ಕವನಗಳಂತೆ ಅರ್ಥಪೂರ್ಣವಾಗಿಲ್ಲ. ಇದು ಆಡುನುಡಿಯನ್ನು ಸೂಕ್ಷ್ಮ ಚಿಂತನೆಯ ಧಾರಣೆಗೆ ತಕ್ಕಂತೆ ಪಳಗಿಸಲಾಗದ ಕವಿಕರ್ಮದ ಸೋಲೊ, ಈ ಆಡುಭಾಷೆಗೇ ಆಧುನಿಕ ಚಿಂತನೆಯನ್ನು ಹೊರಲಾಗದ ಮಿತಿಯಿದೆಯೊ ಅಥವಾ ಕಾವ್ಯಭಾಷೆ ಕುರಿತು ಓದುಗರಾಗಿ ನಮ್ಮ ಗ್ರಹಿಕೆಗಳಲ್ಲೇ ಇರುವ ಸಮಸ್ಯೆಯೊ ಗೊತ್ತಾಗುತ್ತಿಲ್ಲ. ಕಂಬಾರರು ಜಾನಪದೀಯ ನಟನೆಯ ಭಾಷೆಯಲ್ಲಿ ಅತಿ ಆಧುನಿಕವಾದದ್ದನ್ನು ಹೇಳಲು ಮಾಡಿಕೊಂಡಿರುವ ತಂತ್ರಗಾರಿಕೆಯು, ಹಾಗೆ ಅನುಕರಣೆ ಮಾಡುವುದು ಸುಲಭವಲ್ಲ.

ತುಂಬ ಕಿರಿಯ ವಯಸ್ಸಿನಲ್ಲಿ ವಿಶ್ವವಿದ್ಯಾಲಯಕ್ಕೆ ಸೇರಿದ ವಿಕ್ರಂ, ತಮ್ಮ ಅಧ್ಯಯನಶೀಲತೆಯಿಂದ ಬೆಳೆದವರು; ನಮ್ಮ ವಿಶ್ವವಿದ್ಯಾಲಯಗಳು ವಿದ್ವತ್‌ಹೀನತೆಯಿಂದ ನರಳುತ್ತಿರುವ ಈ ದಿನಗಳಲ್ಲಿ, ನಿಸ್ಸಂಶಯವಾಗಿ ಅವರೊಬ್ಬ ವಿದ್ವತ್ ಪರಂಪರೆಯ ಅಧ್ಯಾಪಕರಲ್ಲಿ ಒಬ್ಬರು. ವಿಶ್ವವಿದ್ಯಾಲಯಗಳು ಸಹಜವಾಗಿಯೇ ವಿಶ್ಲೇಷಣಾತ್ಮಕವಾದ ಬೌದ್ಧಿಕ ಬರೆಹಗಳನ್ನು ಮಾಡಲು ಒತ್ತಾಯಿಸುತ್ತವೆ. ಹೀಗಾಗಿ ಕವಿತೆಯನ್ನೇ ತನ್ನ ಅಭಿವ್ಯಕ್ತಿಯ ಮುಖ್ಯ ಪ್ರಕಾರವಾಗಿಸಿಕೊಂಡಿದ್ದ ಈ ಕವಿ, ವಿಮರ್ಶೆಯನ್ನೂ ಬರೆಯಬೇಕಾಗಿ ಬಂದಿರಬಹುದು. ಆದರೆ ಈ ಪ್ರಕಾರದಲ್ಲಿಯೂ ಅವರು ತಮ್ಮ ಚಹರೆ ರೂಪುಗೊಳ್ಳುವಂತಹ ಬರೆಹವನ್ನು ಮಾಡುತ್ತಿದ್ದಾರೆ. ಇದಕ್ಕೆ ಸಾಕ್ಷಿ, ಅವರ 'ಬೆಳಕಿನ ಮುಖ' (2004) ಎಂಬ ವಿಮರ್ಶಾ ಸಂಕಲನ. ಇದರಲ್ಲಿ 'ಬೀದರ ಜಿಲ್ಲೆಯ ಕಾದಂಬರಿಗಳು' ಮುಂತಾದ ಅತಿಸಾಮಾನ್ಯ ಮಟ್ಟದ ಲೇಖನಗಳೂ ಇವೆ. ಆದರೆ ಇಲ್ಲಿರುವ ಕಂಬಾರ ಮತ್ತು ಕಾರ್ನಾಡರ ನಾಟಕಗಳನ್ನು ಕುರಿತ ಹಾಗೂ ಕುರ್ತಕೋಟಿಯವರ ವಿಮರ್ಶೆ ಕುರಿತ ಲೇಖನಗಳು ಚೆನ್ನಾಗಿವೆ. ತಮ್ಮ ವಿಮರ್ಶೆಗಾಗಿ ದೊಡ್ಡದೊಡ್ಡ ಲೇಖಕರನ್ನೇ ತಡವಿಕೊಂಡು ಕುಸ್ತಿ ಹಿಡಿಯುವ ಹವ್ಯಾಸವೊಂದು ವಿಕ್ರಂ ಅವರಲ್ಲಿದ್ದಂತಿದೆ. ಈ ಕುಸ್ತಿಯಾಟಕ್ಕೆ ಬೇಕಾದ ಶಕ್ತಿಯನ್ನು ಅವರು ಮತ್ತಷ್ಟು ಪಡೆದುಕೊಳ್ಳಬೇಕಿದೆ. ಆದರೆ ಪರಂಪರೆಯಿಂದ ತ್ರಾಣವನ್ನು ಪಡೆದುಕೊಳ್ಳುವ ಬಗ್ಗೆ ಅವರಲ್ಲಿರುವ ಅಪಾರ ಶ್ರದ್ಧೆಯು ಅವರನ್ನು ಎಡವದಂತೆ ನಡೆಸುತ್ತಿದೆ. ಇದಕ್ಕೆ ಕುರ್ತಕೋಟಿಯವರ ವಿಮರ್ಶೆಯ ಮೇಲಿರುವ ಒಂದು ಲೇಖನ ಸಾಕ್ಷಿ. ಇದು ವಿಕ್ರಂ ಅವರ ಸಮತೋಲನ ಗುಣ ಮತ್ತು ಪ್ರಬುದ್ಧತೆ ಎರಡನ್ನೂ ಸೂಚಿಸುತ್ತದೆ. ಅವರು ತಾವು ವಿಮರ್ಶಿಸುವ ಲೇಖಕರ ಶಕ್ತಿಸ್ಥಳಗಳನ್ನು ಗುರುತಿಸುವ ಸಹೃದಯತೆಯನ್ನು ತೋರಬಲ್ಲರು. ಅದೇ ಹೊತ್ತಲ್ಲಿ, ಅವರ ಮಿತಿಗಳನ್ನು ನಮ್ರವಾಗಿ ಆದರೆ ಖಚಿತವಾಗಿ ಸೂಚಿಸಬಲ್ಲರು. ಒಮ್ಮೊಮ್ಮೆ ಈ ನಮ್ರತೆ ಮತ್ತು ಸಮತೋಲನ ಮಾಡುವ ಎಚ್ಚರಗಳು, ಕೊಂಚ ಹೆಚ್ಚಾಗಿ, ವಿಮರ್ಶೆಯಲ್ಲಿ ತೀರ್ಮಾನದಾಯಕವಾದ ಹೇಳಿಕೆಗಳನ್ನು ಮಾಡಲು ತೊಡಕನ್ನು ಒಡ್ಡಿರುವುದೂ ಉಂಟು.

ವಿಕ್ರಂ ವಿಮರ್ಶೆಯಲ್ಲಿ ಇಷ್ಟವಾಗುವುದು ರೂಪಕದ ಭಾಷೆಯ ಬಳಕೆ. ಪ್ರಾಚೀನ ಸಾಹಿತ್ಯ ಕುರಿತು ಕುರ್ತಕೋಟಿಯವರ ವಿಮರ್ಶೆ, ಅವರಿಗೆ "ಮನೆಯ ಹಿಂದಿನ ಕಾಡನನ್ನು ಕಾಣಲು ಬಿಟ್ಟ ಕಿಂಡಿಯ ತರಹ" ಕಾಣುತ್ತದೆ; ಇದೇ ಕುರ್ತಕೋಟಿಯವರ ಬಗ್ಗೆ ಅವರು ಹೀಗೆ ಬರೆಯುತ್ತಾರೆ: "ಕುರ್ತಕೋಟಿಯವರು 'ಆದಿಪುರಾಣ'ದ ಪುರುದೇವನಂತೆ. ಪ್ರಾಚೀನ ಮಹಾಕಾವ್ಯಗಳ ಓದು ಅವರಿಗೆ ನೀಲಾಂಜನೆಯ ನೃತ್ಯ. ನೀಲಾಂಜನೆಯ ಸಾವು ಪುರುದೇವನಿಗೆ ಗೊತ್ತಾದಂತೆ, ಕೃತಿಯಲ್ಲಿನ ವಾಗರ್ಥಗಳ ಹುಸಿಸಂಬಂಧ ಅವರಿಗೆ ಥಟ್ಟನೆ ಗೋಚರಿಸುತ್ತದೆ... ವಿಚಿತ್ರವೆಂದರೆ, ನೀಲಾಂಜನೆಯ ಸಾವಿನಿಂದ ಪುರುದೇವನಿಗೆ ಅತಿಶಯ ಭೋಗದಲ್ಲಿ ವಿರಕ್ತಿ ಹುಟ್ಟಿದರೆ, ಇವರಿಗೆ ತಮ್ಮ ನಂಬಿಕೆಯ ಬಗೆಗೆ ವಿಶ್ವಾಸ ವೃದ್ಧಿಸುತ್ತದೆ"; ಡಿ.ಆರ್. ನಾಗರಾಜ್ ಅವರ ಕುರಿತ ವ್ಯಾಖ್ಯಾನವಿದು: "ಅವರ ಬರವಣಿಗೆಯ ಉದ್ದಕ್ಕೂ ನನಗೆ ಕಾಣುವುದು ಪಡ್ಡೆ ಹುಡುಗನ ಉತ್ಸಾಹ ಮತ್ತು ಮಾಗಿದ ನಾಟಿವೈದ್ಯನಿಗೆ ತನ್ನ ಕೆಲಸದ ಬಗ್ಗೆ ಇರುವ ಗಾಢ ನಂಬಿಕೆ, ಶ್ರದ್ಧೆ."

ವಿಕ್ರಂ ಬಾಲ್ಯದಲ್ಲೇ ತಮ್ಮನ್ನು ಅತಿಯಾಗಿ ಆವರಿಸಿಕೊಂಡಿದ್ದ ಕಂಬಾರರ ಕಾವ್ಯದ ಮೇಲೆ ಮುಂದೆ ಸಂಶೋಧನೆ ಮಾಡಿದರು. 'ನಾದಗಳು ನುಡಿಯಾಗಲಿ' (2008) ಎಂಬ ಹೆಸರಲ್ಲಿ ಇದು ಪ್ರಕಟವಾಗಿದೆ. ಕಂಬಾರರ ಕಾವ್ಯದ ಪ್ರಖರತೆ, ವಿಶಿಷ್ಟತೆ ಹಾಗೂ ಅಲೌಕಿಕ ಸೆಳತಗಳನ್ನು ಕಂಡು ಪಟ್ಟಿರು ಬೆರಗು ಇಲ್ಲಿನ ವಿಶ್ಲೇಷಣೆಯಲ್ಲಿದೆ. ಜತೆಗೆ ಕಂಬಾರ ಕಾವ್ಯದ ವಿಷಯದಲ್ಲಿ ಅನೇಕ ದಿಟ್ಟವಾದ ಪ್ರಶ್ನೆಗಳನ್ ಅವರು ಎತ್ತುತ್ತಾರೆ. ವಿಕ್ರಂ ತಮ್ಮ ಕೆಲಸವನ್ನು ಬಹ ಗಂಭೀರವಾಗಿಯೂ ಪಾಂಡಿತ್ಯಪೂರ್ಣವಾಗಿಯೂ ಮಾಡಿದ್ದಾರೆ. ಆದರೂ ಪಿಎಚ್‌ಡಿ. ಸಂಶೋಧನೆಯ ವಿನ್ಯಾಸವೇ ಒಂದು ಬಗೆಯಲ್ಲಿ ಕೃತಕ ಗಾಂಭೀರ್ಯದಿಂದ ಕೂಡಿದ್ದು; ಉಲ್ಲೇಖಗಳ ಭಾರದಿಂದ ಅದು ಜಡವಾಗಿರು ತ್ತದೆ; ವಿಮರ್ಶಾ ಲೇಖನಗಳ ಹಾಗೆ ಒಳನೋಟಗಳನ್ ಒಂದು ಫೋಕಸ್ಸಿನಲ್ಲಿ ಮಂದಿಸಲು ಅದು ಅಷ್ಟಾ ಅವಕಾಶ ಕೊಡುವುದಿಲ್ಲ. ಇದಕ್ಕೆ ಸಾಕ್ಷಿ, 'ಚಕೋರಿ'ಯ ಆಶಯವನ್ನು ಎಳೆಎಳೆಯಾಗಿ ವಿಶ್ಲೇಷಿಸಿರುವ ಲೇಖಕರಿಗೆ ಅಂತಿಮವಾಗಿ ಅದು ಜೀವಂತವಾದ ಕೃತಿಯೊ ಅಲ್ಲವೊ ಎಂದು ಹೇಳಲು ಸಾಧ್ಯವಾಗಿಲ್ಲದೆ ಇರುವುದು. ಹೀಗಾಗಿಯೇ, ಚದುರಿದ ಚಿಂತನೆಗಳಿರುವ ಇಂತಹ ಸಂಶೋಧನ ಕೃತಿಗಿಂತ, ವಿಕ್ರಂ ತಮ್ಮ ಚಿಕ್ಕಪುಟ ವಿಮರ್ಶಾ ಲೇಖನಗಳಲ್ಲೇ ಹೆಚ್ಚು ಚುರುಕಾಗಿ ಮತ ಅರ್ಥಪೂರ್ಣವಾಗಿ ಕಾಣುತ್ತಾರೆ. ಉದಾಹರಣೆಗೆ 'ಕಂಬಾರರ ನಾಟಕಗಳು' ಪುಸ್ತಕಕ್ಕೆ ಅವರು ಸಂಪಾದಕರಾ ಬರೆದಿರುವ ಮುನ್ನುಡಿ; ವಿಭಾ ಕವನ ಸಂಕಲನ ಬರೆದಿರುವ ಸಂಪಾದಕೀಯ ಹಿನ್ನುಡಿ; ಕುರ್ತಕೋ ವಿಮರ್ಶೆ ಬಗ್ಗೆ ಬರೆದ ಲೇಖನ; ಗ್ರೀಕ್ ಕಾವ್ಯಾನುವಾದ ಬರೆದಿರುವ ಉಪೋದ್ಘಾತ-ಇವೆಲ್ಲವೂ ವಿಕ್ರಂ ಅವ ಅಧ್ಯಯನಶೀಲತೆಯನ್ನು ಮಾತ್ರವಲ್ಲ, ಅವರೊಳ ತುಡಿಯುತ್ತಿರುವ ಸೂಕ್ಷ್ಮವಾದ ಸಾಹಿತ್ಯಕ ಸಂವೇದ ಮತ್ತು ವಿಮರ್ಶಾ ವಿವೇಕವನ್ನು ಒಳಗೊಂಡಿವೆ.

ತಮ್ಮ ಸರಳತೆ, ಹಾಸ್ಯಪ್ರಜ್ಞೆ ಹಾಗೂ ಸಜ್ಜನಿಕೆಯ ವ್ಯಕ್ತಿತ್ವದಿಂದ ಬಹಳ ಜನರ ಪ್ರೀತಿಗೂ, ವಿಶ್ವಾಸ ಪಾತ್ರರಾಗಿರುವ ಹೊಸತಲೆಮಾರಿನ ಲೇಖಕರಲ್ಲಿ ವಿಕ್ರ ಒಬ್ಬರು. ವಿಶೇಷವೆಂದರೆ, ಹಿರಿಯ ಲೇಖಕರನ್ನು ಅನ ಸಂಧಾನ ಮಾಡುವಾಗ, ಅವರು ತಾವು ಮತ್ತು ತಮ ವಾರಿಗೆಯ ಲೇಖಕರು ಎದುರಿಸಬೇಕಾದ ಸವಾಲನ ಕುರಿತು ಪ್ರಸ್ತಾಪ ಮಾಡುವುದು; ಅದರಲ್ಲೂ ಪರಂಪರೆಯ ಶ್ರದ್ಧೆ ಮತ್ತು ಅದನ್ನು ಮೀರುವ ಅನಿವಾರ್ಯತೆ ಕುರಿತ ಚರ್ಚಿಸುವುದು. ಇದು ಅವರಲ್ಲಿನ ಹೊಣೆಗಾರಿಕೆಯ ಸಂಕೇತವಾಗಿದೆ. ಆದರೆ 'ಹೊಸತಲೆಮಾರಿನ ಲೇಖಕರಿ ಯಾವುದೇ ಸಿದ್ಧಾಂತ ತತ್ವಗಳ ಹಂಗಿಲ್ಲ, ಮುಕ್ತವಾ ಬರೆಯುತ್ತಿದ್ದೇವೆ' ಎಂಬರ್ಥದ ಅವರ ಹೇಳಿ ಚರ್ಚಾಸ್ಪದವಾದುದು. ವಾಸ್ತವದಲ್ಲಿ ಬರೆಹವೊಂದ ಹಾಗಿರಲು ಸಾಧ್ಯವೇ? ಅವರಿಗೆ ಪ್ರಿಯವಾದ ಲೇಖ ರಾದರೂ ಇಂತಹ ತತ್ವಸಿದ್ಧಾಂತಗಳಿಂದ ಪೂಣ ಹೊರತಾದವರಲ್ಲ, ಅದನ್ನು ತಮ್ಮ ಸೃಜನಶೀಲತೆಯ ಆಳದಲ್ಲಿ ಮರುಹುಟ್ಟಿಸಿದವರು, ಅಷ್ಟೆ.

ವಿಕ್ರಂ ಬರೆಹದಲ್ಲಿ ವಿನಯ ಮತ್ತು ನಿಷ್ಠುರತೆಗ ಒಂದು ಅಪೂರ್ವ ಹದವಿದೆ. ಪರಂಪರೆಯ ದೊ ಮಟ್ಟದ ಕೃತಿಗಳಲ್ಲಿ ತನಗೆ ಅರಿವಾಗದ್ದು ಇನ್ನೂ ಎಷ ಉಳಿದಿದೆ ಎಂಬ ಪ್ರಜ್ಞೆಯು ವಿನಯಕ್ಕೆ ಕಾರಣವಾಗಿದ್ದ ತನ್ನ ಎದುರಿಗಿರುವ ಸಮಕಾಲೀನ ವಾಸ್ತವಕ್ಕೆ ಜೀವಂತವಾ ಮಿಡಿಯಬೇಕು, ಒಂದು ಘಟನೆ ಅಥವಾ ಕೃತಿಯ ಬಗ್ಗೆ ಅನಿಸಿದ್ದನ್ನು ಪ್ರಾಮಾಣಿಕವಾಗಿ ಹೇಳಬೇಕು ಎಂ ಅವರ ನಿಲುವು ನಿಷ್ಠುರತೆಗೆ ಕಾರಣವಾಗಿದೆ. "ಒ ಲೇಖಕ ಎಷ್ಟು ಚಂದದ ರೂಪಕ, ಪ್ರತಿಮೆಗಳನ್ ಸೃಷ್ಟಿಸುತ್ತಿದ್ದಾನೆಂಬುದಷ್ಟೇ ಮುಖ್ಯವಲ್ಲ. ಅಂತಿಮವಾ ಈ ರೂಪಕ ಪ್ರತಿಮೆಗಳು ಮನುಷ್ಯ ಜನಾಂಗದ ಯಾ ಸತ್ಯವನ್ನು ಸಾರುತ್ತಿವೆ ಎಂಬುದು ಕೂಡ ಮುಖ ಎಂದು ಅವರು ಒಂದೆಡೆ ಹೇಳುವುದುಂಟು. ನಂಬಿಕೆಯು, ಕಲಾತ್ಮಕ ಸಾಧನೆಯ ಆಚೆ ಹೋ ಬರೆಹಗಾರರು, ಜೀವನದ ಬಗ್ಗೆ ಲೇಖಕರು ಮಾನವೀ ಹೊಣೆಗಾರಿಕೆಯ ದ್ಯೋತಕವಾಗಿದೆ. ಈ ನಂಬಿಕೆಯ ವಿಕ್ರಮ ಬರೆಹದಲ್ಲಿ, ಅದರಲ್ಲೂ ಅವರ ಈಚ ಕಾವ್ಯದಲ್ಲಿ, ಓದುಗರೆದೆಗೆ ನೇರವಾಗಿ ಹಾಯುವ ದಟ್ಟವಾಗಿದೆ.



ಬೆಳಕು ಸಿಗದವರು

ಕತ್ತಲಿನ ಗೂಡಿನೊಳಗಿದ್ದೆವು,
ಯಾರೋ ಎಬ್ಬಿಸಿದರು
ಬಹುದೂರ ಬೆಳಕಿನೆಡೆಗೆ
ನಡೆವಂತೆ ಹೇಳಿದರು.

ಬೆಳಕು ದೂರದಲ್ಲಿದೆ, ಹಿಂಬಾಲಿಸಿ,
ತೋರಿಸಲಾಗುವುದು ಎಂದರು,
ಬೆಳಕು ಕಾಣುವುದೇ ಜನರ
ಧರ್ಮ ಎಂದರು
ಹಿಂದೆ ಹಿಂದೆ ನಡೆದೆವು

ಮುಂದೆ ಮುಂದೆ ಹೋದರು

ಕ್ರಮೇಣ ಗಾಬರಿಯಾದರು
ಸಂತೆಯಲ್ಲೆಲ್ಲೋ ಕಳೆದುಕೊಂಡವರಂತೆ,
ಹುಡುಕಾಟಕೆ ಬಿದ್ದರು
ನಾವೂ ಜತೆ ಜತೆಗೆ ಹುಡುಕುತ್ತ
ನಡೆದೆವು, ಇನ್ನಾರೋ ಸಿಕ್ಕರು.

ಬೆಳಕನು ತಾವು ತೋರಿಸುವೆವೆಂದರು,
ಕಳೆದುಕೊಂಡವರಂತೆ ಅವರೂ
ಹುಡುಕಾಟ ನಡೆಸಿದರು

ಹಾಗೇ ಸೇರುತ ಒಬ್ಬೊಬ್ಬರೂ
ಹಿಂಡು ದಂಡಾದರು.

ಕೆಲವರು ಸಿಕ್ಕಿದ್ದೇ ಬೆಳಕೆಂದರು
ಈ ಬೆಳಕೇ ಸತ್ಯವೆಂದರು
ಒಬ್ಬರಲ್ಲೊಬ್ಬರು ಸತ್ಯಕಾಗಿ
ಕಾದಾಡಿದರು
ಬೆಳಕಿಗಾಗಿ ಬೆಂಕಿಯಾದರು.

ನಾವು ಈಗಲೂ ಬೆಳಕು ಸಿಗದವರು.

● ಗಣೇಶ ಹೊಸ್ಮನ

"ಬಳ್ಳಾರಿ ಬಡ್ಡಿಮಕ್ಕಳಾವುಳಿ ಜಾಸ್ತಿಯಾಯ್ತು ಕಂಡ್ರ"

ಕಾಳಮಾವ ತಪ್ಪಿಸಿಕೊಂಡಿರುವ ದಾರಿತಪ್ಪಿದ ...ನ್ನು ವಿಚಾರಿಸುವಂತೆ

"ಈ ವಾಟಿಸ್ನೆ ಎಲ್ಲಿ ಕಾಣ್ತಾಯಿಲವಲ್ಲಾ. ಆಲೆ ಮೂರು ...ಯ್ತು ನೋಡಿ" ಎಂದ.

"ಅವನು ಎಮ್ಮೆಲ್ಸಿ ಯಲಕ್ಷನ್ನಿಗೆ ನಿಂತೋರ್ ...ಗಂಡೋಗ್ಯವುನೆ ಕಣ ಮಾವ. ಆ ಯಲಕ್ಷನ್ ...ಯವರಿಗೂ ಇತ್ತಗೆ ತಲೆ ಹಾಕದಿಲ್ಲವೇನೊ" ಎಂದ

...ಓ. ಅಂಗರೆ ಮಿಕದ ಮ್ಯಾಲೆ ಬದ್ದವುನೆ ಬುಡು."

...ವುನ ಮಾತ ಕೇಳಿ ಅದ್ಯಾರು ಓಟು ಕೊಡ್ತರ್ಲ?" ...ಳು ಜುಮ್ಮಿ.

...ನ್ನ ಓಟಿಗೆ ಈಗಾಗ್ಲೆ ಅವುನು ಅಡ್ವಾನ್ಸ್ ...ರಬವುದು ಕಣೇ."

ಕಟ್ಟೆಪುರಾಣ

ಯಲು ಸೀ ಮೆ

▶ ಬಿ. ಚಂದ್ರೇಗೌಡ

...ಂಥೊನೆ ಬುಡುವುನು. ಅವುನೇಳಿದೋರಿಗೆ ...ಓಟಾಕ್ಲಿ?"

...ಏನು ಓಟಾಕೋ ಅಂಥೋರಿಂದ್ಲೆ ಅವುನು ...ನ್ಸ್ ತಗಂಡಿದ್ರೆ ಏನು ಮಾಡ್ತಿ?"

...ಟೀಸಗಂಡಿದ್ದನೂ?"

...ದೂ ಏರಿಯಾದ ಮ್ಯಾಲೆ ಹೋಯ್ತದೆ ಕಣೇ. ...ಜಿಲ್ಲೆಲಿ ಒಂದು ಓಟಿಗೆ ಐವತ್ತು ಸವುರಗಂಟ ...ಯಿದ್ದತಂತೆ. ಇನ್ನುಳದ ಕಡೆ ಐದರಿಂದ ಹತ್ತು ...ಂಟ ನ್ಯಡಿತಾಯಿದ್ದತಂತೆ."

...ವತ್ತು ಸವುರಗಂಟ ನ್ಯಡಿತದೆ ಅಂದ್ರೆ ಏನಾಯಿತ್ಲ ... ಆಟೊಂತರ ದುಡ್ಡು ಕೊಡೊ ಧಣಿಗಳು ...ರೆ?" ಎಂದ ಕಾಳಮಾವ.

...ಣಿ ಕಳ್ರು ಕೊಡ್ತರೆ ಕಣಮಾವ. ಅವುರೀಗ ತಮ್ಮ ...ರ ಗೆಲ್ಲಿಸಿಗಳಕ್ಕೆ ಎಷ್ಟಾರ ಆಗ್ಲಿ ಅಂತ ಕುಂತವುರೆ."

...ಲ್ಲಿಸಿಕೊಂಡು ಏನು ಮಾಡ್ತರೂ?"

...ನು ಮಾಡ್ತರು ಅಂದ್ರೆ, ಎಡೂರಪ್ಪನ ಕೈಲಿ ಏನೂ ... ನಾವೇ ಯಲ್ಲಾ ಗೆಲ್ಲಿಸಿಕೊಂಡು ಬಂದೋ. ... ನಾವೇ ಲೀಡ್ರುಗಳು ಅಂತ ತುರ ತಿರುಗತರೆ ...ನ."

...ಡ್ಡಿ ಮಕ್ಕಳಾವುಳಿ ಜಾಸ್ತಿಯಾಯ್ತು ಕಂಡ್ರ."

...ಯ್ಯೋ ಹಾವಳಿ ಅಂತ ಕೇಳ್ತಿಯಾ, ಯಾವ ...ಇಲ್ಲದಂಗೆ ಬಳ್ಳಾರಿ ಮಣ್ಣು ಮಾರಿ ದುಡ್ಡು ...ಂಡು ಯಲ್ಲಾರ ಮ್ಯಾಲೂ ಹೋಯ್ತರೆ."

...ಂಥೋರ್ಕೆಲ್ಲ ಬಾಳದಿನ ಇರದಿಲ್ಲ ಬುಡು."

...ರದಿಲ್ಲ ಸರಿ. ಆದ್ರಿವತ್ತೇಳು. ಯಲ್ಲಾರ್ನು ದುಡ್ಡು ...ಕೊಂಡಕಂಡು ಹಾಳು ಮಾಡ್ತ ಕುಂತವುರೆ."

...ಂಥೋರಿಗೆ ಬಕರಿಯಾಗೊ ನನಮಕ್ಕಳು ...ರು ಅಂತ" ಎಂದ ಕಾಳಮಾವ.

...ನಂಗಂತಿ. ಬಿಜೆಪಿಗಳು, ಆರೆಸೆಸ್‌ನೋರು, ಕೇಂದ್ರದೋರು, ಅವುಳ್ಯಾರೊ ಸುಸುಮ ಸ್ವರಾಜ್ ಅನ್ನೊಳು, ಇಂಥೋರ್ಯಲ್ಲ ಬಕರಿಯಾಗ್ಯವುರೆ ಅಂದ್ರೆ ಇನ್ಯಾರನ್ನ ಬುಡ್ತರವುರು."

"ಅದರಲ್ಯಲ್ಲ ಕುಮಾರಸ್ವಾಮಿನೆ ಬಗ್ಗಲಿಲ್ಲ ಆ ಬಡ್ಡಿಮಕ್ಕಳಿಗೆ" ಎಂದ ಕಾಳಮಾವ.

"ಏ ಇದೇನೊ ಮಾವ ಹಿಂಗಂತೀ. ಮದ್ಲು ದುಡ್ಡ ತಗಂಡನೆ ಅವುನು. ಗಣಿ ದುಡ್ಡಿನ ರುಚಿಕಂಡು ಪ್ರತಿ ತಿಂಗಳೂ ನೂರೈವತ್ತು ಕೋಟಿ ಕೊಡಿ ಅಂತ ಹಿಜ ಮಾಡಿದ್ಕೆ ಅಲವೆ ರೆಡ್ಡಿ ತಿರುಗಿಬಿದ್ದು ದೂರೇಳಿಕಂಡು ತಿರುಗಿದ್ದು."

"ಅಂತೂ ಅವುರತ್ರ ಕಾಸು ಕೇಳದೋರೆ ಇಲ್ಲ ಅನ್ನಂಗೆ ಕಾಣ್ತಾ ಅದೆ ಅನ್ನು."

"ಕುಮಾರಸ್ವಾಮಿ ಸರಿಯಾಗೇ ಉಗದವುನೆ ಕಂಡ್ರ" ಎಂದ ಸೀರ.

"ಅದೆಲ್ಲುಗುದಿದ್ದನೂ?"

"ಅದೇಲ್ಲುಗುದಿದ್ದನೂ?"

"ಇಂಥೋರ್ನ ಬಯಿರಂಗವಾಗೇ ಹಿಡುದು ನ್ಯಾಣಾಕಬೇಕು ಅಂದವುನೆ ಕಂಡ್ರ."

"ಏ, ಅವುನೇಳಿರದು ಗಣಿಕಳ್ರಿಗಲ್ಲ ಕಣೊ. ಅವುನ್ಯಾರೊ ಲಾಯರ್‌ಗೆ ಅಂಗಂದವುನೆ. ಅದಕೆ ಲಾಯರ್ಯಲ್ಲ ಸೇರಿ ತಪ್ಪಾಯ್ತು ಅಂತ ಅಂದ ಮಾತ ವಾಪಸ್ ತಗೊ ಅಂದವುರೆ. ಅದ್ಕೆ ಕುಮಾರಸ್ವಾಮಿ ನಾನು ತಗಳದಿಲ್ಲ ಅಂದವುನೆ."

"ಯಾಕೆ ಏನನ್ನ ವಾಪಸ್ ತಗಳದಿಲವೊ ಉಗ್ರಿ?" ಎಂದುಕೊಂಡು ವಾಟಿಸ್ನೆ ಬಂದ.

"ಕುಮಾರಸ್ವಾಮಿ ಯಾವನೋ ಲಾಯರ ಬೋದನಂತೆ. ಅದ್ಕೆ ಲಾಯರ್ಯಲ್ಲ ಸೇರಿ ಅಂದ ಮಾತ ವಾಪಸ್ ತಗೊ ಇಲ್ಲ ಅಂದ್ರೆ ಗಲಾಟಿ ಮಾಡ್ತಿವಿ ಅಂದರಂತೆ. ಅಂಗಂದ್ರೂ ಕುಮಾರಣ್ಣ ಅಲ್ಲಾಡಿಲ್ಲವಂತೆ."

"ಲಾಯರಲ್ಲೂ ಕೂಡ ಬ್ಯಾರೆ ಬ್ಯಾರೆ ಗುಂಪವೇ ಕಣೊ ಉಗ್ರಿ. ಪರೆಗ್‌ಜಾಂಪಲ್ ಬೆಂಗಳೂರಲ್ಲೇ ಬ್ರಾಂಬ್ರು ಲಾಯರ್‌ದೇ ಒಂದು ಗುಂಪು, ಲಿಂಗಾಯತ್ರದೇ ಒಂದು, ಒಕ್ಕಲಿಗರದೇ ಒಂದು, ಯಾವ ಜಾತಿಗೂ ಸೇರದೆಯಿರೊ ಲಾಯರ್‌ಗಳದೇ ಒಂದು ಗುಂಪದೆ. ಆದ್ರಿಂದ ಕುಮಾರಸ್ವಾಮಿ ಪರ ಜೈಕಾರ ಹಾಕಕ್ಕೆ ಒಂದು ಗುಂಪಿದ್ರೆ, ದಿಕ್ಕಾರ ಅನ್ನಕ್ಕೂ ಒಂದು ಗುಂಪದೆ. ಆದ್ರಿಂದ ಇಲ್ಲಿ ಯಾವ ಚಳವಳಿನೂ ನ್ಯಡಿಯದಿಲ್ಲ. ಆದ್ರು, ಕುಮಾರಸ್ವಾಮಿ ಯಂಥಾ ಪೂಲಿಷ್ ಫೆಲೊ ಅಂದ್ರೇ ಲಾಯರ್ರು ಬಹಿರಂಗವಾಗಿ ನ್ಯಾಣಾಕಬೇಕು ಅಂತ ಅನ್ನಬಾರ್ದು. ಅದು ಸಂವಿಧಾನಕ್ಕೆ ಅಪಚಾರ ಮಾಡಿದಂಗೆ."

"ಅಂಗರೆ ಸಮ್ಮಿದಾನ ನೋಡಿಕಂಡೇ ಮಾತಾಡಬೇಕು ಅನ್ನು."

"ನೀನು ಯಂಗಾರ ಮಾತಾಡು, ಆದ್ರೆ ಮುಖ್ಯಮಂತ್ರಿ ಆಗಿದ್ದವನು ನ್ಯಾಣಾಕಬೇಕು, ಕಲ್ಲಲಿ ಹೊಡಿಬೇಕು ಅಂದ್ರೆ ಅಂತ ಕ್ಯಲಸ ಮಾಡಕ್ಯಾಯ್ತದಾ. ಇಲ್ಲಿ ಡೆಮಾಕ್ರಸಿ ಇದೆ. ನ್ಯಾಯಾಲಯ, ಕೋರ್ಟು, ಕಚೇರಿ, ಪೊಲೀಸ್ ಸ್ಟೇಷನ್ನು, ವಿಧಾನಸಭೆ, ಲೋಕಸಭೆ ಅಂತ ಅವೆ. ಹಿಂಗಿದ್ರೂ ಅವುನ್ನ ಬಯಿರಂಗವಾಗಿ ನ್ಯಾಣಾಕಿ ಅಂದ್ರೆ, ಇದೇನು ಸಾಬರ ದೇಸನೆ? ಅಂತ ಮಾತಾಡಬಾರ್ದು ಆಡಿದ್ರು ಸಾರಿ ಕೇಳಬೇಕು."

"ಅದು ಅವುರಪ್ಪನಿಂದ ಬಂದಿರೊ ಮಾತು ಕಣೊ. ಅವುರಪ್ಪನೂ ಅಂಗೆ ಅಲವೆ. ಕತ್ತು ಕುಯ್ಯತ್ತಿನಿ, ತಲೆ ಬೋಳಿಸಿಗತ್ತಿನಿ ಅಂತ ಏನೇನೊ ಅಂತಾನಲ್ಲಾ, ಇವುನು ಅಂಗೆ ಅಗ್ಯವುನೆ."

"ನಿಜ, ಹಿಂದೊಂದ ಸತಿ ಅದ್ಯಾತಕೊ ಏನೊ ಕಾಂಗ್ರೆಸ್ಸಿನೋರ ಕಾಲಕ್ಯಳಗೆ ನುಸಿತಿನಿ ಅಂದಿದ್ದ. ಆ ಮಾತ ಕಾರ್ಯಗತ ಮಾಡದೆ ಆದ್ರೆ ಖರ್ಗೆ ಪಂಚೆ ಎತ್ತಿಕೊಂಡು ನಿಂತಗಬೇಕು. ದೇವೇಗೌಡ್ರು ಚತುಸ್ಪಾದಿಯಾಗಿ ಖರ್ಗೆ ಕಾಲಸಂದಿ ನುಸಿಬೇಕು. ಇದ ಕಲ್ಪಿಸಿಗಂಡ್ರೆ, ಸಾಕು ನಗಂಗಾಯ್ತದೆ" ಎಂದು ವಾಟಿಸ್ನೆ ಹೇಳುವಾಗ ಜುಮ್ಮಿ ಬಿದ್ದು ಬಿದ್ದು ನಗುತ್ತಿದ್ದಳು.

"ದೇವೇಗೌಡ್ರುದಿರ್ಲಿ ಕಣೊ, ಅವರ ದತ್ತುಪುತ್ರನಂಗಿದ್ದ ಚೆನ್ನಿಗಪ್ಪ ಏನೇಳಿದ್ದ ಗೊತ್ತೆ? ಜನಾರ್ದನ ರೆಡ್ಡಿ, ಅವುನೆಡ್ರಿ



ಮಕ್ಕಳ ಕರಕಂಡು ಧರ್ಮಸ್ಥಳಕ್ಕೆ ಬರ್ಲಿ, ನಾನು ಬತ್ತಿನಿ, ಪ್ರಮಾಣ ಮಾಡನ ಅಂದಿದ್ದ. ಇದಕೇನೇಳ್ತೀ?" ಎಂದ ಉಗ್ರಿ.

"ಡರ್ಟಿ ಪೆಲೋಸ್, ಜನಪ್ರತಿನಿಧಿಗಳಾಗಿ ಧರ್ಮಸ್ಥಳ, ಮಂತ್ರಾಲಯ, ಮಾರಿಗುಡಿ ಅಂತ ಮಾತಾಡ್ತರಲ್ಲಾ ಇಟೀಸ್ ಷೇಂಟು ಡೆಮಾಕ್ರಸಿ. ಇವುರಿಗೇನಾರ ಬೈಯ್ಯನ ಅಂದ್ರೆ ನಮಿಗೇ ಅವುಮಾನಾಯ್ತದೆ."

"ನೋಡಪ್ಪ ನಿನ್ನಂಥೋನಿಗೆ ಅವುಮಾನಾಯ್ತದೆ ಅಂದ್ರೆ ನಿನಿಗಿಂತ ಕೆಟ್ಟೋದ್ರು ಅನ್ನಂಗಾಯ್ತು" ಎಂದಳು ಜುಮ್ಮಿ.

"ಊ ಕಣಕ್ಕ. ಅಂತ ಎಡೂರಪ್ಪನೇ ಬಹಿರಂಗ ಸಭೇಲಿ ಏನೇಳಿದ ಗೊತ್ತೆ?"

"ಏನೇಳಿದನಪ್ಪ?"

"ನಾವೆಲ್ಲಾ ಸಣ್ಣ ಜನ, ಕುರ್ಚಿಗಾಗಿ ಏನ್ಯಾರ ಮಾಡ್ತಿವಿ, ಅಧಿಕಾರಕ್ಕಾಗಿ ಮಾಡಬಾರದ್ದ ಮಾಡ್ತಿವಿ, ಮರಿಯಾದಿಬುಟ್ಟು ಬಾಳ್ತಿವಿ, ನಿಜವಾಗ್ಲು ನಮ್ಮಂಥೋರ ನೀವು ಕ್ಷಮಿಸಬಾರ್ದು ಅಂತ ಅಂದವುನೆ ಗೊತ್ತೇನಕ್ಕ?"

"ಪಾಪ ಅವುನಿಗೂ ಸಾಕಾಗಿರಬವುದು."

"ಸಾಕಾಗದಷ್ಟೇ ಅಲ್ಲ ಕಣಕ್ಕ ಸುಸ್ತಾಗ್ಯವುನೆ. ಅವುನಮುಕ ನೋಡಿದ್ರೆ ಎಡೂರಪ್ಪ ತೀರೋಗಿ ಭಾಳದಿನಾಗಿರಬೇಕು ಅನ್ನುಸ್ತದೆ."

"ಅದ್ಕೆ ಏನೊ ಇನ್ನುಮುಂದೆ ಹೊಸಾ ಎಡೂರಪ್ಪನ್ನ ನೋಡ್ತೀರಿ ಅಂತ ಅವುನೆ ಅಂದಿದ್ದ ಕಣೊ" ಎಂದ ಉಗ್ರಿ.

"ಹೊಸ ಎಡೂರಪ್ಪ ಅಂದ್ರೆ ಲಬಲಬ ಅಂತನೆ ಅನ್ನಂಡಿದ್ದೆ ಕಣೊ. ಈ ತರ ಎಡೂರಪ್ಪನ್ನ ನೋಡಕ್ಯಾಗದಿಲ್ಲ ಬುಡು. ಈಗಿರೋನು ಎಡೂರಪ್ಪಲ್ಲ, ಎಡೂರಪ್ಪನ ಪ್ರೇತ."

"ಅದ್ಯಾಕ್ಲ ಅಂಗಂತೀ. ಸರಿಯಾಗಿ ಮಾತಾಡ್ರ, ಮುಖ್ಯಮಂತ್ರಿ ಕಂಡ್ರ ಅವುನು" ಎಂದು ಕಾಳಮಾವ ರೇಗಿದ.

"ಸಿಟ್ಟಾಗಬ್ಯಾಡ ದ್ವಡಪ್ಪ, ಎಡೂರಪ್ಪ ಕರ್ನಾಟಕದ ವಿಧಾನಸೌಧದ ಎದುರಿಗೆ ಹಸುರು ಶಾಲಾಯ್ಕಂಡು ಪ್ರಮಾಣ ವಚನ ತಗಂಡಂತ ಮುಖ್ಯಮಂತ್ರಿನೇ ಆಗಿದ್ರೆ ರೆಡ್ಡಿ ಕಳ್ರ ವಜಾ ಮಾಡತಿದ್ದ, ಮಾಡಿ ಇಡೀ ಗಣಿಕಾರಿಕೆನ ಸಿಬಿಐಗೆ ಕೊಡತಿದ್ದ. ಅಂಗೆ ಮಾಡಿದ್ರೆ ಅವುನ ಸರಕಾರೇನೂ ಬೀಳ್ತಿರಲಿಲ್ಲ. ಬದ್ಲಿಗೆ ನಿಮ್ಮ ದ್ಯಾವೇಗೌಡ್ರು ಮರದಿಂದ ಬೀಳೋನ್ನ ಆತಗಂಡಂಗೆ ಕೈನೀಡೋರು."

"ಅದು ನಿಜಬುಡು. ಅಪ್ಪ ಮಕ್ಕಳು ಕಾಯ್ಕಂಡಿದ್ರು" ಎಂದ ಉಗ್ರಿ.

"ಇನ್ನ ಪ್ರವಾಹ ಬಂದಾಗ, ಮಗಧೀರ್ ಸಿನುಮ ನೋಡಿಕಂಡು ಕುಂತಿದ್ದೋನು ಈಗ್ಲು ಅಂತ ಕ್ಯಲಸನೆ ಮಾಡೊ ಸ್ತ್ರೀರಾಮುಲು ಅನ್ನೊ ಕುರುಮಾಮ ನಮ್ಮ ಆರೋಗ್ಯ ಮಂತ್ರಿ. ಅದಿರ್ಲಿ, ಮನುಷ್ಯ ಆದರಲ್ಲೂ ನಮ್ಮ ರೈತನಿಗೆ ಭೂಮಿ ಬೇಕು. ಅದು ಕರುಣಾಕರ ರೆಡ್ಡಿ ಕೈಲಿದೆ. ಆರೋಗ್ಯ ರಾಮುಲು ಕೈಲಿದೆ. ಪ್ರವಾಸ ಜನಾರ್ದನ ರೆಡ್ಡಿ ಕೈಲಿದೆ. ಇಂತ ಮಂತ್ರಿಗಳ ಮಡಿಕಂದಿರೊ ಎಡೂರಪ್ಪನ ಕೈಲಿ ಪವರ್ ಅದೆ ಅಂತ ತಿಳಕಂಡ್ರೆ ಅದೂ ಇಲ್ಲ. ಅದ್ಯಲ್ಲ ಗಣಿ ಕಳ್ರ ಕೈಲದೆ. ಇನ್ನ ಎಡೂರಪ್ಪನ ಪ್ರೀತಿಪಾತ್ರದ ಹೆಣ್ಣುಮಗಳು ಶೋಭಾ, ಅವುಳೂ ಅವನತ್ರದಲ್ಲಿಲ್ಲ. ರಾವಣನ ತಂಗಿ ಶೂರ್ಪನಖಿ ಕಾಡಲ್ಲಿ ತಿರುಗಿದಂಗೆ ಇಡೀ ಕರ್ನಾಟಕ ತಿರುಗ್ತ ಕುಂತವುಳೆ. ಅವುಳಿಗೆ ಕೀಚಕನಂಗೆ ರೇಣುಕಾಚಾರಿ ಬೆನ್ನಬಿದ್ದವುನೆ. ಇದನ್ಯಲ್ಲ ಆ ಎಡೂರಪ್ಪ ಸಹಿಸಿಕೊಂಡು ನಗಕ್ಕೆ ಟ್ರೈ ಮಾಡಿದಾಗ ನನಿಗೆ ಎಡೂರಪ್ಪನ ಪ್ರೇತನಂಗೆ ಕಾಣ್ತಾನೆ. ಇಂತ ಸ್ಥಿತಿ ಹಿಂದ್ಯಾರಿಗೂ ಬಂದಿಲ್ಲ. ಮುಂದ್ಯಾರಿಗೂ ಬರಬಾರ್ದು. ನನಿಗಂತೂ ಬರದಿಲ್ಲ. ಬತ್ತಿನಿ, ಎಮ್ಮೆಲ್ಸಿ ಕ್ಯಾಂಡೇಟಗೆ ಓಟು ಕೇಳುಬೇಕು" ಎಂದು ವಾಟಿಸ್ನೆ ಬಂದಷ್ಟೇ ಬೇಸಿಯಲ್ಲಿ ಹೊರಟು ಹೋದ. ●

...ಾದ್ರಿ ಬೇಡ, ಅಧ್ಯಕ್ಷ ಬೇಕು

...ವರ್ಷ ಅಮೆರಿಕಾದಲ್ಲಿ ಮತ್ತೆ ಚುನಾವಣೆ; ಇದನ್ನು ಮನಸ್ಸಿನಲ್ಲಿಟ್ಟುಕೊಂಡೇ ಹೋದ ವರ್ಷ ಸದ್ದಾಂ ಮೇಲೆ ಎಗರಿಹೋದ ಅಧ್ಯಕ್ಷ ಜಾರ್ಜ್ ಬುಶ್ ಇದ್ದಕ್ಕಿದ್ದಂತೆ ತನ್ನ ಜನಪ್ರಿಯತೆ ಕಳೆದುಕೊಳ್ಳುತ್ತಿದ್ದಾನೆ. ...ಕಾಲದಲ್ಲಿ ಬೆಲೆಗಳು ಹೆಚ್ಚಾಗಿವೆ. ಉತ್ಪಾದನೆ ಕಮ್ಮಿಯಾಗಿದೆ. ನಿರುದ್ಯೋಗ ಕಿರಿಕಿರಿ ಉಂಟುಮಾಡತೊಡಗಿದೆ. ...ಷನ ರಿಪಬ್ಲಿಕನ್ ಪಕ್ಷ ಭಾರತದ ಕಾಂಗ್ರೆಸಂತೆ; ಬಹುಪಾಲು ಜನಕ್ಕೆ ಅದೇ ಇಷ್ಟ. ಹೀಗಾಗಿ ಆ ಪಕ್ಷದ ...ಯಾದ ಡೆಮಾಕ್ರಟಿಕ್ ಪಕ್ಷ ನೀಗ್ರೋಗಳ, ಅಲ್ಪಸಂಖ್ಯಾತರ, ಎಡಪಂಥೀಯರ ಪಕ್ಷವೆಂದು ಪರಿಗಣಿತವಾಗುತ್ತದೆ. ...ಯಲ್ಲಿ ಎಂದೋ ಒಮ್ಮೆ ಗೆಲ್ಲುತ್ತದೆ. ಆದ್ದರಿಂದ ಜನಪ್ರಿಯತೆ ಕಳೆದುಕೊಳ್ಳುತ್ತಿರುವ ರಿಪಬ್ಲಿಕನ್ ಪಕ್ಷದ ... ಸೋಲಿಸಬಲ್ಲ ತಕ್ಕ ಆಸಾಮಿಗಾಗಿ ಹುಡುಕುತ್ತಿದ್ದಾರೆ. ಈಚೆಗೆ ಈ ಡೆಮಾಕ್ರಟಿಕ್ ಆಕಾಶದಲ್ಲಿ ಕಾಣಿಸಿಕೊಂಡಿರುವ ... ಕ್ಲಿಂಟನ್.


ಕ್ಲಿಂಟನ್? ಯಾರಿವನು? ಎಂದು ಕೇಳಿದ ಕುತೂಹಲಿಗಳು ಕ್ಲಿಂಟನ್ ಜನಪ್ರಿಯಗೊಳ್ಳುತ್ತಿರುವುದನ್ನು ...ವನ ಹಿನ್ನೆಲೆ ಕೆದಕತೊಡಗಿದರು. ಹ್ಞಾ... ಒಬ್ಬಳು ಸಿಕ್ಕೇಬಿಟ್ಟಳು. ಆಕೆಯ ಹೆಸರು ಫ್ಲವರ್. 'ಈ ಕ್ಲಿಂಟನ್ ...ಗೆ ಹನ್ನೆರಡು ವರ್ಷಕಾಲ ಮೋಜು ನಡೆಸಿದವನು. ಅವನನ್ನು ಹೇಗೆ ಅಧ್ಯಕ್ಷರನ್ನಾಗಿ ಆರಿಸುತ್ತೀರಿ' ಎಂದು ಈಕೆ ...ಗಿದಳು. ಇದರಿಂದ ಕಿರಿಕಿರಿಗೊಂಡ ಕ್ಲಿಂಟನ್ 'ನನಗೂ ಆಕೆಗೂ ಸಂಬಂಧವಿಲ್ಲ' ಎಂದು ಹೇಳಿ ಆಕೆಯ ... ಟೇಪುಗಳನ್ನು ತೋರಿಸಿದ.

ಆದರೆ ಇಡೀ ಅಮೆರಿಕಾದಲ್ಲಿ ತಮ್ಮ ಅಧ್ಯಕ್ಷನಾಗಲಿರುವವನ ಬಗ್ಗೆ ವಿಚಿತ್ರ ರೀತಿಯ ನೈತಿಕ ಕೂಗಾಟಗಳಿರುತ್ತವೆ. ಅಭ್ಯರ್ಥಿಯಾಗಲಿರುವವನು ಗಾಂಜಾ ಸೇವಿಸಿದರೆ, ವ್ಯಭಿಚಾರ ಮಾಡಿದರೆ, ವಿವಾಹ ವಿಚ್ಛೇದನಗೊಂಡಿದ್ದರೆ, ಸುಳ್ಳು ಹೇಳಿದ್ದರೆ, ವಂಚನೆ ಮಾಡಿದ್ದರೆ... "ಅಂಥವನು ಬೇಡ" ಎಂದು ಹೇಳುತ್ತಾರೆ. ಇದನ್ನು ಬಲ್ಲ ಪತ್ರಕರ್ತರು ಅಭ್ಯರ್ಥಿಯ ಹಿನ್ನೆಲೆಯನ್ನು ಕೆದಕುತ್ತಾ ಹೋಗುತ್ತಾರೆ. ಆದರೆ ಅವರಿಗೆ ಗೊತ್ತಿದೆ. ಆಗಲೇ ಅಧ್ಯಕ್ಷರಾಗಿ ಮೆರೆದುಹೋದ 'ಮಾನವ ಶ್ರೇಷ್ಠ'ರೂ ವ್ಯಭಿಚಾರ ಮಾಡಿದ ಹಲವಾರು ಉದಾಹರಣೆಗಳಿವೆ. ಫ್ರಾಂಕ್‌ಲಿನ್ ರೂಸ್‌ವೆಲ್ಟ್ ಸತ್ತಮೇಲೆ ಆತ ಕಪ್ಪು ಹೆಂಗಸೊಬ್ಬಳನ್ನು ಇಟ್ಟುಕೊಂಡಿದ್ದು ಗೊತ್ತಾಯಿತು. ಜಾನ್ ಕೆನ್ನಡಿ ಕಿಮ್ ನೋವಾಕ್ ತರಹದ ಅನೇಕರ ಗೆಳೆಯನಾಗಿದ್ದ. ಐಸೆನ್ ಹೋವರ್ ಪ್ರೇಮಪ್ರಕರಣದಲ್ಲಿ ಸಿಕ್ಕಿಕೊಂಡಿದ್ದ... ಈಗ ಬಿಲ್ ಕ್ಲಿಂಟನ್ ಬಗ್ಗೆ ಪತ್ರಿಕೆಗಳು ಚೀರಾಡುತ್ತಿವೆ. ಇದರಿಂದ ಜನ ಕೂಡಾ ರೋಸಿಹೋಗುತ್ತಿದ್ದಾರೆ. ಅವರಿಗೆ ಗೊತ್ತು, ಒಮ್ಮೆ ಸುಳ್ಳು ಹೇಳದ, ಪ್ರೀತಿ ಮಾಡದ, ಸಿಗರೇಟ್ ಸೇದದ ವ್ಯಕ್ತಿ ಅಮೆರಿಕಾದಲ್ಲಿ ಇರಲಾರ. ಆದ್ದರಿಂದ ಬಿಲ್ ಕ್ಲಿಂಟನ್‌ನನ್ನು ಇಷ್ಟಪಡುವವರು ಪತ್ರಿಕೆಗಳಿಗೆ ಉಗಿದು ಹೇಳುತ್ತಿದ್ದಾರೆ. "ನಾವು ಆರಿಸಬೇಕಾದ್ದು ಅಮೆರಿಕಾದ ಅಧ್ಯಕ್ಷನನ್ನ, ಚರ್ಚಿನ ಪಾದ್ರಿಯನ್ನಲ್ಲ! ನೀವು ತೆಪ್ಪಗಿರಿ! ಆತನ ಖಾಸಗಿ ಬದುಕು ಖಾಸಗಿಯಾಗಿಯೇ ಇರಲಿ!"



-ಫೆಬ್ರವರಿ 9, 1992

ಸುದ್ದಿ ಜಾಹೀರಾತು



▸ ಎಚ್.ಎಲ್. ಕೇಶವಮೂರ್ತಿ

ಎಂಬತ್ತರ ದಶಕದ ಆದಿ ಭಾಗ.

ಅನ್ಯಾಯ ಆಗಲೂ ಇತ್ತು ಈಗಲೂ ಇದೆ-ಹೆಚ್ಚಾಗಿರ ಬಹುದು ಅಷ್ಟೆ.

ದೌರ್ಜನ್ಯಕ್ಕೆ ಒಳಗಾದವರಿಗೆ ಪತ್ರಿಕೆಗಳಲ್ಲಿ ಸುದ್ದಿ ಆದರೆ ನ್ಯಾಯ ದೊರೆಯಬಹುದು ಎಂಬ ದೂರದ ಆಸೆ.

'ಇದ ನಿಂ ಪೇಪರ್‍ನಾಗೆ ಆಕುಸ್ಬುದಿ ಸಾ. ಆದೇನ್ ಆಯ್ತದೊ ಆ ಕರ್ಚ ನಾವ್ ಕೊದ್ತೀವಿ' ಅನ್ನುತ್ತಿದ್ದರು.

ಹಣ ನೀಡಿದರೆ ಮಾತ್ರ ಸುದ್ದಿ ಪ್ರಕಟ ಆಗುತ್ತೆ ಎಂಬ ಅಜ್ಞಾನ ಅವರಲ್ಲಿ ತುಂಬ ತುಳುಕುತ್ತಿತ್ತು.

ಈಗ ಕಾಲ ಬದಲಾಗಿದೆ. ಆದರೆ ಈ ಪ್ರವೃತ್ತಿ ಬದಲಾವಣೆ ಆಗಿದೆಯಾ?

ಆಗ 'ಅಜ್ಞಾನ'ದಿಂದ ಹೇಳುತ್ತಿದ್ದರು; ಈಗ 'ಸುಜ್ಞಾನ' ದಿಂದ ಹೇಳುತ್ತಿದ್ದಾರೆ!

ಅಶೋಕ್ ಚವ್ಹಾಣ್ ಇದಾರಲ್ಲ... ಅದೇ ಮಹಾರಾಷ್ಟ್ರದ ಮುಖ್ಯಮಂತ್ರಿಗಳು.... ಈ ಸಾಲಿನ ಚುನಾವಣೆಯಲ್ಲಿ ಕಾನೂನಿನ ಮಿತಿ ಒಳಗೇ ಖರ್ಚು ವೆಚ್ಚವೆಲ್ಲವನ್ನೂ ಸರಿತೂಗಿಸಿದ್ದಾರಂತೆ. ಜಾಹೀರಾತು ಅಂತ ನೀಡಿದ್ದು ಕೇವಲ 11,379 ರೂಪಾಯಿ ಗಳಿಗೆ ಮಾತ್ರ ಅಂತೆ. ಹಂಗಿದ್ರೂ ಒಂದು ಲಕ್ಷಕ್ಕೂ ಅಧಿಕ ಬಹುಮತ ದಿಂದ ಜಯಶೀಲರಾದರಂತೆ! ಕೋಟ್ಯಾಧೀಶರಿಗೆ ಮಾತ್ರ ಇವತ್ತು ಚುನಾವಣೆ ನಿಭಾಯಿಸೋಕೆ ಸಾಧ್ಯ ಅಂತ ಪತ್ರಿಕೇಲಿ ಬರೀತಿದ್ದಾರಲ್ಲ ಅದೆಲ್ಲ ಬೊಗಳೆ; ಸುಮಾರಾಗಿ ಇರುವ ಕುಳಗಳೆಲ್ಲ ಚುನಾವಣೇಲಿ ಒಂದು ಕೈ ನೋಡೇ ಬಿಡಬಹುದು ಅಂತೆಲ್ಲ ಮನಸ್ಸಿನಲ್ಲೇ ಮಂಡಿಗೆ ತಿನ್ನಬೇಡಿ. ಸ್ವಲ್ಪ ನಿಧಾನಿಸಿ.

ಚುನಾವಣೆ ಹತ್ತಿರಕ್ಕೆ ಬರುತ್ತಿದ್ದಂತೆಯೇ 'ಅಶೋಕ ಪರ್ವ', 'ವಿಕಾಸ ಪರ್ವ' ಎಂದೆಲ್ಲ ಪ್ರಮುಖ ಮರಾಠಿ ದಿನಪತ್ರಿಕೆಗಳಲ್ಲಿ ತಲೆ ಎತ್ತಿದ್ದವಂತೆ. 'ಏನು ಈ 'ಪರ್ವ'ಗಳ ಸಮಾಚಾರ ಅಂದರೆ ಚವ್ಹಾಣ ಸಾಹೇಬರನ್ನ ಹಾಡಿ ಹೊಗಳಿ ಅಟ್ಟಕ್ಕೇರಿಸುವುದೇ ಆಗಿತ್ತಂತೆ.

ಅದೂ ತರಹವೇ ಅನ್ನಿ. ಯುವ ಮುಖ್ಯಮಂತ್ರಿ. ಕೆಲವೇ ತಿಂಗಳುಗಳಲ್ಲಿ ಅತ್ಯುತ್ತಮ ಕೆಲಸ ಮಾಡಿರ ಬಹುದು. ಅದನ್ನು ಹೊಗಳುವುದು ಪತ್ರಿಕಾಧರ್ಮವೇ ಸರಿ. ಆದರೆ ಒಂದು. ಎಲ್ಲಾ ಪತ್ರಿಕೆಗಳಲ್ಲೂ ಒಂದೇ ಸುದ್ದಿ ಬೈಲೇನ್ ಮಾತ್ರ ಬೇರೆ ಬೇರೆ ಇರುತ್ತಿತ್ತಂತೆ! ಇದೇನು ಒಬ್ಬನೇ ವರದಿಗಾರ ಹಲವು ಪತ್ರಿಕೆಗಳಿಗೆ ವರದಿ ಮಾಡ್ತಾನಾ. ಅಂದರೆ ಹಾಗಲ್ಲಂತೆ. ಇದು 'ಜಾಹೀರಾತು ಸುದ್ದಿ' ಅಂತೆ!

ಇದೇನು ಸೋಜಿಗ ಅಂದರೆ ಅಂತಹದ್ದೇನೂ ಇಲ್ಲಂತೆ. ಪತ್ರಿಕಾ ಪ್ರತಿನಿಧಿಯ ಹತ್ತಿರ ಹೋಗಿ ಸುದ್ದಿ ಕೊಟ್ಟರೆ ಅವರು ಕೇಳುತ್ತಾರಂತೆ- 'ಇದು ಎಂತಹ ಸುದ್ದಿ?' ಅಂತ. ಹೊಸ ಪೂಜಾರಿ ಆದರೆ ಕಕವನಂಗೆ ಆಡಬಹುದು. ಅದಕ್ಕೆ ಅವರೇ ವಿಷದೀಕರಿಸುತ್ತಾರಂತೆ.

'ಇದು ಮಾಮೂಲಿ ಸುದ್ದೀನಾ?'

ಹೌದು ಎಂದೇನಾದರೂ ಹೇಳಿದರೆ ಕಸದ ಬುಟ್ಟಿಯಲ್ಲಿ ಮುಕ್ತಿ ದೊರಕಿಸಿ ಕೊಡುತ್ತಾರಂತೆ.

'ಪೇಯ್ಡ್ ಸುದ್ದೀನಾ?'

'ಹುಂ' ಎಂದರೆ ಬೆಲೆ ನಿಗದಿ ಮಾಡುತ್ತಾರಂತೆ. ಅದರ ಆಧಾರದ ಮೇಲೆ 'ಸ್ಥಳ' ನಿರ್ಧರಿಸು ತ್ತಾರಂತೆ. ವಿಷಯದ ಗಂಭೀರತೆ ಗಿಂತಲೂ ನೀಡುವ 'ಹಣವೇ ಮುಖ್ಯ

ಇದರ ಹಾಗೆನೇ ಚೌಹಾಣ ಸಾಹೇಬ ಸುದ್ದೀನೂ- 'ಪೇಯ್ಡ್ ಸುದ್ದಿ' ಆಗಿತ್ತು!

ಕೋಟ್ಯಂತರ ರೂಪಾಯಿ ಸಾಹೇಬರ ಕೈ ಬಿಟ್ಟಿತ್ತು. ಇದು ಪತ್ರಿಕಾಲಯದಲ್ಲಿ ಹರಿದ ಬಹಿರಂಗ ರಹಸ್ಯವಾಗಿ ಜಾಹೀರಾತು ಸು ಯಾಗಿತ್ತು! 'ಸುದ್ದಿ'ಯ ಹೆಸರಿನಲ್ಲಿ ಕೋಟ್ಯಂತ ರೂಪಾಯಿ ದಂಧೆ ಇದಾಗಿತ್ತು. ಸಿಬಿಐ ತನಿಖೆ ಅತ್ಯಂತ ಅರ್ಹ ಹಗರಣ ಇದು ಎಂಬುದ ಕೆಲವು ಪ್ರಾಮಾಣಿಕ ಪತ್ರಕರ್ತರು ಕೊರ ತ್ತಿದ್ದಾರಂತೆ.

****

ಪತ್ರಿಕೆಗಳ ಪ್ರಸಾರ ಕಡಿಮೆ ಆಗುತ್ತಿದೆ.

ಇದಕ್ಕೇನು ಕಾರಣ?

ವಿಶ್ವಾಸಾರ್ಹತೆಯ ಕೊರತೆ.

ಯಾರು ಇದಕ್ಕೆ ಕಾರಣ?

ಪುರುಷ ಪತ್ರಕರ್ತರು!

ಹೇಗೆ ಹೇಳುತ್ತೀರಿ?

ಪತ್ರಿಕೆಗಳಲ್ಲಿ ಪ್ರಮುಖ ಸ್ಥಾನಗಳೆಲ್ಲ ಇವರಿಗೇ ಮೀಸಲು.

ಮಹಿಳೆ ಇದನ್ನು ನಿಭಾಯಿಸಲಾರಳೆ?

ನಿಭಾಯಿಸಬಲ್ಲಳು. ಮಾಲೀಕರು ಬಲ್ಲರು.

ಅವರೇನು ಸ್ತ್ರೀ ದ್ವೇಷಿಗಳೆ?

ಹಾಗೇನೂ ಇಲ್ಲ, ಅನೇಕರಿಗೆ ಸ್ತ್ರೀಯರ ಮೇಲೆ ವಿಪರೀತ ಆಸಕ್ತಿಯೇ ಇದೆ. ಆದರೆ ಪ್ರಮುಖ ಸ್ಥಾನಗಳಿಗೆ ಮಾತ್ರ ಬೇಡ!

ಯಾವುದು ಮುಖ್ಯ? ಲಿಂಗವೊ? ಕಸುಬು ಗಾರಿಕೆಯೊ?

ಲಿಂಗ ಎಂಬುದರಲ್ಲಿ ಅವರಿಗೆ ಅಚಲ ವಿಶ್ವಾಸ!

ಮಹಿಳೆಯರೇ ಮುಖ್ಯ ಸ್ಥಾನ ಪಡೆದರೆ ಓದುಗರ ಸಂಖ್ಯೆ ಹೆಚ್ಚಬಹುದೆ?

ಇದು ಗಂಭೀರ ಪ್ರಶ್ನೆ. ಇತ್ತೀಚೆಗೆ ನಡೆದ 'ವಿಶ್ವ ಪತ್ರಿಕಾ ಕಾಂಗ್ರೆಸ್'ನಲ್ಲಿ ಇದು ಚರ್ಚೆಗೆ ಬಂದಿತು. ಮಹಿಳೆಯರೇ ಪಾಲ್ಗೊಂಡಿದ್ದ ಇದರಲ್ಲಿ ಹಲವು ಸ್ವಾರಸ್ಯಕರ ಸಂಗತಿಗಳು ಬಯಲುಗೊಂಡಿರಬಹುದು. ಶ್ರೀಲಂಕಾದ ಪ್ರತಿನಿಧಿಯೊಬ್ಬರು ಹೇಳಿದ ಮಾತು: 'ಮಹಿಳೆ ಮುಖ್ಯಸ್ಥರಾದರೆ ಓದುಗರ ಸಂಖ್ಯೆ ಹೆಚ್ಚುತ್ತೆ ಎನ್ನುವುದು ಚರ್ಚಾಸ್ಪದ ವಿಷಯ. ಆದರೆ ಒಂದು. ಮಹಿಳೆಯ ಚಿತ್ರಗಳು ಹೆಚ್ಚಿದ್ದರೆ ನೋಡುಗರ ಸಂಖ್ಯೆಯೂ ಹೆಚ್ಚಿರುತ್ತೆ!'

ಅಂದರೆ ದೇಹ ಬೇಕು, ಬುದ್ಧಿ ಬೇಡ!


ಸಭ್ಯ ಗೃಹಸ್ಥರು

ನವವಧು-ವರರು.

ಟ್ಯಾಕ್ಸಿಯಲ್ಲಿ ಹೋಗುತ್ತಿದ್ದರು.

ವರ ಕಪಿಚೇಷ್ಟೆಗೆ ಇಳಿದ. ಹೆಂಡತಿಯ ಎದೆಯ ಹತ್ತಿರ ಕೈ ಹಾಕಿದ. ವಧು ಸಿಡಿಮಿಡಿಗೊಂಡಳು. ಕೈಕಿತ್ತು ದೂರ ಬಿಸಾಕಿದಳು.

ಒಂದೆರಡು ಸೆಕೆಂಡು ಸುಮ್ಮನಿದ್ದ ವರ. ನಂತರ ಮೆಲ್ಲನೆ ಕೈಕೆಲಸ ಮಾಡಲು ನಿರ್ಧರಿಸಿದ. ಸೀರೆಗೆ ಕೈಹಾಕಿ ಮೇಲಕ್ಕೆತ್ತಲು ಪ್ರಯತ್ನಿಸಿದ. ಹೆಂಡತಿಗೆ ಮೈಯೆಲ್ಲ ಉರಿಹತ್ತಂತು. ಸಿಟ್ಟನಿಂದ ಗದರಿಸಿದಳು- 'ನಾನು ಮೊದಲಿ ನಂಗಲ್ಲ, ಈಗ ಮದುವೆಯಾದ ಸಭ್ಯ ಗೃಹಸ್ಥೆ ತಿಳಿದುಕೊ.'



ಜನಾರ್ದನ ರೆಡ್ಡಿಯವರ ಮಾತು ಕೇಳಿದಾಗ ಇದು ನೆನಪಿಗೆ ಬಂತು. ಪಾಪ ಅವರು ಸುಸಂಸ್ಕೃತರಂತೆ. ಅಂತಹ ಸಭ್ಯರ ಮೇಲೆ ಗಣಿ ಹಗರಣದ ಆರೋಪ ಮಾಡಿದರೆ ಎಂತಹವರಿಗಾದರೂ ಸಿಟ್ಟು ಬರೋದೇಯ. ಚಂದ್ರಬಾಬುನಾಯ್ಡು ಅವರು 'ನೀಚ' ರಾಜಕಾರಣಿ ಯಂತೆ. ದೇವೇಗೌಡರಿಗೆ ಗಣಿಹಗರಣದ ಬಗ್ಗೆ ಮಾತನಾಡಲು 'ಯೋಗ್ಯತೇನೆ ಇಲ್ಲ'ವಂತೆ. ಅಪ್ಪ ಮಗ ಜೈಲಿಗೆ ಹೋಗಲು ತಯಾರಾಗಿರಬೇಕಂತೆ. ಇನ್ನು ಸಿದ್ದರಾಮಯ್ಯ ಹುಚ್ಚ ಅಂತೆ. ಇಂತಹ ಹುಚ್ಚನ್ನ ಯಾರಾದರೂ ಮುಖ್ಯಮಂತ್ರಿ ಮಾಡೋಕೆ ಆಗತ್ತಾ ಇಲ್ಲ ಅಲ್ವ. ಆದಕ್ಕೇ ಶ್ರೀಮಾನ್ ರೆಡ್ಡಿಯವರು ರಾಜಕೀಯ ದಲ್ಲಿ ಮುಂದೆ ಬರಲು ಅವಕಾಶ ಇಲ್ಲದ ಹಾಗೇ ಮಾಡುತ್ತಾರಂತೆ. ಸುಸಂಸ್ಕೃತರ ಕೈಲಿ ಹಣ ಇದೆ ನೋಡಿ ಮಾಡಿದರೂ ಮಾಡಬಹುದು!

ಇವೆಲ್ಲ ಮಾತು ಹೊರಬಂದಿರೋದು ಸುಸಂಸ್ಕೃತ ರಾದ ಜನಾರ್ದನ ರೆಡ್ಡಿಯವರ ಬಾಯಿಂದ!

ಯಡಿಯೂರಪ್ಪನವರೂ ಸುಸಂಸ್ಕೃತರೇ ಅಲ್ವ. ಅದಕ್ಕೇ ಅವರ ಕಣ್ಣಿಗೆ ಗಣಿ ಹಗರಣ ನಡೆದಿರುವುದು ಬಿದ್ದೇ ಇಲ್ಲವಂತೆ. ವಿರೋಧ ಪಕ್ಷಗಳು ಆ ಪಾಟಿ ಗಲಾಟೆ ಮಾಡ್ತಿದಾವಲ್ಲ ಅಂದರೆ ಅದಕ್ಕೆಲ್ಲ ಸದನದಲ್ಲಿ ಉತ್ತರ ನೀಡುತ್ತಾರಂತೆ. ಸುಸಂಸ್ಕೃತರಲ್ಲವಾ ಅವರು. ಸದನದಲ್ಲಿ ಈ ವಿಷಯ ಬಂದರೆ ದಾರಿ ತಪ್ಪಿಸೋದು ಹೇಗೆ ಅಂತ ಅವರು ತಿಳಿದಿದ್ದಾರೆ!

ಇಲ್ಲಿಂದ ದೆಹಲಿಗೆ ಹಾರಿದರೆ ಅಲ್ಲಿಯೂ ಸುಸಂಸ್ಕೃತರೇ ತುಂಬಿದ್ದಾರೆ. ವಾಜಪೇಯಿ, ಅಡ್ವಾಣಿ, ಜೋಷಿ, ಸುಷ್ಮಾ ರಾಜನಾಥ್ ಸಿಂಗ್... ಒಬ್ಬರೇ ಇಬ್ಬರೇ. ಸುಸಂಸ್ಕೃತರ ದಂಡೇ ಅಲ್ಲಿದೆ. ಲಿಬರ್ಹಾನ್ ಆಯೋಗ ಈ ಸುಸಂಸ್ಕೃತರ ದಂಡು ನೋಡಿ ಸಹಿಸಲಾರದೆ ಸುಳ್ಳು ಸುಳ್ಳೇ ಆರೋಪ ಮಾಡಿದೆಯಂತೆ. ಹ್ಯಾಗೇ ಅಂತೀರಿ. ಮಹಾಭಾರತದ ಸಂಜಯ ಇದ್ದನಲ್ಲ ಅವನ ತರಹ.... ಅವನೇನು ಮಾಡಿದ ಅರಮನೆಯಲ್ಲಿಯೇ ಕುಳಿತು ಧೃತರಾಷ್ಟ್ರನಿಗೆ ಯುದ್ಧ ಭೂಮಿಯಲ್ಲಿ ಏನೇನು ನಡೀತಿದೆ ಎಂಬುದನ್ನು ವಿವರಿಸು ತ್ತಿದ್ದನಂತೆ. ಹಾಗೇನೆ ಲಿಬರ್ಹಾನ್ ಸಾಹೇಬರು ಒಂದೇ ಕಡೆ ಕುಂತು ಆರೋಪ ಮಾಡ್ತಿದಾರೆ ಎಂದು ರಾಜನಾಥ್ ಸಿಂಗ್ ಅವರು ಹೇಳಿದ್ದಾರೆ. ಸುಸಂಸ್ಕೃತರ ಮೇಲೆ ಈ ರೀತಿ ಆರೋಪ ಮಾಡುವುದು ತರವಲ್ಲ ಬಿಡ್ರಿ ಸಾಹೇಬರೆ!

ಅಲ್ಲ ಎಲ್ಲ ಕಡೆ ಇಂತಹ ಸುಸಂಸ್ಕೃತರೇ ತುಂಬಿ ರುವಾಗ ನಮ್ಮ ದೇಶವೇ ಸುಸಂಸ್ಕೃತ ದೇಶ ಆಗಿದೆ ಯಲ್ಲ! ಅಲ್ಲ ಅಲ್ಲ, ಅವರು ಮಾತ್ರ ಸುಸಂಸ್ಕೃತರು. ಉಳಿದವರು? ಸುಸಂಸ್ಕೃತ ಜನಾರ್ದನ ರೆಡ್ಡಿ ಅವರ ಬಾಯಲ್ಲಿ ಹೊರಬಿದ್ದ ಪದಗಳಂತಹವರು! ಸುಸಂಸ್ಕೃತರೆಲ್ಲ ಭಾಜಪ ಗುತ್ತಿಗೆ! ●

ಯಾವುದು ರಾಷ್ಟ್ರೀಯ ಅವಮಾನ?


ಇತ್ತೀಚಿನ ಸಂಚಿಕೆಯಲ್ಲಿ ಪ್ರಕಟವಾದ ದಿನೇಶ್ ಕುಕ್ಕುಜಡ್ಕರ ವ್ಯಂಗ್ಯಚಿತ್ರ ಅರ್ಥಗರ್ಭಿತವಾಗಿತ್ತು, ಸಮಾಜದ ಅಂಕುಡೊಂಕುಗಳನ್ನು ಕೇವಲ ತೀಕ್ಷ್ಣ ಲೇಖನಗಳಿಂದಷ್ಟೇ ಜನರಿಗೆ ತಲುಪಿಸುವುದು ಸ್ವಲ್ಪ ಕಷ್ಟಸಾಧ್ಯ. (ಇವರದ್ದು ಬರೀ ಇದೇ ಗೋಳು ಎಂಬ ತಾತ್ಸಾರ ಎದುರಾದೀತು) ಹೀಗಾಗಿ ಲಂಕೇಶರು ಪತ್ರಿಕೆಯಲ್ಲಿ ವ್ಯಂಗ್ಯ ವಿಡಂಬನೆಗಳಿಗೂ ತುಂಬಾ ಪ್ರಾಮುಖ್ಯತೆಯನ್ನು ಕೊಟ್ಟಿದ್ದರು. ಅದು ಛೇ! ಛೇ!, ಬಯಲುಸೀಮೆಯ ಕಟ್ಟೆಪುರಾಣದಂತ (ಕೆ.ವಿ.ಪುಂಡಲೀಕ, ಬಿ.ಚಂದ್ರೇಗೌಡ ಮುಂತಾದವರ) ಅಂಕಣಗಳಾಗಿರಬಹುದು ಅಥವಾ ಪಂಜುಗಂಗುಲಿ, ಹಾದಿಮನಿಯಂತವರ ವ್ಯಂಗ್ಯಚಿತ್ರಗಳಾಗಿರಬಹುದು. ಇದೀಗ ಅದೇ ಹಾದಿಯನ್ನ ನೀಲಸೋಗೆ, ದಿನೇಶ್ ಕುಕ್ಕುಜಡ್ಕರವರು ಮುಂದುವರೆಸುತ್ತಿರುವುದು ಸಂತಸದ ಸಂಗತಿ.

ಕುಕ್ಕುಜಡ್ಕರ ಚಿತ್ರದಲ್ಲಿರುವ ಹಾವಿಗೂ ಹಾಗೂ ನಮ್ಮ ಭಾರತೀಯ ಭಯೋತ್ಪಾದನೆಯ ಪಿತಾಮಹ ಅಡ್ವಾನಿಗೂ ಮೂಲತಃ ವ್ಯತ್ಯಾಸಗಳಿಲ್ಲ, ಕಿತಾಪತಿ ಮಾಡಲು ತಮ್ಮ ಬೆಂಬಲಿಗರನ್ನು ಹುರಿದುಂಬಿಸಿ ಅನಾಚಾರ ನಡೆಸಿ ತಮ್ಮ ಬೇಳೆ ಬೆಂದಾದ ಬಳಿಕ ತಮ್ಮನ್ನು ನಂಬಿದವರನ್ನು ನಡುನೀರಲ್ಲಿ ಕೈಬಿಟ್ಟರೂ ತಾವು ಅದನ್ನು ಮಾಡೇ ಇಲ್ಲ, ತಮಗೂ ಅದಕ್ಕೂ ಸಂಬಂಧವೇ ಇಲ್ಲ ಎಂದು ಹೇಳಿ ಜಾರಲು ಯತ್ನಿಸುವ ಎರಡು ನಾಲಗೆಯ ಬುದ್ಧಿ ಇವರುಗಳದು. ಲಿಬರ್ಹಾನ್ ವರದಿ ಸದ್ಯದಲ್ಲೇ ಬರಲಿದೆ ಎಂದೂ, ಆಗ ತಮ್ಮಲ್ಲಿ ಮುಖವಾಡ ಕಳಚಲಿದೆ ಎಂದೂ, ತಾನೊಬ್ಬ ಸುಭಗನೆಂದು ತೋರಲು ಇತ್ತೀಚೆಗೆ ಅಡ್ವಾನಿ ಬಾಬ್ರಿ ಮಸೀದಿ ಧ್ವಂಸ ಒಂದು ರಾಷ್ಟ್ರೀಯ ಅವಮಾನ ಎಂದಿದ್ದ. ತಾನೇ ಚಿವುಟಿ ತಾನೇ ತೊಟ್ಟಿಲು ತೂಗೋ ಈ ಎರಡು ನಾಲಗೆಯ ವಿಷಜಂತುಗಳನ್ನು ಈ ವರದಿಯನ್ನಾಧರಿಸಿ ಬೇಗ ಜೈಲಿಗೆ ತಳ್ಳಬೇಕು. ಅದೇ ರೀತಿ ಗಣಿಕಳ್ಳರಿಗೆ ರಾಜ್ಯವನ್ನು ಅರ್ಪಿಸಿ ಪರಮಭ್ರಷ್ಟರು ಯಾರೆಂಬುದೂ ಇದೀಗ ಸಾಬೀತಾ ಗಿದೆ.

ಭ್ರಷ್ಟಾಚಾರ-ಭಯೋತ್ಪಾದನೆ ವಿರುದ್ಧದ ಹೋರಾಟಗಾರ, ದೇಶಭಕ್ತಿ ಯಲ್ಲಿ ಥೇಟ್ ಸುಭಾಸ್‌ಚಂದ್ರರ ಜೆರಾಕ್ಸ್ ತಾನೆಂದು ಭಾವಿಸಿರುವ, ಲೆಕ್ಕ ಕೊಡಿ ಚಳವಳಿ ಆರಂಭಿಸಿ ತಾನೋರ್ವ ಉಗ್ರ ಪ್ರತಾಪಿ ಎಂದೆಲ್ಲ ಬಿಂಬಿತನಾಗಿದ್ದ ಬಿಜೆಪಿ ಯುವ ಮೋರ್ಚಾದ ಅಧ್ಯಕ್ಷ ಇದೀಗ ಕಡ್ಲೆಕಾಯಿ ತಿಂತಿದ್ದಾನೋ ಹೇಗೆ?

ಕಾಂಗ್ರೆಸ್ ಇರಲಿ, ಯಾವುದೇ ಸರಕಾರವಿರಲಿ ಗೆದ್ದೆತ್ತಿನ ಬಾಲ ಹಿಡಿಯುವ ಮಾಮೂಲಿ ಸಂಪ್ರದಾಯಕ್ಕೆ ವಿರುದ್ಧವಾಗಿ ಸಾಗುತ್ತಾ, ಜನರ, ನೊಂದವರ ನಿಜ ಪ್ರತಿನಿಧಿಯಂತೆ ನಿಲ್ಲುವ ಲಂಕೇಶರ ನೈಜ ಆಶಯಕ್ಕನುಗುಣವಾಗಿ ಮುನ್ನುಗ್ಗುತ್ತಿರುವ ಗೌರಿ ಲಂಕೇಶರ ಬಳಗಕ್ಕೆ, ಶುಭ ಹಾರೈಕೆಗಳು.

-ಎಸ್.ಎಸ್.ಗೇರುಕಟ್ಟೆ



ಕಳೆದವಾರ 'ಜೀ' ಟಿವಿಯ "ಬದುಕು ಜಟಕಾ ಬಂಡಿ' ಕಾರ್ಯಕ್ರಮದಲ್ಲಿ ಗೌರಿ ಲಂಕೇಶ್ ಅವರು ಮುತಾಲಿಕ್ ಹಾಗೂ ಪ್ರಮಿಳಾ ನೇಸರ್ಗಿಯವರ ಪೊಳ್ಳು ವಾದ ಗಳನ್ನು ಚೆನ್ನಾಗಿಯೇ ಬೆತ್ತಲೆ ಮಾಡಿದಿರಿ. ನೇಸರ್ಗಿ ವಕೀಲ ರಾಗಿದ್ದೂ ಅವರ ಕಾನೂನಿನ ಅಜ್ಞಾನ ಸಹ ತಾವು ಬಹಿ ರಂಗಪಡಿಸಿದ್ದು ತುಂಬಾ ಉತ್ತಮ. ಜೀಟಿವಿಯವರು ಎಡಿಟ್ ಮಾಡಿದ್ದ ಭಾಗಗಳನ್ನು ತಾವು ಈ ವಾರ ತಮ್ಮ ಸಂಪಾದಕೀಯದಲ್ಲಿ ಬರೆದದ್ದು ತುಂಬಾ ಒಳ್ಳೆಯದಾಯಿತು. ಇಲ್ಲದಿದ್ದರೆ ತಮ್ಮ ವಾದದ ಪ್ರಮುಖ ಭಾಗವೇ ಜನರಿಗೆ ತಿಳಿಯುತ್ತಲೇ ಇರಲಿಲ್ಲ. ಆ ದಿನದ ಚರ್ಚೆಯ ಪ್ರಮುಖ ವಿಷಯವಾದ 'ಲವ್ ಜಿಹಾದ್'ನ ನಡುವೆ "ಮುಸ್ಲಿಮ ರಲ್ಲಿ ಅಪರಾಧ ಪ್ರವೃತ್ತಿ ರಕ್ತಗತವಾಗಿದೆ" ಎಂಬ ವಾಕ್ಯವನ್ನು ಒಂದೆಡೆ ಮುತಾಲಿಕ್ ಉಪಯೋಗಿಸಿದ್ದನ್ನು ಯಾರೂ ಅಷ್ಟಾಗಿ ಗಮನಿಸಲಿಲ್ಲ.

'ಹೊಸ ದಿಗಂತ' ಪತ್ರಿಕೆಯ ಅಕ್ಟೋಬರ್ 26ರ ಸಂಚಿಕೆಯಲ್ಲೂ 'ಮುಸ್ಲಿಂ ಸಮಾಜದಲ್ಲಿ ಅಪರಾಧ ಪ್ರವೃತ್ತಿ ಹೆಚ್ಚು' ಎಂದು ಸಮರ್ಥಿಸುವ ಒಂದು ದೊಡ್ಡ ಲೇಖನ ಪ್ರಕಟ ವಾಗಿತ್ತು, ಅದನ್ನು ತಪ್ಪೆಂದು ಸಾಕ್ಷಿ ಸಹಿತ ನಾವು ಬರೆದ ಪತ್ರಗಳು 'ಹೊಸ ದಿಗಂತ' ಪತ್ರಿಕೆಯ ಸಂಪಾದಕರ ಕಸದಬುಟ್ಟಿ ಸೇರಿತ್ತು, ನಾವು ಬರೆದಿದ್ದೇನೆಂದು ಸಂಕ್ಷಿಪ್ತವಾಗಿ ಇಲ್ಲಿ ಹೇಳಬಯಸುತ್ತೇನೆ:

ಇತ್ತೀಚೆಗೆ ಸಿಕ್ಕಿಬಿದ್ದಿರುವ, 21 ಮಹಿಳೆಯರ ಕೊಲೆಗೈದ ಬಂಟವಾಳದ ಸೈನೈಡ್ ಶಿಕ್ಷಕ ಮೋಹನನೆಂಬ ಭಯಾನಕ ಸೈತಾನ ಮುಸ್ಲಿಮನಲ್ಲ, ಬಳ್ಳಾರಿಯ ಗಣಿ ಮಾಫಿಯಾ ಮತ್ತು ಬೆಂಗಳೂರಿನ ರಿಯಲ್ ಎಸ್ಟೇಟ್ ಮಾಫಿಯಾದಲ್ಲೂ ಇರುವವರು ಮುಸ್ಲಿಮರ ಬದಲಾಗಿ ತೆಲುಗು ಮೇಲ್ಜಾತಿ ಹಿಂದೂಗಳು. ತೆಲುಗು ಮಾಫಿಯಾವಾಗಲಿ, ಸೈನೈಡ್ ಮೋಹನನಾಗಲಿ ತಮ್ಮ ಕೆಟ್ಟ ಕೆಲಸಕ್ಕೆ ಹೊರಡುವ ಮೊದಲ ದೇವಸ್ಥಾನಗಳಲ್ಲಿ ಗಡದ್ದಾಗಿ ಪೂಜೆ ಸಲ್ಲಿಸಿಯೇ ಹೊ ಡುವುದು. ತಮ್ಮ ಕೆಟ್ಟ ಕೆಲಸಕ್ಕೆ ಮುಂಚಿತವಾ ದೇವರಿಗೆ ಲಂಚ ಕೊಟ್ಟು ತಮ್ಮ ದುಷ್ಟ ಕೆಲಸದ 'ದೇವರನ್ನೂ ಪಾರ್ಟನರ್' ಮಾಡಿಕೊಳ್ಳುವ ಹುನ್ನಾ ಇದು! ಅಪರಾಧಿಗಳೂ ಎಲ್ಲ ಸಮುದಾಯಗಳಲ್ಲ ಇರುತ್ತಾರೆ. ನಮ್ಮದೇ ಕರಾವಳಿ ಜಿಲ್ಲೆಗಳಲ್ಲಿ ಮಧ್ಯ ಜಾತಿಗಳಾದ ಬಿಲ್ಲವ ಹಾಗೂ ಬಂಟ ಜಾತಿಯ ಜನರು ಪೊಲೀಸ್ ರೆಕಾರ್ಡ್‌ಗಳಲ್ಲಿ ಇತರೆ ಸಮುದಾಯ ದವರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾನ ಪಡೆದಿರುವುದ ಇದಕ್ಕೆ ಒಂದು ಉದಾಹರಣೆ.

ಜಗತ್ತಿನ ಬೇರಾವ ದೇಶದಲ್ಲೂ ಇರದ ಅಮಾನುಷ ಜಾತಿ ಶೋಷಣೆ, ಹಿಂದೂ ದೇವಸ್ಥಾನಗಳ ದೇವರ ಎದುರಲ್ಲೇ ಪುರೋಹಿತರಿಂದ ಮುಗ್ಧ ಭಕ್ತ ಮೋಸ-ಸುಲಿಗೆ, ಜ್ಯೋತಿಷ್ಯ ಹಾಗು ವಾಸ್ತು ಪಂಡಿ ರಿಂದ ಮೌಢ್ಯ ಹರಡುವಿಕೆ, ದೇವರ ಹೆಸರಲ್ಲಿ ಮಹಿ ಯರ (ದೇವದಾಸಿ) ಅಮಾನುಷ ಲೈಂಗಿಕ ಶೋಷ ಇವೆಲ್ಲಾ ಅಪರಾಧದ ವರ್ಗದಲ್ಲಿ ಸೇರುತ್ತವೆ. ಅಷ್ಟೇ ಅಲ್ಲ, ಇವೆಲ್ಲ ಯಾವ ಧರ್ಮದಲ್ಲಿ ನಡೆಯುತ್ತಿ ಎಂಬುದನ್ನು ಹಿಂದೂತ್ವವಾದಿಗಳು ಎಣಿಸಿ-ಗುಣಿ ಹೇಳಬೇಕಿದೆ.

-ಕೆ.ಎಂ.ಆಸಿಫ್. ಮಂಗಳೂರು

ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ಸುದಿ/ಬರಹದಲ್ಲಿ lankesh70@rediffmail.comಗೆ ಕಳಿಸಬಹುದು

ಕನ್ನಡಿಗರ 'ಪಾ'ಪ!

ಅಪ್ಪ ಅಮಿತಾಭ್ ಮತ್ತು ಮಗ ಅಭಿಷೇಕ್ ಬಚ್ಚನ್ 'ಪಾ' ಎಂಬ ...ದಲ್ಲಿ ಮಗ ಮತ್ತು ಅಪ್ಪನಾಗಿ ನಟಿಸಿರುವುದು ಈಗ ಎಲ್ಲರಿಗೂ ...ದೆ. 'ಪ್ರೊಜೆರಿಯಾ' ಎಂಬ ವಂಶವಾಹೀ ಕಾಯಿಲೆಯಿಂದ ಬಳಲುವ ...ವರ್ಷದ ಪೋರನಾಗಿ ಅಮಿತಾಭ್ ಆ ಚಿತ್ರದಲ್ಲಿ ನಟಿಸಿ ಎಲ್ಲರ ...ನ ಸೆಳೆದಿದ್ದಾರೆ.

...ಆದರೆ, ವಿಷಯ ಇದಲ್ಲ!


...ಈ ಚಿತ್ರವನ್ನು ಕನ್ನಡದಲ್ಲಿ ರಿಮೇಕ್ ಮಾಡಿದರೆ, ಅದರಲ್ಲಿ ಯಾವ್ಯಾವ ರಿಯಲ್ ಅಪ್ಪ-ಮಗ ನಟಿಸಬಹುದು ಎಂಬ ಹೊಸ ಲೆಕ್ಕಾಚಾರವನ್ನು ಗಾಂಧಿನಗರದ ಕೆಲವು ಕಿಡಿಗೇಡಿಗಳು ಮಾಡುತ್ತಿದ್ದಾರೆ.



ಜಗ್ಗೇಶ್ ಮತ್ತು ಅವರ ಮಗ ಗುರುರಾಜ, ದೇವರಾಜ್-ಪ್ರಜ್ವಲ್, ಕಾಶಿನಾಥ್-ಆಲೋಕ್, ಮದನ್‌ಮಲ್ಲು-ಮಯೂರ್ ಪಟೇಲ್, ಶ್ರೀನಿವಾಸ ಮೂರ್ತಿ-ನವೀನ್ ಕೃಷ್ಣ.. ಇವರೆಲ್ಲರಿಗಿಂತ ಆ ಕಿಡಿಗೇಡಿಗಳ ಪ್ರಥಮ ಆದ್ಯತೆ ಎಸ್. ನಾಣಿ ಮತ್ತು ಅವರ ಪುತ್ರರತ್ನ ಪಂಕಜ್‌ಗಂತೆ! ಈ ಅನ್ನಿಸಿಕೆ ಅದ್ಯಾವ ಬಡಪಾಯಿ ನಿರ್ಮಾಪಕನಿಗೂ ಬಾರದಿರಲಿ ಎಂಬುದು ನಮ್ಮ ಆಶಯ!!

'ರಾಮ್'ನಿಂದ 'ಪುನೀತ'ರಾದವರು!

'ಆನೆ ಬೆಲೆ' ಅನ್ನೋ ಮಾತು ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್‌ಗೆ ಅಕ್ಷರಶಃ ಅನ್ವಯವಾಗುತ್ತದೆ.




ಪುನೀತ್ ಅಭಿನಯದ 'ರಾಜ್ ದಿ ಶೋ ಮ್ಯಾನ್' ಎಂಬ ಚಿತ್ರ ಯಾರೂ ನಿರೀಕ್ಷಿಸದ ರೀತಿಯಲ್ಲಿ ಹೊಗೆ ಹಾಕಿಸಿಕೊಂಡರೂ ಪುನೀತ್‌ಗಿರುವ ಮಾರ್ಕೆಟ್ ಆಗಲಿ, ಕ್ರೇಜ್ ಆಗಲಿ ಕಡಿಮೆಯಾಗಿಲ್ಲ. 'ಪುನೀತ್ ಪವರ್'ಅನ್ನು ಸಾಕ್ಷೀಭೂತಗೊಳಿಸುವಂತೆ ಆತ ನಟಿಸಿರುವ, 'ಗಜ' ಖ್ಯಾತಿಯ ಮಾದೇಶ್ ನಿರ್ದೇಶನದ 'ರಾಮ್' ಚಿತ್ರಕ್ಕೆ ಸದ್ಯ ಗಾಂಧಿನಗರದಲ್ಲಿ ಅಪಾರ ಬೇಡಿಕೆ ಬಂದಿದೆ.

ಬಕೆಟ (ಬೆಂಗಳೂರು-ಕೋಲಾರ-ತುಮಕೂರ್) ವಲಯದ ಹಂಚಿಕೆಗಾಗಿ ಮೂರ್‍ನಾಲ್ಕು ಜನರ ಮಧ್ಯೆ ಪೈಪೋಟಿ ನಡೆಯುತ್ತಿದ್ದರೂ ತೆಲುಗಿನ 'ಮಗಧೀರ' ಚಿತ್ರದ ವಿತರಕ ವಿಜಯಕುಮಾರ್ ಅವರಿಗೇ 'ರಾಮ್'ನ ಡಿಸ್ಟ್ರಿಬ್ಯೂಷನ್ ಕೈಸೇರುವುದು ಬಹುತೇಕ ಖಚಿತವಾಗಿದೆ. ಯಾಕೆಂದರೆ ಹೀಗೆ 'ಹರಸಾಹಸ' ಮಾಡಿ ಈ ಚಿತ್ರದ ವಿತರಣೆಯ ಹಕ್ಕು ಪಡೆಯುವುದಕ್ಕೆ ವಿಜಯಕುಮಾರ್ ಕೊಟ್ಟಿರುವ ಆಫರ್ ಬರೋಬ್ಬರಿ ಮೂರು ಕೋಟಿ ರೂಪಾಯಿ ಮಾತ್ರ!

ಇನ್ನು ಮೈಸೂರು ಪ್ರಾಂತ್ಯಕ್ಕೆ ಎರಡು ಕೋಟಿ ರೂಪಾಯಿಗಳನ್ನು ಕೊಡಲು ಎಷ್ಟೋ ಜನ ಕಾತರದಿಂದ ಕಾಯುತ್ತಿದ್ದಾರೆ. ಸೋತರೂ, ಬೆಲೆ ಉಳಿಸಿಕೊಳ್ಳುವುದು ಎಂದರೆ ಇದೇ ಅಲ್ಲವೇ?

ಪರಿವರ್ತನೆ ಹಾದಿಯಲ್ಲಿ ರೈ

ನಟಿ ರಮ್ಯಾ ಕೈಕೊಟ್ಟ ವಿಚಾರದ ಬಗ್ಗೆ ಪತ್ರಕರ್ತರು ಪ್ರಶ್ನಿಸಿದಾಗ ಪ್ರಖ್ಯಾತ ನಟ ಮತ್ತು ಇದೀಗ ನಿರ್ದೇಶಕ ಪ್ರಕಾಶ್ ರೈ "ಸಿನಿಮಾ ನಮಗಿಂತ ದೊಡ್ಡದು. ಅದನ್ನು ಕಡೆಗಣಿಸುವವರು ನಮ್ಮ ತಂಡಕ್ಕೆ ಬೇಕಿಲ್ಲ. ಹೀಗಾಗಿ ರಮ್ಯಾ ಬದಲು ಅಮೂಲ್ಯಳನ್ನು ಆಯ್ಕೆಮಾಡಿಕೊಂಡಿದ್ದೇವೆ'' ಎಂದು ಹೇಳಿದ್ದಾರೆ.



ಪ್ರಕಾಶ್ ರೈ ಹೇಳುತ್ತಿರುವ ಈ ಮುತ್ತಿನಂತ ಮಾತಿನಲ್ಲಿ ಯಾವುದೇ ಹುಳುಕಿಲ್ಲ. ಆತ ಸ್ವತಃ ಒಬ್ಬ ನಿರ್ದೇಶಕನಾದ ಮೇಲೆ ಇಂಥ ಆಲೋಚನೆ ಮಾಡಿರುವುದು ನಿಜಕ್ಕೂ ಒಳ್ಳೆಯ ಬೆಳವಣಿಗೆಯೇ. ಆದರೆ ಇದೇ ಪ್ರಕಾಶ್ ರೈ ಈ ಹಿಂದೆ ಹಲವಾರು ನಿರ್ಮಾಪಕರನ್ನು, ನಿರ್ದೇಶಕರನ್ನು ರಮ್ಯಾಳಿಗಿಂತ ಹೆಚ್ಚು ಗೋಳು ಹೊಯ್ದುಕೊಂಡಿದ್ದಿದೆ. ಆ ಕಾರಣಕ್ಕೆ ತಮಿಳು ಮತ್ತು ತೆಲುಗು ಚಿತ್ರರಂಗದಿಂದ ಪ್ರಕಾಶ್ ರೈ ಮೂರ್‍ನಾಲ್ಕು ಬಾರಿ ಬಹಿಷ್ಕಾರ ಹಾಕಿಸಿಕೊಂಡಿದ್ದರು. ಈಗ ರೈ ಅದನ್ನೆಲ್ಲಾ ಮರೆತಿರುವಂತೆ ಕಾಣುತ್ತಿದೆ.

ಕಾಲ ಬಂದಾಗ ಎಲ್ಲರೂ ಬದಲಾಗುತ್ತಾರೆ ಎಂಬ ಮಾತು ನೆನಪಿಗೆ ಬರುತ್ತಿದೆ!

...ಂಜರ್ ...ne ನಲ್ಲಿ

ಲೂಸ್ ಮಾದ

...ಲೂಸ್ ಮಾದನ ತಲೆ ಮೇಲಿದ್ದ ...ಮಮ್ ಗ್ಯಾರೆಂಟಿ ನಟ' ಎಂಬ ಕಿರೀಟ ...ಧರೆಗುರುಳಿದೆ!


...ಳೆದ ವಾರ ಬಿಡುಗಡೆಯಾದ 'ರಾವಣ' ...ಲೂಸ್ ಮಾದ ಯಾನೆ ...ಗೇಶನ ಇಮೇಜನ್ನು ಡ್ಯಾಮೇಜು ...ರುವುದರಲ್ಲಿ ಈಗ ಯಾವ ...ಮಾನಗಳೂ ಉಳಿದಿಲ್ಲ.

...ಮಿಳಿನಲ್ಲಿ ನಿರ್ಮಾಣಗೊಂಡು ...ರ್ ಹಿಟ್ ಆಗಿದ್ದ 'ಕಾದಲ್ ...ಯೇನ್' ಚಿತ್ರವನ್ನು 'ರಾವಣ' ... ರಿಮೇಕ್ ಮಾಡಲು ಹೋಗಿ ...ದಿ ಎಕ್ಕುಟ್ಟಿಸಿದ್ದಾರೆ ಎಂದು ...ರಾ ಊಹಿಸಿರಲಿಲ್ಲ. ಹೀಗಾಗಿ ಮೂಲ ...ಗೂ ಇಲ್ಲಿನ 'ರಾವಣ'ನಿಗೂ ಅಜಗಜಾಂತರ ...ವಿದೆ. ಇದ್ದಕ್ಕಿದ್ದಂತೆ ಬರುವ ಐಟಂ ... ಪ್ಲೇಸ್‌ಮೆಂಟ್ ಸರಿ ಇಲ್ಲದ ...ಲೇಸ್ ಸಾಂಗುಗಳಿಂದ ನೋಡುಗರ ...ಲೆ 'ರಾವಣ' ರೋಡ್‌ರೋಲರ್ ...ತ್ತಾನೆ.

ನಿರ್ದೇಶಕ ಯೋಗೀಶ್ ಹುಣಸೂರು ಎಂಬ ವ್ಯಕ್ತಿ ಅದ್ಯಾವ ಪರಿ ಬರಗೆಟ್ಟಿದ್ದಾರೆಂದರೆ, ಚಿತ್ರದಲ್ಲಿ ಬರುವ ಹತ್ತು ಹನ್ನೆರಡು ನಿಮಿಷದ ಫ್ಲಾಷ್‌ಬ್ಯಾಕ್ ದೃಶ್ಯಗಳನ್ನು ಯಥಾವತ್ತಾಗಿ ತಮಿಳಿನಿಂದ ತೆಗೆದು ಕಟ್ ಅಂಡ್ ಪೇಸ್ಟ್ ಮಾಡಿದ್ದಾರೆ. ಕನ್ನಡದಲ್ಲಿ ಡಬ್ಬಿಂಗ್ ಮಾಡಬಾರದು ಎಂದು ಗೊತ್ತಿದ್ದರೂ ಹೀಗೆ ಹತ್ತಾರು ನಿಮಿಷದ ದೃಶ್ಯಗಳನ್ನು ಡಬ್ಬಿಂಗ್ ಮಾಡಿ ಬಳಸಿರುವುದನ್ನು ಛೇಂಬರ್‌ನವರಾಗಲಿ, ಚಿತ್ರೋದ್ಯಮದ ಯಾರೇ ಆಗಲಿ ಪ್ರಶ್ನಿಸದೇ ಇರುವುದು ಯಾಕೆಂಬುದೇ ಗೊತ್ತಾಗುತ್ತಿಲ್ಲ.



ಇದೆಲ್ಲ ಒಂದು ರೀತಿಯದ್ದಾದರೆ, ಚಿತ್ರದ ಪಬ್ಲಿಸಿಟಿ ಪೋಸ್ಟರ್‌ಗಳಲ್ಲಿ 'ರಾವಣ'ನನ್ನು ಕ್ಲಾಸ್ ಚಿತ್ರದ ಹಾಗೆ ಬಿಂಬಿಸಿರುವುದರಿಂದ ಲೂಸ್ ಮಾದನ ಮಾಸ್ ಅಭಿಮಾನಿಗಳು ಬಿಡುಗಡೆಯ ದಿನವೂ ಥಿಯೇಟರಿನ ಕಡೆ ಸುಳಿದಿಲ್ಲ. ಹೀಗಾಗಿ ಬಿಡುಗಡೆಯಾದ ಒಂದೇ ವಾರಕ್ಕೇ ಚಿತ್ರಮಂದಿರ ಬಿಕೋ ಎನ್ನುತ್ತಿದೆ.



ಒಟ್ಟಾರೆಯಾಗಿ 'ರಾವಣ'ನೊಂದಿಗೆ ಲೂಸ್ ಮಾದ ನಟಿಸಿದ ನಾಲ್ಕು ಚಿತ್ರಗಳು ದಬ್ಬಾಕಿಕೊಂಡು ಬಿದ್ದಿವೆ. ಶತದಿನೋತ್ಸವ ಆಚರಿಸಿಕೊಂಡ 'ನಂದ ನಂದಿತ' ಮತ್ತು 'ಅಂಬಾರಿ' ಚಿತ್ರಗಳ ನಂತರ ಬಂದ 'ಪ್ರೀತ್ಸೆ ಪ್ರೀತ್ಸೆ', 'ಮಿ. ಪೇಂಟರ್', 'ಯೋಗಿ' ಮತ್ತು ಈಗ 'ರಾವಣ'... ಹೀಗೆ ಯೋಗಿ ನಟಿಸಿದ ನಾಲ್ಕು ಚಿತ್ರಗಳು ತಿಂಗಳಿಗೊಂದರಂತೆ ಕೊನೆಯುಸಿರೆಳೆದಿವೆ.

ಇದರಿಂದ ಯೋಗೀಶ್ ನಟಿಸಿ, ಬಹುಪಾಲು ಬಿಡುಗಡೆಗೆ ಸಿದ್ಧವಾಗಿರುವ 'ಧೂಳ್', 'ಪುಂಡ', 'ದೇವ್‌ದಾಸ್' ಚಿತ್ರಗಳ ನಿರ್ಮಾಪಕರು ಸಹಜವಾಗೇ ಆತಂಕಗೊಂಡಿದ್ದಾರೆ. ಇನ್ನು ಚಿತ್ರೀಕರಣದ ಹಂತದಲ್ಲಿರುವ 'ಯಕ್ಷ'ದ ನಿರ್ಮಾಪಕ ಯೋಗಿಯ ತಂದೆ ಟಿ.ಪಿ. ಸಿದ್ದರಾಜು ಅವರೇ ಆಗಿರುವುದರಿಂದ ಅಷ್ಟೇನೂ ತಲೆಕೆಡಿಸಿಕೊಳ್ಳುವ ಹಾಗಿಲ್ಲ.

'ನಂದ ಲವ್ಸ್ ನಂದಿತ' ಚಿತ್ರದಲ್ಲಿ ಹೆಣ ಹೊರುವವನಾಗಿ, 'ಅಂಬಾರಿ'ಯಲ್ಲಿ ಚಪ್ಪಲಿ ಹೊಲೆಯುವ ಚಮ್ಮಾರನಾಗಿ, 'ಯೋಗಿ' ಚಿತ್ರದಲ್ಲಿ ಮಿಲ್ಟ್ರಿ ಹೋಟೆಲ್ ಸಪ್ಲೈಯರ್ ಆಗಿ ಕಾಣಿಸಿಕೊಂಡು ಕೆಳವರ್ಗದ ಯುವಕರ ಪ್ರತಿನಿಧಿಯಾಗಿದ್ದ ಯೋಗೇಶನಿಗೆ 'ರಾವಣ' ಭಾರೀ ಪೆಟ್ಟು ನೀಡಿದ್ದಾನೆ. ಹೀರೋ ಮೆಟೀರಿಯಲ್ ಅಲ್ಲದಿದ್ದರೂ, ತನ್ನ ಪಡ್ಡೆ ಲುಕ್ಕಿನೊಂದಿಗೆ ಸಹಜ ಮತ್ತು ಸಾಧಾರಣ ನಟನೆಯಿಂದ ಎಲ್ಲರ ಗಮನ ಸೆಳೆದ ಯೋಗಿ ಇನ್ನು ಮುಂದೆ ಉತ್ತಮ ಸಿನಿಮಾಗಳನ್ನು ಆಯ್ಕೆ ಮಾಡಿಕೊಳ್ಳುವ ಅನಿವಾರ್ಯತೆಯಿದೆ.

ಕೇವಲ ಸಂಭಾವನೆ ಮತ್ತು ಸಂಖ್ಯೆಗಳನ್ನು ಏರಿಸಿಕೊಳ್ಳುವ ಉದ್ದೇಶಗಳೇ ಮುಖ್ಯವಾದರೆ, ಲೂಸ್ ಮಾದ ಕೂಡ ಹತ್ತರಲ್ಲಿ ಹನ್ನೊಂದನೆಯವನಾಗಿ ಜನರ ಮನಸ್ಸಿನಿಂದ ದೂರವಾದರೆ ಅದಕ್ಕೆ ಆತನಲ್ಲದೆ ಬೇರೆ ಯಾರೂ ಹೊಣೆಗಾರರಲ್ಲ.

● ಅರುಣ್

...ಸೆಟ್ ರಿಲೀಸ್‌ನಲ್ಲಿ 'ಕಪಿ ಗಾಳಿ'!

...ವೇಗೌಡರ ಮಕ್ಕಳಾದ ವಿಜಯರಾಘವೇಂದ್ರ ಮತ್ತು ಮುರಳಿ ...ವಾಗಿ ಯಾವುದೇ ವಿವಾದ ಅಥವಾ ಗಾಸಿಪ್‌ಗಳಲ್ಲಿ ಸಿಲುಕಿ ...ದಿಲ್ಲ.

...ರೆ ಈ ಬಾರಿ ಮುರಳಿ ತಾನು ನಟಿಸಿರುವ 'ಕಪಿ ಗಾಳಿ' ಚಿತ್ರದ ... ಬಿಡುಗಡೆ ಕಾರ್ಯಕ್ರಮಕ್ಕೆ ಹಾಜರಾಗದೇ ಸಣ್ಣದೊಂದು ...ನ್ನು ಮೈಮೇಲೆಳೆದುಕೊಂಡಿದ್ದಾರೆ.



ಮೊನ್ನೆ ದಿನ ಇಡೀ ಚಿತ್ರತಂಡದವರು ಸೇರಿ ಮಲ್ಲೇಶ್ವರಂನ ಜಿ.ಎಂ. ರಿಜಾಯ್ಸ್‌ನಲ್ಲಿ ಚಿತ್ರದ ಕ್ಯಾಸೆಟ್ ಬಿಡುಗಡೆ ಸಮಾರಂಭವನ್ನು ಏರ್ಪಡಿಸಿದ್ದರು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಛಾಲೆಂಜಿಂಗ್ ಸ್ಟಾರ್ ದರ್ಶನ್ ಮೈಸೂರಿಗೆ ತೆರಳುವ ಕಾರ್ಯಕ್ರಮವಿದ್ದರೂ ಆತ ಕಾರ್ಯಕ್ರಮಕ್ಕೆ ಬಂದು 'ಕಪಿ ಗಾಳಿ'ಯ ಹಾಡುಗಳನ್ನು ಬಿಡುಗಡೆ ...ದ. ಆದರೆ ಚಿತ್ರದ ನಾಯಕ ಮುರಳಿ ಮಾತ್ರ ಅಲ್ಲಿ ಪ್ರತ್ಯಕ್ಷವಾಗಲೇ ...ಲ್ಲ. ಆತ ಗೈರುಹಾಜರಾದ ಅದೇ ದಿನ ಬೆಳಿಗ್ಗೆ ದಯಾಳ್ ...ನದ 'ಶ್ರೀಹರಿಕಥೆ' ಚಿತ್ರದ ಪತ್ರಿಕಾಗೋಷ್ಠಿಯಲ್ಲಿ ಕಾಣಿಸಿಕೊಂಡಿದ್ದು ...ದಕ್ಕೆ ಮತ್ತಷ್ಟು ತುಪ್ಪ ಸುರಿದಂತಾಗಿದೆ.

...ರಿ ಮುರಳಿಯ ಈ ನಡವಳಿಕೆಯ ಹಿಂದಿನ ಗುಟ್ಟು ಮಾತ್ರ ...ಬಹಿರಂಗವಾಗಿಲ್ಲ.

ಗಣಿ ರೆಡ್ಡಿಯ 'ಮಂದಹಾಸ'!

ಗಣಿ ರೆಡ್ಡಿ ಎಂದಾಕ್ಷಣ ಜನಾರ್ದನ ರೆಡ್ಡಿ ಮತ್ತವರ ಗ್ಯಾಂಗನ್ನು ನೆನಪಿಸಿಕೊಳ್ಳಬೇಡಿ.

ಶಿವಧ್ವಜ್ ನಿರ್ದೇಶನದ 'ನೀನೇ ನೀನೇ' ಎಂಬ ಸಿನಿಮಾವನ್ನು ನಿರ್ಮಿಸಿದ್ದ ಬಳ್ಳಾರಿಯ ಬಸವ ರೆಡ್ಡಿ ಈಗ ಮತ್ತೊಂದು ಚಿತ್ರವನ್ನು ನಿರ್ಮಿಸಲು ಬಂದಿದ್ದಾರೆ.



ತಾವು ನಿರ್ಮಿಸಿದ್ದ ಮೊದಲ ಚಿತ್ರದ ಕ್ಯಾಸೆಟ್ ಬಿಡುಗಡೆಗೆ ಜನಾರ್ದನ ರೆಡ್ಡಿ, ಶ್ರೀರಾಮುಲು ರಂಥ ಗಣಿ ಧಣಿಗಳನ್ನು ಕರೆಸಿದ್ದ ಬಸವ ರೆಡ್ಡಿ ಈಗ ತಮ್ಮ ಎರಡನೇ ಚಿತ್ರ 'ಮಂದಹಾಸ'ಕ್ಕೆ ಅಶೋಕ ಹೋಟೆಲ್‌ನಲ್ಲಿ ಮುಹೂರ್ತ ನಡೆಸಿ, ಮೊದಲ ದೃಶ್ಯಕ್ಕೆ ಕ್ಲಾಪ್ ಹೊಡೆಯಲು ರಾಜ್ಯಪಾಲ ಭಾರಧ್ವಾಜರನ್ನೇ ಕರೆಸುತ್ತಿದ್ದಾರೆ. ಜೊತೆಗೆ ಚಿತ್ರರಂಗದ ಎಲ್ಲ ಘಟಾನುಘಟಿಗಳು 15ನೇ ತಾರೀಖು ನಡೆಯುವ ಮುಹೂರ್ತಕ್ಕೆ ಬಂದು 'ಮಂದಹಾಸ' ಬೀರಲಿದ್ದಾರಂತೆ.

ಇಷ್ಟು ದಿನ ಪತ್ರಿಕಾ ಛಾಯಾಗ್ರಾಹಕರಾಗಿ, ಸಿನಿಮಾ ವಿತರಕರಾಗಿ, ಕೆಲವೊಮ್ಮೆ ಹೊಸ ನಿರ್ಮಾಪಕರಿಗೆ 'ಮಾರ್ಗದರ್ಶಕ'ರಾಗಿದ್ದ ಕೆ.ಎಂ. ವೀರೇಶ್ ಈಗ ಈ ಚಿತ್ರಕ್ಕೆ ಕಾರ್ಯಕಾರಿ ನಿರ್ಮಾಪಕರಾಗುವುದರೊಂದಿಗೆ ಮತ್ತೊಂದು ಅವತಾರವೆತ್ತಿದ್ದಾರೆ.

ಇದು ಕಥೆಯಲ್ಲ ಜೀವನ

ಇದು ನಟಿ ಲಕ್ಷ್ಮಿ ನಿರೂಪಿಸುತ್ತಿರುವ ಕಾರ್ಯಕ್ರಮವಲ್ಲ, ಹೊಸ ಚಿತ್ರವೊಂದರ ಹೆಸರು!

ಇಷ್ಟುದಿನ ಪಾಪ್ಯುಲರ್ ಆದ ಹಾಡಿನ ಸಾಲುಗಳನ್ನೇ ಸಿನಿಮಾ ಶೀರ್ಷಿಕೆಯನ್ನಾಗಿ ಮಾಡುತ್ತಿದ್ದ ಟ್ರೆಂಡ್ ಸ್ವಲ್ಪ ಬದಲಾಗಿ ಯಶಸ್ವಿಯಾದ ಟೀವಿ ಕಾರ್ಯಕ್ರಮಗಳ ಶೀರ್ಷಿಕೆಯನ್ನೇ ಸಿನಿಮಾ ಟೈಟಲ್‌ಅನ್ನಾಗಿಸುವ ಹೊಸ ಸಂಪ್ರದಾಯ ಆರಂಭವಾಗಿದೆ.



ಒಂದಷ್ಟು ಹಿರಿಯ ನಿರ್ದೇಶಕರೊಂದಿಗೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿರುವ ರವೀಂದ್ರ ಎಂಬ ಯುವಕ 'ಇದು ಕಥೆಯಲ್ಲ ಜೀವನ' ಎಂಬ ಹೊಸ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. 'ಮಚ್ಚು ಲಾಂಗುಗಳ ಸಿನಿಮಾಗಳ ಮಧ್ಯೆ ಮಾನವೀಯ ಮೌಲ್ಯದ ಸಿನಿಮಾ ಮಾಡುತ್ತಿದ್ದೇನೆ' ಎನ್ನುವ ರವೀಂದ್ರ ಈ ಸಿನಿಮಾಕ್ಕೂ ಮೊದಲು ಇಂತಹದ್ದೇ ಕಥೆಯನ್ನು ಹೊಂದಿದ್ದ 'ನಿರಾಕೃತ' ಎಂಬ ಕಿರುಚಿತ್ರವನ್ನು ಮಾಡಿ ಎಲ್ಲರಿಂದ ಪ್ರಶಂಸೆ ಪಡೆದಿದ್ದರು.

ಈಗ ಎಂ.ಎಸ್. ಮಂಜುನಾಥ್ ಅವರ 'ಒಲವೆ ಜೀವನ ಸಾಕ್ಷಾತ್ಕಾರ' ಎಂಬ ಸಣ್ಣ ಕಥೆಯನ್ನು ಆಧರಿಸಿ 'ಇದು ಕಥೆಯಲ್ಲ ಜೀವನ'ವನ್ನು ತೆರೆದಿಡಲು ಮುಂದಾಗಿದ್ದಾರೆ.

ಚಾಲಾಕಿ ಗಣೇಶನ ಚಾಟಿ ಇಲ್ಲದ ಬುಗುರಿ



ನಯಾಪೈಸೆಯ ಬಂಡವಾಳ ಹೂಡದಿದ್ದರೂ ಒಂದು ಸಿನಿಮಾವನ್ನು ಸುಲಭವಾಗಿ ನಿರ್ಮಿಸಿರುವ ಗಣೇಶ್ ತಾನೊಬ್ಬ ಚಾಲಾಕಿ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದಾನೆ. ಒಂದಿಷ್ಟು ಪ್ರತಿಭೆ ಮತ್ತು ಬದುಕಲು ಬೇಕಿರುವ ವ್ಯವಹಾರ ಜ್ಞಾನ ಇದ್ದರೆ ಚಾಟಿ ಇಲ್ಲದೆಯೂ ಬುಗುರಿ ಆಡಿಸಬಹುದು ಎಂಬುದಕ್ಕೆ ಗೋಲ್ಡನ್ ಸ್ಟಾರ್ ಗಣೇಶನಿಗಿಂತ ಒಳ್ಳೆ ನಿದರ್ಶನ ಉಂಟೇ?

'ಅತೀ ಬುದ್ಧಿವಂತಿಕೆ' ಅಂದರೆ ಇದೇ ಇದೇ ಇರಬೇಕು! ಅದು ಗೋಲ್ಡನ್ ಸ್ಟಾರ್ ಗಣೇಶನದು...

ಸಿನಿಮಾ ನಿರ್ಮಾಣವನ್ನೇ ಕಸುಬಾಗಿಸಿಕೊಂಡಿರುವ 'ಧೀರ' ನಿರ್ಮಾಪಕರೂ, ಗಾಂಧೀನಗರದ 'ಗಂಡುಗಲಿ'ಗಳೂ, ಮೈತುಂಬ ಸಾಲ ಮಾಡಿಕೊಂಡಿರುವ 'ಕೋಟಿ' ನಿರ್ಮಾಪಕರೂ ಇಂದು ಸಿನಿಮಾ ಪ್ರೊಡ್ಯೂಸ್ ಮಾಡಿ ಲಗಾಟ ಹೊಡೆದಿದ್ದಾರೆ. ಆದರೆ ಸಿನಿಮಾ ನಿರ್ಮಾಣದ ಗಂಧಗಾಳಿ ಗೊತ್ತಿಲ್ಲದ, ನಿನ್ನೆಮೊನ್ನೆಯ ನಾಯಕನಟ ಮಾತ್ರ ಆಗಿದ್ದ ಗಣೇಶ 'ಹೂ ಎತ್ತಿದ ಹಾಗೆ' ಸಿನಿಮಾ ತಯಾರಿಸಿ ಬಿಡುಗಡೆ ಮಾಡಿದ್ದಾನೆ.


ಗೋಲ್ಡನ್ ಸ್ಟಾರ್ ಗಣೇಶನ ಈ ಸಿನಿಮಾ 'ವ್ಯವಹಾರ'ವನ್ನು ನೋಡಿದರೆ ಈತ ಮಹಾನ್ ಬುದ್ಧಿವಂತ ಎನ್ನುವುದು ಮೇಲ್ನೋಟಕ್ಕೇ ಗೊತ್ತಾಗಿಬಿಡುತ್ತದೆ.

ಶೂನ್ಯ ಬಂಡವಾಳದಲ್ಲಿ 'ಮಳೆ' ಕೃಷಿ!

ಗಣೇಶ್ ನಟಿಸಿದ ಚಿತ್ರಗಳು ಇತ್ತೀಚೆಗೆ ಸಾಲುಸಾಲಾಗಿ ಸೋತಿರಬಹುದು. ಆದರೂ ಸದ್ಯದ ಮಟ್ಟಿಗೆ ತನ್ನ ಬೆಲೆ ಮತ್ತು ಬೇಡಿಕೆಯನ್ನು ಉಳಿಸಿಕೊಂಡಿರುವ ಕೆಲವೇ ಕೆಲವು ನಟರಲ್ಲಿ ಗಣೇಶ್ ಕೂಡ ಒಬ್ಬ ಎಂಬುದು ಸತ್ಯ. ಸಾಮಾನ್ಯವಾಗಿ ಬ್ಯುಸಿ ಇರುವ ಹೀರೋಗಳು ಸ್ವತಃ ಚಿತ್ರ ನಿರ್ಮಾಣಕ್ಕೆ ಇಳಿಯುವುದು ವಿರಳ. ಆದರೆ ಗಣೇಶ್ ಇನ್ಯಾರಿಗೋ ತನ್ನ ಕಾಲ್‌ಶೀಟ್ ಕೊಟ್ಟು, ತನಗೆ ಬರಬೇಕಾದ ಪೇಮೆಂಟ್‌ಗಾಗಿ ಅವರ ಹಿಂದೆ ಪರದಾಡುವ ಬದಲು ತಾನೇ 'ಗೋಲ್ಡನ್ ಮೂವೀಸ್' ಎಂಬ ನಿರ್ಮಾಣ ಸಂಸ್ಥೆಯನ್ನು ಸ್ಥಾಪಿಸಿದ್ದಾನೆ.

ಗಣೇಶನ ಈ ಹೊಸ ಬ್ಯಾನರ್ ಅಡಿ ನಿರ್ಮಾಣಗೊಂಡಿರುವ ಮೊದಲ ಚಿತ್ರವೇ 'ಮಳೆಯಲಿ ಜೊತೆಯಲಿ'. ಗಣೇಶ್ ಮತ್ತು ಆತನ ಪತ್ನಿ ಶಿಲ್ಪಾ ಈ ಚಿತ್ರದ ಮೂಲಕ ನಿರ್ಮಾಪಕರಾಗಿದ್ದಾರಾದರೂ ಅದನ್ನು ಅವರು ಶೂನ್ಯ ಬಂಡವಾಳ ಹೂಡುವ ಮೂಲಕ ಸಾಧಿಸಿದ್ದಾರೆಂಬುದೇ ಬಹಳ ಸೋಜಿಗದ ಸಂಗತಿ.

ಗಣೇಶ್ ನಟನೆಯ ಇದೇ ಚಿತ್ರವನ್ನು ಬೇರೊಬ್ಬ ನಿರ್ಮಾಪಕ ನಿರ್ಮಿಸಿದ್ದಿದ್ದರೆ ಗಣೇಶನ ಸಂಭಾವನೆ, ಮೆಂಟೇನೆನ್ಸ್, ವಿದೇಶದಲ್ಲಿ ಶೂಟಿಂಗು ಎಂದೆಲ್ಲ ಇತ್ಯಾದಿಗಳು ಸೇರಿ ಒಂದು ಚಿತ್ರಕ್ಕೆ ನಾಲ್ಕು ಕೋಟಿ ರೂಪಾಯಿಗಳು ವೆಚ್ಚವಾಗುತ್ತಿತ್ತು. ಆದರೆ 'ಮಳೆಯಲಿ ಜೊತೆಯಲಿ' ಚಿತ್ರಕ್ಕೆ ಖರ್ಚಾಗಿರುವ ಒಟ್ಟು ಒಂದು ಕೋಟಿ ತೊಂಭತ್ತು ಲಕ್ಷ ರೂ. ಮಾತ್ರ. ಆದರೆ ಈ ಹಣವನ್ನಾದರೂ ಗಣೇಶ್ ತನ್ನ ಕೈಯಿಂದ ಹಾಕಿಲ್ಲ!



ಯಾಕೆಂದರೆ ಈ ಚಿತ್ರದ ಆರಂಭಕ್ಕೆ ಮುಂಚೆಯೇ ಟೀವಿ ರೈಟ್ಸ್ ಎಂದು ಉದಯ ಟೀವಿಯವರಿಂದ ಒಂದು ಕೋಟಿ ಇಪ್ಪತ್ತಾರು ಲಕ್ಷ ರೂಪಾಯಿಗಳು ಗಣೇಶನ 'ಗೋಲ್ಡನ್ ಮೂವೀಸ್'ಗೆ ಸಂದಾಯವಾಗಿತ್ತು. ಅಷ್ಟೇ ಅಲ್ಲದೆ, ಉದಯ ಟೀವಿಯ ಮುಖ್ಯಸ್ಥ ವಿಜಯಕುಮಾರ್ ತನ್ನ ಸ್ನೇಹಿತ ಹಾಗೂ ಕಳಾಮಂದಿರ್ ಎಂಬ ಸೀರೆ ಅಂಗಡಿಯ ಎಂಡಿ ಕಲ್ಯಾಣ್ ಎಂಬಾತನಿಂದ ಈ ಚಿತ್ರಕ್ಕೆಂದು ಅರವತ್ತು ಲಕ್ಷ ಇನ್‌ವೆಸ್ಟ್ ಮಾಡಿಸಿದ್ದರು. ಉದಯ ಟೀವಿಯಲ್ಲಿ ಬರುವ 'ನೀರೆ ನಿನಗೊಂದು ಸೀರೆ' ಕಾರ್ಯಕ್ರಮವನ್ನು ಇದೇ ಕಳಾಮಂದಿರ್‌ನವರೇ ಪ್ರಾಯೋಜಿಸಿರುವುದರಿಂದ ಕಲ್ಯಾಣ್‌ನನ್ನು ಕರೆತಂದ ವಿಜಯಕುಮಾರ್ ಅವರಿಂದ 'ಮಳೆಯಿರಲಿ' ಚಿತ್ರಕ್ಕೆ ಹಣ ಹೂಡಿಸಿದ್ದರು. ಒಂದು ಹಂತದಲ್ಲಿ ಕಲ್ಯಾಣ್ ಚಿತ್ರದ 'ಸಹ ನಿರ್ಮಾಪಕ' ಎಂದು ಜಾಹೀರಾತಿನಲ್ಲಿ ಹೆಸರು ಹಾಕಿರಲಿಲ್ಲ ಎಂದು ಖ್ಯಾತೆ ತೆಗೆದರೂ ಕಡೆಗದು ವಿಜಯ್‌ಕುಮಾರ್‌ನ ಮಧ್ಯಸ್ಥಿಕೆಯಲ್ಲಿ ಬಗೆಹರಿದಿತ್ತು. ಇನ್ನು ಈ ಚಿತ್ರದ ಕಾರ್ಯಕಾರಿ ನಿರ್ಮಾಪಕ

ಮುಂಡ್ಕ ಕಿಟ್ಟಿ ಎಂಬ ಪ್ರಜೆಯೂ ಮೂವತ್ತು ... ರೂಪಾಯಿಯ ಹಣವನ್ನು 'ಮಳೆ'ಗ ಸುರಿದಿದ ...

ಅಲ್ಲಿಗೆ ಈ ಚಿತ್ರಕ್ಕೆಂದು ಗಣೇಶನ 'ಗೋ... ಮೂವೀಸ್' ಸಂಸ್ಥೆ ಕಲೆಕ್ಟ್ ಮಾಡಿದ ಹಣ ... ಎರಡೂ ಕಾಲು ಕೋಟಿ. ಇನ್ನು ಚಿತ್ರ ಬಿಡುಗಡೆ ... ಮುನ್ನ ಪಬ್ಲಿಸಿಟಿಗಾಗಿ ಗಣೇಶ್ ರೂಪದರ್ಶಿ ಆಗಿ... ರಿಲಾ ಯನ್ಸ್ ಮತ್ತು ಕೊಕೊಕೋಲಾ ಸಂಸ್ಥೆ... ನೆರವು ನೀಡಲು ಮುಂದಾಗಿವೆ. ಆದರೆ ... ಖರ್ಚಾಗಿ ರುವುದು ಕೇವಲ ಒಂದು ಕೋ... ತೊಂಬತ್ತು ಲಕ್ಷ. ಅಂದರೆ ಚಿತ್ರ ಬಿಡುಗ... ಮುನ್ನವೇ ಯಾವುದೇ ಹೂಡಿಕೆಯಿ... ಗಣೇಶನಿಗೆ ಇಪ್ಪತ್ತಾರು ಲಕ್ಷ ರೂಪಾಯಿ... ನಿವ್ವಳ ಲಾಭ ಬಂದಿದೆ! ಆಡಿಯೋ ಹ... ಒಳ್ಳೆಯ ರೇಟು ಕೊಟ್ಟು ಆನ... ಆಡಿಯೋದವರು ಖರೀದಿಸಿದ್ದಾ...

ಕಡಿಮೆ ಹೂಡಿಕೆ ಹೆ... ಲಾಭ!

'ಮಳೆಯಲಿ ಜೊತೆಯಲಿ' ... ದಲ್ಲಿ ಇಬ್ಬರು ನಾಯಕಿಯರಿ... ಆದರಲ್ಲಿ ಯುವಿಕಾ ಚೌಧ... ಐದು ಲಕ್ಷ ಹಾಗು ಅಂ... ಸುಖಾನಿಗೆ ಮೂರು ಲಕ್ಷ ಸಂ...ವನೆ ನೀಡಲಾಗಿದೆ, ಯಾವ ಫಾರಿನ್ ಲೊಕೇ...ಗಳಲ್ಲೂ ಚಿತ್ರೀಕರಣ ನಡೆಸದೆ ಕರ್ನಾಟಕದ ಮಡಿಕೆ... ಸಕಲೇಶಪುರ ಮತ್ತು ಬೆಂಗಳೂರುಗಳಲ್ಲೇ ಶೂಟಿ... ಮುಗಿದುಹೋಗಿದೆ. ಇನ್ನು ಗಣೇಶನ ಪತ್ನಿ ... ಇನ್ನು ಒಂದೊಂದು ಪೈಸೆಯನ್ನೂ ಅಳೆದು ತ... ಖರ್ಚು ಮಾಡಿದ್ದಾರೆ. ಉಳಿದಂತೆ 'ಮುಂಗಾರು ಮ... ದುಡಿದಿದ್ದ ತಂತ್ರಜ್ಞರೇ ಇಲ್ಲೂ ಇರುವುದರಿ... ಗಣೇಶನಿಂದ ಅವರ್‍ಯಾರೂ ದೊಡ್ಡಮಟ್ಟದ ಪಗಾರ... ಅಪೇಕ್ಷಿಸಿಲ್ಲ.

ಇವೆಲ್ಲದರ ಒಟ್ಟೊಟ್ಟಿಗೇ ಜಯಣ್ಣ ಫಿಲ... ಮೂಲಕ ಸ್ವತಃ ಗಣೇಶನೇ ಚಿತ್ರವನ್ನು ರಾಜ್ಯಾದ... ಹಂಚಿಕೆ ಮಾಡುತ್ತಿದ್ದಾನೆ. ಈ ವರ್ಷದ ಆರಂಭ... ಬಿಡುಗಡೆಯಾಗಿ ತೋಪೆದ್ದ 'ಸರ್ಕಸ್'ನಂತರ ಗಣೇ... ನಟಿಸಿರುವ ಯಾವ ಚಿತ್ರವೂ ಬಿ... ಗಡೆಯಾಗದೇ ಇರುವುದರಿ... 'ಮಳೆಯಲಿ ಜೊತೆಯಲಿ' ಹ... ಮೂಡಿಬಂದಿದ್ದರೂ ಒಳ್ಳೆ ... ನಿಂಗ್ ಪಡೆದು ಕನಿಷ್ಟ ಎರ... ಮೂರುವಾರ ಸಿನಿಮಾ ಥಿ... ಟರಿನಲ್ಲಿ ಕಚ್ಚಿಕೊಳ್ಳುವು... ಗ್ಯಾರೆಂಟಿ. ಆಗ ಬರುವ ಹಣದಲ್ಲಿ ಶೇರುದಾರ... ಅವರ ಪಾಲನ್ನು ಹಿಂತಿರುಗಿಸಿಬಿಟ್ಟರೆ, ಉಳಿಕೆ ಹ... ಗಣೇಶನೇ ವಾರಸುದಾರ.

ಚಾಲಾಕಿ ಹುಡುಗ!

ಹೀಗೆ ನಯಾಪೈಸೆಯ ಬಂಡವಾಳ ಹೂಡದಿದ್ದ... ಒಂದು ಸಿನಿಮಾವನ್ನು ಸುಲಭವಾಗಿ ನಿರ್ಮಿಸಿ... ಗಣೇಶ್ ತಾನೊಬ್ಬ ಚಾಲಾಕಿ ಎಂಬುದನ್ನು ಮತ್ತೊ... ಸಾಬೀತುಪಡಿಸಿದ್ದಾನೆ. ಒಂದಿಷ್ಟು ಪ್ರತಿಭೆ ಮ... ಬದುಕಲು ಬೇಕಿರುವ ವ್ಯವಹಾರ ಜ್ಞಾನ ಇ... ಚಾಟಿ ಇಲ್ಲದೆಯೂ ಬುಗುರಿ ಆಡಿಸಬಹು... ಎಂಬುದಕ್ಕೆ ಗೋಲ್ಡನ್ ಸ್ಟಾರ್ ಗಣೇಶನಿಗಿಂತ ... ನಿದರ್ಶನ ಉಂಟೇ?

● ಅರು...



ಮುದ್ದೆ ತಿಂತಾಳಂತೆ ಪೂಜಾ ಗಾಂಧಿ!

ಹತ್ತಿ ಮೂಟೆಯಂತೆ ಊದಿಕೊಂಡಿದ್ದ ಪೂಜಾ ಗಾಂಧೀ ಈಗೀಗ ತೆಳ್ಳಗೆ ಲಕಲಕ ಬಳುಕುತ್ತಿರುವುದರ ಗುಟ್ಟೇನು ಗೊತ್ತೆ?

ಬಡವರ ಆಹಾರ ರಾಗಿ ಮುದ್ದೆ!

'ಪಿಜ್ಜಾ, ಬರ್ಗರ್ ತಿಂದು ಬೊಜ್ಜು ಬರಿಸಿಕೊಳ್ಳುವುದಕ್ಕಿಂತ ರಾಗಿ ಮುದ್ದೆ ತಿಂದು ಸ್ಲಿಮ್ ಆಗೋದೇ ಲೇಸು' ಎಂದು ಪೂಜಾ ಗಾಂಧಿಗೆ ಅದ್ಯಾ... ಹಿತನುಡಿ ಹೇಳಿದರಂತೆ. ಅವತ್ತಿಂದ ರಾಗಿ ಮುದ್ದೆ ಉಣ್ಣಲು ಶುರುಮಾಡಿದ ಪೂಜಾ ಈಗ ಸ್ಲಿಮ್ ಆಗಿಬಿಟ್ಟದ್ದಾರೆ.

ರಾತ್ರಿ ಹಾಗೂ ಮಧ್ಯಾಹ್ನದ ಊಟಕ್ಕೆ ರಾಗಿ ಮುದ್ದೆಯನ್ನೇ ಸೇವಿಸುವ ಪೂಜಾ ಅದಕ್ಕಾಗಿ ತಮ್ಮ ಮನೆಯಲ್ಲಿ ಒಬ್ಬಾಕೆಯನ್ನು ಕೆಲಸಕ್ಕಿಟ್ಟುಕೊಂಡಿದ್ದಾ... ಮುದ್ದೆಯನ್ನು ಮುರಿದು ನುಂಗುವುದು ಪೂಜಾಳಿಗೆ ಈಗ ಕರಗತವಾಗಿಬಿಟ್ಟದೆಯಂತೆ. ಆದರೆ ಆಕೆಯ ತಂಗಿ ಮತ್ತು ತಾಯಿಗೆ ಮುದ್ದೆ ನುಂಗುವ... ಬಾರದಿರುವುದರಿಂದ ಅವರಿಬ್ಬರೂ ರಾಗಿ ದೋಸೆ ತಿನ್ನುತ್ತಾರಂತೆ.

'ಹಿಟ್ಟಂ ತಿಂದಂ ಬೆಟ್ಟಂ ಕಿತ್ತಿಟ್ಟಂ' ಎನ್ನುವ ಹಾಗೆ ಮುದ್ದೆ ಪ್ರಿಯೆ ಪೂಜಾ ಇನ್ನು ಮುಂದೆ ಅದೇನು ಸಾಧಿಸುತ್ತಾಳೋ ನೋಡಬೇಕು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-4...